
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 27 ಸಂಚಿಕೆ 44 ಅಕ್ಟೋಬರ್ 30, 2005 ಬೆಲೆ ರೂ. 3.00








ಕಾಶ್ಮೀರ : ಭಯೋತ್ಪಾದಕರ ಬರ್ಬರ ದಾಳಿಗಳು



ವಿಶ್ವಬ್ಯಾಂಕ್ ವರದಿ ಜಾಗತೀಕರಣದ ಭ್ರಷ್ಟತೆ



ಇನ್ನಿಲ್ಲ..... ಕಾಮ್ರೇಡ್ ಮುಲ್ಲಾ

ಮುಷ್ಕರದತ್ತ ಮೈಕೊ ಕಾರ್ಮಿಕರು



- ಬಡವರಿಂದ ಬಲುದೂರ, ಈ ದಸರಾ
- ಬೀದಿಗೆ ಬಿದ್ದ ಕಾಂಗ್ರೆಸ್ ಕದನ
- ನ್ಯಾಯಾಲಯದ ತೀರ್ಪುಗಳು – ಶಿಕ್ಷಣದ ಭವಿಷ್ಯ

ಹಿಂದೂ ಎಂದು ಹೇಳಿಕೊಳ್ಳಲಿ ಅಥವಾ ಮುಸ್ಲಿಂ ಎಂದು ಹೇಳಿಕೊಳ್ಳಲಿ -

"ಕ್ರೂರಿಯಾದ ಮಾನವ- ಅವನು ತನ್ನನ್ನು ಮುಸ್ಲಿಂ ಎಂದು ಹೇಳಿಕೊಳ್ಳಲಿ ಅಥವಾ ಹಿಂದೂ ಎಂದು ಹೇಳಿಕೊಳ್ಳಲಿ - "ಕಣ್ಣೀರ ಕಾಲುವೆ"ಯಿಂದ ಒಯ್ಯುಬಿಡು ಸಂಹಾರಕ್ರಿಯೆಗಿಳಿದಿರುವುದನ್ನು ನಿಸ್ಸಹಾಯಕನಾಗಿ ನಿಂತು ನೋಡುವ ಬದಲು ನನ್ನನ್ನು ಈ "ಕಣ್ಣೀರ ಕಾಲುವೆ"ಯಿಂದ ಒಯ್ಯುಬಿಡು ಎಂದು ಸರ್ವವ್ಯಾಪಿ ಶಕ್ತಿಯನ್ನು ಕೇಳಿಕೊಳ್ಳುತ್ತೇನೆ" - ಇದು 58 ವರ್ಷಗಳ ಹಿಂದೆ ಗಾಂಧೀಜಿಯ ಉದ್ಗಾರ. ಅವರ ಜನ್ಮದಿನದ ಸಂದರ್ಭದಲ್ಲಿ ನಿಮ್ಮ ಸಂದೇಶವೇನು ಎಂಬ ಪತ್ರಕರ್ತನೊಬ್ಬನ ಪ್ರಶ್ನೆಗೆ ಉತ್ತರವಾಗಿ ಬಂದ ಉದ್ಗಾರ. ಆಗಷ್ಟೇ ಅವರ ನೇತೃತ್ವದ ಹೋರಾಟದ ಫಲವಾಗಿಯೇ ದೇಶ ಸ್ವತಂತ್ರಗೊಂಡಿತ್ತು. ಆದರೆ ಸ್ವಾತಂತ್ರ್ಯದೊಂದಿಗೇ ಬಂದ ದೇಶವಿಭಜನೆ, ಅದರೊಂದಿಗೇ ವ್ಯಾಪಿಸಿದ ಕೋಮುಹಿಂಸಾಚಾರ ಅವರನ್ನು ಖಿನ್ನವಾಗಿಸಿತ್ತು. "ಈ ರಂಗದಲ್ಲಿ ಗಾಂಧೀಜಿಯ ಪಾತ್ರ ಉಜ್ವಲವಾಗಿದ್ದರೂ ಅವರು ಭಾಗಶಃ ಯಶಸ್ಸು ಪಡೆದರಷ್ಟೇ. ಇದು ಅವರ ಪ್ರಧಾನ ರಾಜಕೀಯ ವಿಫಲತೆಯಾಗಿತ್ತು. ಜಾತ್ಯಾತೀತತೆಗೆ, ನಿರ್ದಿಷ್ಟವಾಗಿ ಹಿಂದೂ-ಮುಸ್ಲಿಂ ಐಕ್ಯತೆಗೆ ಸಂಪೂರ್ಣವಾಗಿ ಕಟಿಬದ್ಧವಾಗಿದ್ದರೂ ಅವರಿಗೆ ಕೋಮುವಾದಿ ದ್ವೇಷ ಹಾಗೂ ಕೋಮುವಾದೀ ವಿಭಜನೆ ಮಾಡುವವರನ್ನು ಯಶಸ್ವಿಯಾಗಿ ಎದುರಿಸಲಾಗಲಿಲ್ಲ" ಎನ್ನುತ್ತಾರೆ ಪ್ರಸಿದ್ಧ ಇತಿಹಾಸಜ್ಞ ಡಾ. ಬಿಪಿನ್‌ಚಂದ್ರ ಅವರ ದೀರ್ಘ ಪ್ರಬಂಧದ ಆಯ್ದ ಅಂಶಗಳನ್ನು ನಮ್ಮ ಓದುಗರಿಗಾಗಿ ಕಳೆದ ವಾರ ಪ್ರಕಟಿಸಿದ್ದೆವು, ಅದರ ಮುಂದಿನ ಭಾಗ.....

ಕೃಪೆ : 'ಸಹಮತ್'ರವರ ಪ್ರಕಟಣೆ "ಗಾಂಧಿ ರೀಕಂನ್ಸಿಡರ್ಡ್"(Gandhi Reconsidered).

ಗಾಂಧೀಜಿ ಜಾತ್ಯತೀತತೆ ಮತ್ತು ಕೋಮುವಾದ

ಭಾರತೀಯ ರಾಷ್ಟ್ರೀಯ ಆಂದೋಲನದ ಸಾಮಾಜಿಕ ಕಣ್ಣೋಟದಲ್ಲಿ ಒಂದು ಜಾತ್ಯಾತೀತ ಸಮಾಜ ಮತ್ತು ಒಂದು ಜಾತ್ಯಾತೀತ ಪ್ರಭುತ್ವ ಅಡಕವಾಗಿತ್ತು ಎಂಬುದು ಸರ್ವವಿಧಿತ. ಮೇಲೆ ಚರ್ಚಿಸಿದ ರೀತಿಯಲ್ಲೇ ರಾಷ್ಟ್ರೀಯ ಆಂದೋಲನವೂ ಜಾತ್ಯಾತೀತತೆಯನ್ನು ಸಮಗ್ರವಾಗಿ ನಿರ್ವಹಿಸಿತು. ಈ ಕಣ್ಣೋಟ ಹಾಗೂ ಅದರಿಂದಾಗಿ ಬಂದ ಬದ್ಧತೆಯಿಂದಾಗಿಯೇ ಸ್ವತಂತ್ರ ಭಾರತ, ದೇಶವಿಭಜನೆ ಮತ್ತು ವಿಭಜನೆಯ ದಂಗೆಗಳ ನಡುವೆಯೂ ಒಂದು ಜಾತ್ಯಾತೀತ ಸಂವಿಧಾನವನ್ನು ರೂಪಿಸುವಲ್ಲಿ ಹಾಗೂ ಒಂದು ಜಾತ್ಯಾತೀತ ಪ್ರಭುತ್ವ ಮತ್ತು ಸಾಮಾಜಿಕ ಅಡಿಗಲ್ಲನ್ನು ಹಾಕುವಲ್ಲಿ ಯಶಸ್ವಿಯಾಯಿತು.

ಜಾತ್ಯಾತೀತ ಬದುಕು

ಆದರೆ ಜಾತ್ಯಾತೀತತೆಯ ಗಾಂಧೀಜಿಯ ತಿಳುವಳಿಕೆಯ ಬಗ್ಗೆ ಕೆಲವರು ಪ್ರಶ್ನೆಗಳನ್ನೆತ್ತುತ್ತಾರೆ. ನಿಜ ಸಂಗತಿಯೆಂದರೆ, ಗಾಂಧೀಜಿ ಮತ್ತು ಮೌಲಾನಾ ಅಬುಲ್ ಕಲಮ್ ಆಜಾದ್‌ರಂತಹ ಇನ್ನೂ ಇತರ ಆಳವಾದ ಧಾರ್ಮಿಕ ವ್ಯಕ್ತಿಗಳು ಕೂಡಾ ಜಾತ್ಯಾತೀತತೆಯನ್ನು ರಾಷ್ಟ್ರೀಯ ಆಂದೋಲನ ಅರ್ಥೈಸುವ ರೀತಿಯಲ್ಲೇ ಅರ್ಥ ಮಾಡಿಕೊಂಡರು ಹಾಗೂ ಅದರಂತೆ ಬಾಳಿದರು.


ಜಾತ್ಯಾತೀತತೆಯ ವಿಮೋಚನೆಯ ಎರಡನೇ ಅಂಶದಂತೆ ಗಾಂಧೀಜೀ ಪ್ರತಿಯೊಬ್ಬ ವ್ಯಕ್ತಿ, ಕಾಂಗ್ರೆಸ್ ಹಾಗೂ ಪ್ರಭುತ್ವ ಎಲ್ಲಾ ಧರ್ಮಗಳಿಗೆ ಸಮಾನ ಗೌರವ ತೋರಿಸಬೇಕು ಎಂದು ಅಭಿಪ್ರಾಯಪಟ್ಟಿದ್ದರು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಅವರು ಈ 'ಸರ್ವಧರ್ಮ ಸಮಭಾವ' ಮತ್ತು ಎಲ್ಲಾ ಧರ್ಮಗಳನ್ನು ಕುರಿತಂತೆ ತಟಸ್ಥ ಭಾವದ ನಡುವೆ ವ್ಯತ್ಯಾಸ ಕಾಣಲಿಲ್ಲ. 1931ರಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ ಪುನರ‍್ರಚಿಸಿ ಮಂಡಿಸಿದ ಪ್ರಸಿದ್ಧ ಕರಾಚಿ ಮೂಲಭೂತ ಹಕ್ಕುಗಳ ನಿರ್ಣಯ "ಪ್ರಭುತ್ವ ಎಲ್ಲಾ ಧರ್ಮಗಳನ್ನು ಕುರಿತಂತೆ ತಟಸ್ಥತೆ ಆಚರಿಸುತ್ತದೆ" ಎಂದಿತ್ತು.

ಅಲ್ಲದೆ ಎಲ್ಲಾ ಧರ್ಮಗಳ ಅನುಯಾಯಿಗಳ ಬಗ್ಗೆ ಗಾಂಧೀಜಿಯ ಗೌರವಭಾವದಲ್ಲಿ ನಾಸ್ತಿಕರಿಗೂ ಗೌರವಭಾವ ಅಡಕವಾಗಿತ್ತು. ಅವರ ಇಬ್ಬರು ನಾಸ್ತಿಕ ಅನುಯಾಯಿಗಳು ಹಾಗೂ ಅಭಿಮಾನಿಗಳಾದ ರಾಮಸ್ವಾಮಿ ಹಾಗೂ ಜಿ.ರಾಮಚಂದ್ರರಾವ್ (ಪ್ರೊ.ಗೋರಾ ಎಂದು ಪ್ರಸಿದ್ಧರು)ರೊಂದಿಗಿನ ಸಂದರ್ಶನದಲ್ಲಿ 1940ರ ದಶಕದಲ್ಲಿ ಈ ಅಂಶ ಮೂಡಿಬಂದಿದೆ. ಗಾಂಧೀಜಿಯ ಅತ್ಯಂತ ನಿಕಟ ಸಹಯೋಗಿಗಳಲ್ಲಿ ಒಬ್ಬರಾದ ಕೆ.ಡಿ.ಮಶ್ರುವಾಲಾ 1950 ರಲ್ಲಿ ಹೇಳಿದಂತೆ ಗಾಂಧೀಜಿ 'ದೇವರೇ ಸತ್ಯ' ಎಂಬ ತಮ್ಮ ಪ್ರತಿಪಾದನೆಯನ್ನು 'ಸತ್ಯವೇ ದೇವರು' ಎಂದು ಬದಲಿಸಿದ್ದರಿಂದ ನಾಸ್ತಿಕರಿಗೂ ಸಮಾನ ಸ್ಥಾನ ಕೊಡಲು ಅವರಿಗೆ ಸಾಧ್ಯವಾಯಿತು.

1946 ರಲ್ಲಿ ಗಾಂಧೀಜಿ ನಾಸ್ತಿಕರಾಗಿದ್ದ ಪ್ರೊ. ಗೋರಾರ ಮಗಳ ಮದುವೆಯನ್ನು ಒಬ್ಬ ಹರಿಜನ ಯುವಕನೊಡನೆ ಮಾಡಲು, 'ದೇವರ ಹೆಸರಿನಲ್ಲಿ' ಮಾಡುವ ಬದಲು 'ಸತ್ಯದ ಹೆಸರಿನಲ್ಲಿ' ಮಾಡಲು ಒಪ್ಪಿದ್ದರು ಎಂಬುದು ಕುತೂಹಲದ ಸಂಗತಿ. ಗಾಂಧೀಜಿಯ ಈ ವಚನವನ್ನು ಅವರ ವಾರ್ಧಾ ಆಶ್ರಮವಾಸಿಗಳು ಅವರ ಸಾವಿನ ನಂತರ ಈಡೇರಿಸಿದರು. ಈ ಯುವ ವ್ಯಕ್ತಿಗಳ ಮದುವೆಯನ್ನು ಅದೇ ರೀತಿಯಲ್ಲಿ ಮಾಡಿಸಿದರು.

ಈ ಹಿಂದೆ 1925 ರಲ್ಲಿ ಗಾಂಧೀಜಿ ವಿಕಾಸಗೊಳಿಸಿದ ಕಾಂಗ್ರೆಸ್ಸಿನ ಪ್ರತಿಜ್ಞೆಯಲ್ಲಿ ದೇವರ ಆಶೀರ್ವಾದದ ಅಂಶವಿತ್ತು. ಇದಕ್ಕೆ ಆಕ್ಷೇಪವೆತ್ತಿದಾಗ ಅವರು ತಕ್ಷಣವೇ ಒಪ್ಪಿಕೊಂಡರು. 'ಪ್ರಜ್ಞಾಪೂರ್ವಕ ಆಕ್ಷೇಪದ ಬಗ್ಗೆ ಹೇಳುವುದಾದರೆ, ನಾವು ರೂಪಿಸಿದ್ದೆಂದು ಹೆಮ್ಮೆಯಿಂದ ಹೇಳಬಹುದಾದ ಕಾಂಗ್ರೆಸ್ ಪ್ರತಿಜ್ಞೆಯಿಂದ, ಅಗತ್ಯವೆನಿಸಿದರೆ, ದೇವರ ಪ್ರಸ್ತಾಪವನ್ನು ತೆಗೆಯಬಹುದು. ಆ ಸಮಯದಲ್ಲೇ ಇಂತಹ ಆಕ್ಷೇಪ ಬಂದಿದ್ದರೆ ತಕ್ಷಣ ತಲೆಬಾಗುತ್ತಿದ್ದೆ"

ಗಾಂಧೀಜಿ ಅತ್ಯಂತ ಹೆಚ್ಚು ಗೌರವಿಸುತ್ತಿದ್ದ ಹಾಗೂ ಪ್ರೀತಿಸುತ್ತಿದ್ದ ಇಬ್ಬರು ವ್ಯಕ್ತಿಗಳು ಆಸ್ತಿಕರಲ್ಲ, ಆಜ್ಞೇಯತಾವಾದಿಗಳು ಎಂಬುದು ಗಮನಾರ್ಹ.



ಈ ವ್ಯಕ್ತಿಗಳೊಂದಿಗೆ ಅವರ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆ ಹಾಗೂ ತನ್ನ ರಾಜಕೀಯ ಉತ್ತರಾಧಿಕಾರಿ ಎಂದು ಅವರೇ ಹೇಳಿದ್ದ ಜವಹರಲಾಲ ನೆಹರೂ.

...

ಆದರೆ ಜಾತ್ಯತೀತತೆಯ ವಿರೋಧಿಗಳು ಹಾಗೂ ಜಾತ್ಯತೀತತೆಯ ಸಾರ್ವತ್ರಿಕ ನಿರ್ವಚನೆಯನ್ನು ವಿರೋಧಿಸುವ ಅಥವಾ ಈ ವಿಷಯದಲ್ಲಿ ಗಾಂಧೀಜಿ ಮತ್ತು ನೆಹರೂರವರಲ್ಲಿ ವ್ಯತ್ಯಾಸ ಕಾಣಬಯಸುವ ವ್ಯಕ್ತಿಗಳು ಬಹಳವಾಗಿ ಅವಲಂಬಿಸುವುದು ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವೆಂದು ಗಾಂಧೀಜಿ ಮತ್ತೆ ಮತ್ತೆ ಪ್ರತಿಪಾದಿಸುತ್ತಾ ಬಂದಿರುವುದನ್ನು. ಗಾಂಧೀಜಿ ಸಂಪೂರ್ಣವಾಗಿ ಜಾತ್ಯಾತೀತರಾಗಿದ್ದರು ಎಂಬುದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲವಾದ್ದರಿಂದ ಗಾಂಧೀಜಿಯ ಮಟ್ಟಿಗೆ ಜಾತ್ಯತೀತತೆಯ ಅರ್ಥವೇನು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೆ, ಇಲ್ಲಿಯೂ ಈ ಹಿಂದೆ ಹೇಳಿದಂತೆ ಅವರ ಆರಂಭಿಕ ಅಭಿಪ್ರಾಯಗಳ ತಪ್ಪು ವ್ಯಾಖ್ಯಾನ ಹಾಗೂ ನಂತರದ ಅವರ ಅಭಿಪ್ರಾಯ, ಹೇಳಿಕೆಗಳ ಅಜ್ಞಾನ ಕಾಣಬರುತ್ತದೆ.

ಗಾಂಧೀಜಿ ಧರ್ಮ ಮತ್ತು ರಾಜಕೀಯದ ನಡುವೆ ನಿಕಟ ಸಂಬಂಧ ಕಾಣಲು ಕಾರಣ, ಅವರಿಗೆ ರಾಜಕೀಯವು ನೈತಿಕ ಆಧಾರ ಹೊಂದಿರಬೇಕಾಗಿತ್ತು. ಧರ್ಮ ಎಂಬುದು ಅವರಿಗೆ ಈ ನೈತಿಕತೆಯ ಸ್ತೋತ್ರವಾಗಿತ್ತು. ಅಷ್ಟೇಕೆ ಭಾರತೀಯ ಭಾಷೆಗಳಲ್ಲಿನ 'ಧರ್ಮ'ದ ನಿಜವಾದ ಅರ್ಥದಲ್ಲಿ ಅದೇ ಅವರಿಗೆ ನೈತಿಕತೆಯಾಗಿತ್ತು.

ಈ ಬಗ್ಗೆ ಸ್ಪಷ್ಟ ಚಿತ್ರ ಕಾಣಲು ಗಾಂಧೀಜಿಗೆ ಧರ್ಮ ಎಂದರೆ ಏನು ಎಂಬುದನ್ನು ಅರಿಯಬೇಕಾಗುತ್ತದೆ. ಅವರು 'ಧರ್ಮ' ಎಂಬ ಪದವನ್ನು ಎರಡು ವಿಭಿನ್ನ ಅರ್ಥಗಳಲ್ಲಿ ಬಳಸುತ್ತಿದ್ದರು. ಒಂದು ಹಿಂದೂ, ಇಸ್ಲಾಂ, ಕ್ರೈಸ್ತ, ಸಿಖ್ ಮುಂತಾದ ಮತಗಳು ಅಥವಾ ಪಂಥಗಳು ಎಂಬ ಅರ್ಥದಲ್ಲಿ. ಇನ್ನೊಂದು ಭಾರತೀಯ ಪಾರಂಪರಿಕ ಅರ್ಥದಲ್ಲಿ. ಅಂದರೆ ಒಬ್ಬ ವ್ಯಕ್ತಿಯ ಜೀವನ ಹಾಗೂ ಸಾಮಾಜಿಕ ವ್ಯವಸ್ಥೆಗೆ ಮಾರ್ಗದರ್ಶನ ನೀಡುವ ನೀತಿ ಸಂಹಿತೆ ಎಂಬ ಅರ್ಥದಲ್ಲಿ. ಹೀಗೆ ರಾಜಕೀಯದಲ್ಲಿ ಧರ್ಮವಿರಬೇಕು ಎಂದರೆ ಅದು ನೈತಿಕ ಆಧಾರ ಹೊಂದಿರಬೇಕು ಎಂದೇ ಹೊರತು, ಯಾವುದೇ ಮತ, ಪಂಥವನ್ನು ಆಧರಿಸಿರಬೇಕು ಎಂದಲ್ಲ. ಧರ್ಮವಿಲ್ಲದೆ ರಾಜಕೀಯವಿಲ್ಲ ಎಂದಾಗಲೆಲ್ಲಾ ಗಾಂಧೀಜಿ ಈ ಅಂಶವನ್ನು ಒತ್ತಿ ಹೇಳಿದ್ದಾರೆ. ಉದಾಹರಣೆಗೆ ಮೇ 1920 ರಲ್ಲಿ ಅವರು ಹೀಗೆ ಬರೆದಿದ್ದರು - 'ನಾನು ರಾಜಕೀಯದೊಳಗೆ ಧರ್ಮವನ್ನು ತಂದು ನನ್ನೊಂದಿಗೆ ಹಾಗೂ ನನ್ನ ಗೆಳೆಯರೊಂದಿಗೆ ಪ್ರಯೋಗ ನಡೆಸುತ್ತಿದ್ದೇನೆ. ಧರ್ಮ ಎಂದರೆ ನನ್ನ ಅರ್ಥ ಏನೆಂದು ವಿವರಿಸುತ್ತೇನೆ. ಅದು ನಾನು ಎಲ್ಲಕ್ಕಿಂತ ಮೇಲೆಂದು ಕಾಣುವ ಹಿಂದೂ ಧರ್ಮವೂ ಅಲ್ಲ, ಅದನ್ನೂ ಮೀರಿನಿಂತ ಧರ್ಮ; ಅದು ಸ್ವಭಾವತಃ ಬದಲಾಗುವಂತದ್ದು".

ರಾಜಕೀಯದಲ್ಲಿ ನೈತಿಕತೆ ಇರಬೇಕು, ಈ ನೈತಿಕ ಭಾವವನ್ನು ವಿಭಿನ್ನ ಮೂಲಗಳಿಂದ, ಧಾರ್ಮಿಕ ಹಾಗೂ ಧಾರ್ಮಿಕೇತರ ಮೂಲಗಳಿಂದ ಪಡೆಯಬಹುದು ಎಂಬುದರ ವಿರುದ್ಧ ಯಾವುದೇ ಜಾತ್ಯತೀತ ವ್ಯಕ್ತಿ, ಆತ ಧರ್ಮದಲ್ಲಿ ನಂಬಿಕೆಯಿರುವವನಾಗಲೀ ಅಥವಾ ಇರದವನಾಗಲೀ ವಾದ ಮಾಡಲಾರ.

....


ಅಷ್ಟೇ ಮಹತ್ವದ ಸಂಗತಿಯೆಂದರೆ 1940 ರ ದಶಕದಲ್ಲಿ ಗಾಂಧೀಜಿ ಧರ್ಮ ಮತ್ತು ರಾಜಕೀಯದ ಬಗ್ಗೆ ಸಂಬಂಧಗಳ ಪ್ರತಿಪಾದನೆಯಲ್ಲಿನ ಭಾಷಾ ಸ್ವರೂಪವನ್ನು ಬದಲಿಸಲಾರಂಭಿಸಿದರು. ಕೋಮುವಾದಿ ರಾಜಕೀಯವನ್ನು, ಕೋಮುವಿಭಜನೆಯನ್ನು ಪ್ರೋತ್ಸಾಹಿಸಲು, ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಪ್ರತಿಪಾದಿಸಲು, ಹಿಂದೂ ಮುಸ್ಲಿಂ ಅಥವಾ ಸಿಖ್ ಹಿತಾಸಕ್ತಿಗಳಿಗೆ ಅಪಾಯ ಬರುತ್ತಿದೆ ಎಂಬ ಹಿಂದಿನ ಕೂಗಿನ ಬದಲು ಈ ಧರ್ಮಗಳೇ ಅಪಾಯದಲ್ಲಿವೆ ಎಂಬ ಕೂಗು ಎಬ್ಬಿಸಲು ಈ 'ಧರ್ಮ' ಎಂಬುದನ್ನು ಬಳಸುವುದನ್ನು ಅರಿತು ಅವರು ಹೀಗೆ ಮಾಡಲಾರಂಭಿಸಿದರು. ಮತ-ಪಂಥಗಳು ಎಂಬ ಅರ್ಥದಲ್ಲಿ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಬೇಕು, ಧರ್ಮ ಎಂಬುದು ವ್ಯಕ್ತಿಯ ಖಾಸಗಿ ವಿಷಯ ಎಂದು ಪರಿಗಣಿಸಬೇಕು ಎಂದು ಹೇಳಲಾರಂಭಿಸಿದರು. 1940 ರ ದಶಕದಲ್ಲಿ ಹಲವುಬಾರಿ ಇದನ್ನು ಹೇಳಿದ್ದರು. ಅವರ ಭಾಷಣಗಳಿಂದ, ಲೇಖನಗಳಿಂದ ಕೆಲವು ಉದಾಹರಣೆಗಳನ್ನು ನೋಡಿ:

. "ಧರ್ಮ ಒಂದು ವೈಯಕ್ತಿಕ ವಿಷಯ. ಅದಕ್ಕೆ ರಾಜಕೀಯದಲ್ಲಿ ಸ್ಥಾನವಿಲ್ಲ"- ಆಗಸ್ಟ್ 1942 ರಲ್ಲಿ.

. ಸೆಪ್ಟೆಂಬರ್ 1946 ರಲ್ಲಿ ಗಾಂಧೀಜಿ ಒಬ್ಬ ಕ್ರೈಸ್ತ ಮಿಶನರಿಗೆ ಹೀಗಂದಿದ್ದರು-"ನಾನು ಒಬ್ಬ ಸರ್ವಾಧಿಕಾರಿಯಾಗಿದ್ದರೆ, ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುತ್ತಿದ್ದೆ. ನಾನು ನನ್ನ ಧರ್ಮಕ್ಕಾಗಿ ಸಾಯುತ್ತೇನೆ. ಆದರೆ ಅದು ನನ್ನ ವೈಯಕ್ತಿಕ ವಿಷಯ. ಆದರೆ ಪ್ರಭುತ್ವಕ್ಕೆ ಅದರಲ್ಲೇನೂ ಕೆಲಸವಿಲ್ಲ".

. ಅಕ್ಟೋಬರ್ 1946 : "ಕೇಂದ್ರ ಹಾಗೂ ಪ್ರಾಂತ ಸರ್ಕಾರಗಳಲ್ಲಿ ಹಿಂದೂ, ಮುಸ್ಲಿಂ ಅಥವಾ ಬೇರೆ ಯಾವುದೇ ಕೋಮು ವ್ಯತ್ಯಾಸ ಇರಬಾರದು. ಎಲ್ಲರೂ ಭಾರತೀಯರು. ಧರ್ಮ ಒಂದು ವೈಯಕ್ತಿಕ ವಿಷಯ".

(ಮುಂದುವರಿಯುವುದು)



ವಿಶ್ವಬ್ಯಾಂಕ್ ವರದಿ : ಅಂಗೈ ಹುಣ್ಣಿನ ಕನ್ನಡಿ

ವಿಶ್ವಬ್ಯಾಂಕ್ ಸಮೀಕ್ಷಾ ವರದಿ ರಾಜ್ಯಸರ್ಕಾರ ಇನ್ನೂ ಬಾಗಬೇಕು ಎಂಬ ಇರಾದೆಯುಳ್ಳದ್ದು. ಸ್ವತಃ ಭ್ರಷ್ಟಾತಿಭ್ರಷ್ಟನಾಗಿರುವ ಈ ಸಂಸ್ಥೆ ತನ್ನ ಭ್ರಷ್ಟತೆಯನ್ನು, ಅದರಲ್ಲಿ ಪಾಲುಂಡ ಕೃಷ್ಣರವರ ಬಗ್ಗೆಯೂ ಬಹಿರಂಗವಾಗಿ ಒಪ್ಪಿಕೊಂಡಿದೆ ಎಂಬುದೇ ಇದರ ವಿಶೇಷ.

ವಿಶ್ವಬ್ಯಾಂಕ್‌ನ ಸಮೀಕ್ಷಾ ವರದಿಯೊಂದು ಕರ್ನಾಟಕದಲ್ಲಿ ಹಲವಾರು ವಾದ-ವಿವಾದ, ವೈರುಧ್ಯ-ವೈಮನಸ್ಸು, ಚರ್ಚೆಗೆ ಆಹಾರವಾಗಿದೆ. ಭಾರತದಲ್ಲೇ ನಂಬರ್ ಒನ್ ಮುಖ್ಯಮಂತ್ರಿ ಎಂದು ಇಂಗ್ಲೀಷ್ ಪತ್ರಿಕೆಯೊಂದರಿಂದ ಹೊಗಳಿಸಿಕೊಂಡಿದ್ದ ಕೃಷ್ಣರವರ ಅವಧಿಯು ಭ್ರಷ್ಟಾಚಾರದಲ್ಲಿಯೂ ನಂಬರ್ ಒನ್ ಆಗಿದೆ ಎಂಬುದು! ಕೆಲವರು ಇದನ್ನು ವಿಸ್ತರಿಸಿ ವ್ಯಾಖ್ಯಾನಿಸಿದಂತೆ ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್ ಒನ್.

ಹಾಗೆ ನೋಡಿದರೆ ಈ ವರದಿ ಕೇವಲ ಒಂದು ವಿಷಯಕ್ಕೆ ಮಾತ್ರ ಸೀಮಿತವಾದುದಲ್ಲ. ಇದು ಭ್ರಷ್ಟಾಚಾರದ್ದೋ ಎಂದು ಸಾಮಾನ್ಯರು ತಳ್ಳಿಹಾಕುವಂತದ್ದೇನಲ್ಲ. ಇದರಿಂದ ಗ್ರಹಿಸಬೇಕಾದ, ಗಮನಿಸಬೇಕಾದ ಹಲವು ಸಂಗತಿಗಳಿವೆ. ವಿಶ್ವಬ್ಯಾಂಕ್ ಹಾಗೂ ಬಂಡವಾಳಹೂಡಿಕೆದಾರರ ದುಷ್ಟ ದುರಾಸೆಯ ಹಲವು ಹುನ್ನಾರಗಳಿವೆ.

ಇದು ಸಾಲದು ಎನ್ನುತ್ತಿದೆ ವಿಶ್ವಬ್ಯಾಂಕ್

ಹೂಡಿಕೆ ವಾತಾವರಣ ಅಂದಾಜು -2004 ಎಂಬ ಈ ವರದಿ 63 ಪುಟಗಳಲ್ಲಿ ಹರಡಿದ್ದು, ಮುಖ್ಯವಾಗಿ ರಾಜ್ಯಗಳಲ್ಲಿ ಬಂಡವಾಳ ಹೂಡಿಕೆಗೆ ಇರುವ 'ಅಡ್ಡಿ'ಗಳನ್ನು ಪಟ್ಟಿ ಮಾಡಿದೆ. ಅದು ಹೇಳುವಂತೆ ಸರ್ಕಾರದ ಕಾನೂನುಗಳು ಭ್ರಷ್ಟಾಚಾರ, ಮೂಲಭೂತ ಸೌಕರ್ಯಗಳ ಅಸಮರ್ಪಕತೆ ಮತ್ತು ದುರ್ಬಲ ಸಾರಿಗೆ ವ್ಯವಸ್ಥೆಗಳು ಹೂಡಿಕೆಯ ವೇಗವರ್ಧನೆಗೆ ಅಡ್ಡಿಗಳು ಎಂದಿದೆ. ಖಾಸಗಿರಂಗದ ಬೆಳವಣಿಗೆಗೆ ಕಾರ್ಮಿಕ ಕಾನೂನುಗಳ 'ಸುಧಾರಣೆ'ಯು ನಿಧಾನಗತಿಯು ಪ್ರಮುಖ ಕಾರಣಗಳಲ್ಲೊಂದು ಎಂದು ಬೊಟ್ಟು ಮಾಡಿದೆ. ಆಡಳಿತ ಸುಧಾರಣೆಗಳು ಭರದಿಂದ ಸಾಗಬೇಕು ಎಂದೂ ಒತ್ತಾಯಿಸಿದೆ. ವಿಶ್ವಬ್ಯಾಂಕ್ ಹಾಗೂ ಭಾರತೀಯ ಕೈಗಾರಿಕೆ ಮಹಾಮಂಡಲ (ಸಿ.ಐ.ಐ) ಜಂಟಿಯಾಗಿ ಈ ಸಮೀಕ್ಷೆ ನಡೆಸಿವೆ. 12 ರಾಜ್ಯಗಳ, 40 ನಗರಗಳ ಸುಮಾರು 1855 ಉತ್ಪಾದನಾ ಕಂಪನಿಗಳ ಮುಖ್ಯಸ್ಥರ ಅಭಿಪ್ರಾಯಗಳೇ ಇದಕ್ಕೆ ಮೂಲ. ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ ನಗರಗಳ 150 ಸಣ್ಣ, 500 ಮಧ್ಯಮ ಕಂಪನಿಗಳ (ರಾಜ್ಯದಲ್ಲಿ ಸುಮಾರು 3 ಲಕ್ಷ ಕಂಪನಿಗಳಿದ್ದು 1100 ಮಧ್ಯಮ -ಬೃಹತ್ ಕಂಪನಿಗಳಿವೆ)ನ್ನು ಒಳಗೊಳಿಸಲಾಗಿದೆ. ಈ ವರದಿಯು ನಾಡಿನ ವಿಶಾಲ ಜನ ಸಮೂಹಗಳನ್ನು ಪ್ರಾತಿನಿಧಿಕವಾಗಿಯಾದರೂ ಒಳಗೊಳ್ಳದೇ ಇರುವುದರಿಂದ ಇದು ಏಕಪಕ್ಷೀಯವಾಗಿದೆ. ವಿಶ್ವಬ್ಯಾಂಕ್ ಬಂಡವಾಳ ಹೂಡಿಕೆದಾರರ ಅಸಮಾಧಾನವನ್ನು, ಈಗಾಗಲೇ ಇವರಿಗೆ ಸಾಕಷ್ಟು ಬಗ್ಗಿ, ಶರತ್ತುಗಳ ಪಾಲನೆಗೆ ಸೇವಾನಿಷ್ಠರಾಗಿ ನಿಂತಿರುವ ಸರ್ಕಾರಗಳ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಮೇಲೆ ಇನ್ನೂ ದಬಾವಣೆ ಹಾಕಿ, ಹೇಳಿದಂತೆ ಕೇಳಲು ಹೆಚ್ಚಿನ ಒತ್ತಡ ಬೀರುವ ಇರಾದೆ ಇದೆ. 2 ವರ್ಷಗಳ ಹಿಂದೆ ರಾಜ್ಯಕ್ಕೆ ಭೇಟಿ ನೀಡಿದ್ದ ವಿಶ್ವಬ್ಯಾಂಕ್‌ನ ಅಧ್ಯಕ್ಷ ಕೃಷ್ಣರ ಆಡಳಿತವನ್ನು, ಹೊಗಳಿ -ಬಂಡವಾಳ ಹೂಡಿಕೆಗೆ ಪ್ರಶಸ್ತವಾಗಿದೆಯೆಂದು ಹೇಳಿದ್ದ. ಖಾಸಗಿ ಕಂಪನಿಗಳ ಯೋಜನೆ - ಸರ್ಕಾರದ ಪರವಾನಗಿ ಅಂಗೀಕಾರ ಪೂರ್ಣಗೊಳ್ಳಲು ಇತರೆ ರಾಜ್ಯಗಳಲ್ಲಿ 89 ದಿನಗಳು ಬೇಕಾದರೆ ನಮ್ಮ ರಾಜ್ಯದಲ್ಲಿ 52 ದಿನಗಳೇ ಸಾಕು ಎಂದು ವಿನಮ್ರವಾಗಿ ಸಾಧನೆ ಬಗ್ಗೆ ನುಡಿಯುತ್ತಾರೆ ಬೃಹತ್ ಕೈಗಾರಿಕಾ ಸಚಿವರಾದ ಆರ್.ವಿ.ದೇಶಪಾಂಡೆಯವರು.



ಈ ಸಮೀಕ್ಷೆಯಲ್ಲಿ ಒಳಗೊಂಡಿದ್ದ ಶೇ.66.4ರಷ್ಟು ಪ್ರತಿಕ್ರಿಯೆದಾರರು (ಕಂಪನಿಗಳು) ಕರ್ನಾಟಕದಲ್ಲಿ ಕಾನೂನು, ಭ್ರಷ್ಟಾಚಾರವೇ ಅಡ್ಡಿ ಎಂದಿದ್ದಾರೆ. ನಂತರಸ್ಥಾನ ತಮಿಳುನಾಡು (65.3) 62ಶೇ., ಗುಜರಾತ್, ಪಂಜಾಬ್ 54.2, ಹರ್ಯಾಣ 28.7(?) ಕರ್ನಾಟಕದಲ್ಲಿನ ಮೂಲ ಸೌಕರ್ಯಗಳ ಅಸಮರ್ಪಕತೆ ಬಗ್ಗೆ ಹೇಳಿದವರು ಶೇ.61.2, ತೆರಿಗೆ-ಸುಂಕದವರ ಕಾಟ ಎಂದವರು 54.7, ಶೇ.41 ಜನ ತೆರಿಗೆಯ ವಿಪರೀತ ಹೊರೆ ಎಂದರೆ, 23.1ರಷ್ಟು ಜನ ಅಯೋಗ್ಯತೆ- ಪರಿಣತರ ಕೊರತೆ ಎಂದಿದ್ದಾರೆ. ಭೂಮಿ ಲಭ್ಯತೆ ಅಡ್ಡಿಯ ಬಗ್ಗೆ 14.5ಶೇ ಮಾತನಾಡಿದ್ದಾರೆ. ಶೇ.51.8ರಷ್ಟು ಈ ಕಂಪನಿ ಜನ ಹೇಳುವುದು ಕಾರ್ಮಿಕ ಕಾನೂನುಗಳ ಅಡ್ಡಿ ಬಗ್ಗೆ. ಇನ್ನು ಅವರ ಯೋಜನೆ ಮಂಜೂರಾತಿಗಾಗಿ ಹಿರಿಯ ಮ್ಯಾನೇಜರ್‌ಗಳು ತಮ್ಮ ಕಛೇರಿಯ 11.2 ಶೇ. ಸಮಯ ಕಳೆದಿದ್ದಾರಂತೆ. ಕರ್ನಾಟಕದಲ್ಲಿ 'ಆಡಳಿತ ಸುಧಾರಣೆ ಕ್ರಮ' ವಹಿಸಿದ ಬಳಿಕವೂ ಕೈಗಾರಿಕಾ ತಪಾಸಣಾ ಪದ್ಧತಿ ಇನ್ನೂ ಶೇ.5.6ರಷ್ಟು ಕಂಪನಿಗಳಿಗೆ ಸಮಾಧಾನ ತಂದಿಲ್ಲ, ಮಧ್ಯ ಪ್ರದೇಶದಲ್ಲಿ ಶೇ.1.9 ಮಾತ್ರ ತಕರಾರು ತೆಗೆದಿದ್ದಾರೆ. ಆಮದು ಮಾಡಲು ಸುಂಕದ ಅಧಿಕಾರಿಗಳು ತಡೆ ಕಡಿಮೆಯಾಗಲೇಬೇಕೆಂದವರು ಶೇ.7.1, ಉತ್ಪಾದನಾ ಘಟಕಗಳು ಕೆಲಸಗಾರರ ಭಾರದಿಂದ ನರಳುತ್ತಿವೆ ಎಂದವರು 21.8 ಜನ. ಕರ್ನಾಟಕದಲ್ಲಿ ವಿದ್ಯುತ್ ಪೂರೈಕೆಯದೇ ದೊಡ್ಡ ಸಮಸ್ಯೆ ಎಂದವರು ಶೇ.59.2 ಜನ. ಸಾರಿಗೆ ಸಮಸ್ಯೆ ಹೇಳಿದವರು 50.3. ಇಲ್ಲೆಲ್ಲಾ ಕರ್ನಾಟಕವೇ ಮೊದಲನೇ ಸ್ಥಾನದಲ್ಲಿ! ಇಷ್ಟಾದರೂ ಕರ್ನಾಟಕ ಹೂಡಿಕೆಗೆ ಪ್ರಶಸ್ತ ಜಾಗ ಎಂದೂ ಆಶಾವಾದ ಪ್ರಕಟಿಸಿದೆ.

ಒತ್ತಡ ತಂತ್ರ

ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಇನ್ನೂ ಹೆಚ್ಚು ಹೆಚ್ಚಾಗಿ 'ಸುಧಾರಣೆಯ ಮಂತ್ರ' ತರಬೇಕು ಎಂಬುದು ಈ ವರದಿಯ ಒತ್ತಾಯವಿದ್ದಂತೆ ಕಾಣುತ್ತದೆ. ವಿದ್ಯುತ್ ಸುಧಾರಣೆ ಎಂದರೆ ತೀವ್ರ ಖಾಸಗೀಕರಣ, ದುಬಾರೀಕರಣ. ಇದನ್ನು ವಿಶ್ವಬ್ಯಾಂಕ್‌ನ ಅಧಿಕಾರಿಗಳು ಪದೇ ಪದೇ ಒತ್ತಾಯಿಸುತ್ತಿದ್ದಾರೆ. ಜನರ ಪ್ರತಿಭಟನೆಯಿಂದ ಅಂದುಕೊಂಡಷ್ಟು ಆಗದಿದ್ದರೂ ಆ ದಿಕ್ಕಿನಲ್ಲಿ ಸರ್ಕಾರದ ಹೆಜ್ಜೆ

ಪುಟ 9 ಕ್ಕೆ



ನೋವಿನ ದೀವಿಗೆ ನಮ್ಮ ಎದೆಗಳಲ್ಲಿ...

ನಮ್ಮೆಲ್ಲರ ಪ್ರೀತಿಯ ಸಂಗಾತಿ, ಕ್ರಿಯಾಶೀಲ ಯುವ ಕಾರ್ಯಕರ್ತ ಕಾಂ.ಅಬ್ದುಲ್ ರಜಾಕ್ ಮುಲ್ಲಾರ ಅಕಾಲಿಕ ನಿಧನ ಅತ್ಯಂತ ದಿಗ್ಭ್ರಮೆಗೊಳಿಸಿದೆ. ಕ್ರಾಂತಿಕಾರಿ ಚಳುವಳಿಗೆ ತನ್ನನ್ನು ಪೂರ್ಣವಾಗಿ ಅರ್ಪಿಸಿಕೊಂಡು ಸಮಾಜ ಬದಲಾವಣೆಗಾಗಿ ಶ್ರಮಿಸುತ್ತಿದ್ದ ಕಾಂ.ಮುಲ್ಲಾರ ಅಗಲಿಕೆ ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿಗೆ ತುಂಬಲಾರದ ನಷ್ಟ.

ಜನರ ಒಡಲ ಕಿಚ್ಚಿಗೆ ಹೋರಾಟದ ಸ್ವರೂಪಕೊಡುತ್ತಿದ್ದ, ರೂಪಿಸುತ್ತಿದ್ದ ಕಾಂ ಮುಲ್ಲಾ ಎಲ್ಲಾ ಬಗೆಯ ಕೋಮುವಾದದ ವಿರುದ್ಧ ದಿಟ್ಟ ನಿಲುವ ತಾಳಿ, ಬೆದರಿಕೆಗೆ ಬಗ್ಗದೆ ಸಂಘರ್ಷಕ್ಕೆ ಇಳಿದ ಒಡನಾಡಿ. ಸೌಹಾರ್ದತೆಗೆ ಶ್ರಮಿಸಿದಾತ.

ತಮ್ಮ ಪ್ರದೇಶದಲ್ಲಿನ ರಾಜಕೀಯ ವಿದ್ಯಮಾನಗಳ ಬಗ್ಗೆ, ಜನರ ನೋವು, ಸಮಸ್ಯೆಗಳು, ಚಳುವಳಿಯ ಬಗ್ಗೆ ಕಾಂ.ಮುಲ್ಲಾರವರು ಹಲವಾರು ಲೇಖನಗಳನ್ನು ಐಕ್ಯರಂಗಕ್ಕೆ ಬರೆದಿದ್ದಾರೆ. ಅರಿವ ವಿಸ್ತರಿಸುವಲ್ಲಿ ತನ್ನದೇ ಆದ ರೀತಿಯಲ್ಲಿ ಕೊಡುಗೆ ನೀಡಿದ್ದಾರೆ.

ಇಂತಹ ಸಂಗಾತಿಯನ್ನು ಪತ್ರಿಕೆಯು ಅತ್ಯಂತ ದುಃಖದಿಂದ ನೆನೆಯುತ್ತದೆ. ಹೃದಯಾಂತರಾಳದಿಂದ ಕ್ರಾಂತಿಕಾರಿ ಶ್ರದ್ಧಾಂಜಲಿ ಅರ್ಪಿಸುತ್ತದೆ. ಅರ್ಪಿಸಿಕೊಂಡ ಅಪೂರ್ಣಗೊಂಡ ಗುರಿಸಾಧನೆಗೆ ಹೆಚ್ಚು ಶ್ರಮಿಸುವುದು ಅರ್ಥಪೂರ್ಣ ಶ್ರದ್ಧಾಂಜಲಿಯಾಗುತ್ತದೆ.

ಕಾಂ. ಮುಲ್ಲಾ ಲಾಲ್‌ಸಲಾಂ.

ನಿನ್ನ ನೆನಪು ನಿರಂತರ

- ಸಂಪಾದಕರು

ಬೀದಿಗೆ ಬಿತ್ತು ನೋಡಿ ಕಾಂಗ್ರೆಸ್ ಕದನ

ಕಾಂಗ್ರೆಸ್ ಒಳಗಿನ ತಿಕ್ಕಾಟ ಬೀದಿಗೆ ಬರುತ್ತಿದೆ. ಅತೃಪ್ತಿಯಲ್ಲಿ ಕುದಿಯುತ್ತಿದ್ದ ಕೃಷ್ಣ ಹಾಗೂ ಅವರ ಬಣ ಬಹಿರಂಗ ಸಮರ ಘೋಷಿಸಿದ್ದಾರೆ. ಇದು ತನ್ನದೇ ತರ್ಕದ ಕೊನೆ ಮುಟ್ಟೀತೇ?

ಕಾಂಗ್ರೆಸ್ ಬಿಡಾರದೊಳಗಿನ ಮುಸುಕಿನ ಗದ್ದಲ ಈಗ ಬೀದಿ ರಂಪಾಟ. ಮಹಾರಾಷ್ಟ್ರದ ರಾಜ್ಯಪಾಲ ಎಸ್.ಎಂ.ಕೃಷ್ಣರವರು ಸಕ್ರಿಯ ರಾಜಕೀಯಕ್ಕೆ ಮರಳುವ ಇಚ್ಛೆ ಪ್ರಕಟಿಸಿದ್ದು, ಅರಮನೆ ರಾಜಕಾರಣದಿಂದ ಬಹಿರಂಗ ಕದನಕ್ಕೆ ಇಳಿವ ಸೂಚನೆಯಾಗಿತ್ತದು. ಕೃಷ್ಣ ರಾಜ್ಯಪಾಲರಾದ ನಂತರವೂ ರಾಜ್ಯದ ರಾಜಕಾರಣದಲ್ಲಿ ಕೈಯಾಡಿಸುವ ಕೆಲಸ ನಿಲ್ಲಿಸಿದ್ದೇನೂ ಇಲ್ಲ. ಆದರೆ ಅವೆಲ್ಲಾ ತೆರೆ-ಮರೆಯಲ್ಲಿಯೇ. ಚುನಾವಣೆ ಬಳಿಕ ಕೃಷ್ಣ ನೇತೃತ್ವದ ಸರ್ಕಾರ ಸೋತು, ಸಮಿಶ್ರ ಸರ್ಕಾರ ರಚನೆ ಅನಿವಾರ್ಯವಾದಾಗ ಕೃಷ್ಣರ ಬಣ ಹೊಸ ಮಂತ್ರಿಮಂಡಲದಲ್ಲಿ ಪ್ರಾಧಾನ್ಯತೆ ಪಡೆಯಲಿಲ್ಲ. ಸಂಪುಟ ವಿಸ್ತರಣೆಯಲ್ಲಿಯೇ ಸ್ಥಾನ ಗಿಟ್ಟಿಸಿರಲಿಲ್ಲ, ಖಾತೆಗಳ ಹಂಚಿಕೆಯಲ್ಲಿನ ಮಿತಿಗಳಿದ್ದುದರ ಜೊತೆಗೆ ಸರ್ಕಾರದ ಭಾಗೀದಾರ ಜೆಡಿ(ಎಸ್) ನಾಯಕರ ಒತ್ತಡವೂ ಕಾರಣವೆಂಬುದು ಆ ಬಣದಲ್ಲಿ ಆಕ್ರೋಶ ಮೂಡಿಸಿತ್ತು. ಮುಂದೆ ಈ ಸರ್ಕಾರದ, ಹಾಗೂ ಹಿಂದಿನ ಸರ್ಕಾರದ ಹಲವಾರು ಪ್ರಮುಖ ಸರ್ಕಾರಗಳನ್ನು, ಕ್ರಮಗಳನ್ನು ಬಹಿರಂಗವಾಗಿಯೇ ಟೀಕೆಗೆ ಎತ್ತಿಕೊಳ್ಳುವ ಮೂಲಕ ದೇವೇಗೌಡರು ವಿರೋಧಪಕ್ಷದ ಪಾತ್ರ ವಹಿಸತೊಡಗಿದಾಗ ಈ ಅತೃಪ್ತಿ ಭುಗಿಲೆದ್ದಿತ್ತು. ಮುಖ್ಯಮಂತ್ರಿ ಧರಂಸಿಂಗ್ ತಮ್ಮ ರಕ್ಷಣೆಗೆ ಬರದೇ ದೇವೇಗೌಡರ ಪಟ್ಟುಗಳಿಗೆ ಹೂಂ ಎನ್ನುತ್ತಿದ್ದಾರೆ. ಕಾಂಗ್ರೆಸ್ ಅಸ್ತಿತ್ವಕ್ಕೆ ಸಂಚಕಾರ ತರುತ್ತಿದ್ದರೆಂಬ ದೂರು ಹೈಕಮಾಂಡ್‌ವರೆಗೂ ತಲುಪಿತ್ತು. ಅವರನ್ನು ಬದಲಿಸಲು ಒತ್ತಾಯಿಸಲಾಗಿತ್ತು. ಚಂಡೀಗಢದಲ್ಲಿ ಸೇರಿದ್ದ ಕಾಂಗ್ರೆಸ್ ಮುಖ್ಯಮಂತ್ರಿಗಳ ಸಭೆ ಸಂದರ್ಭದಲ್ಲಿ ಸಮಿಶ್ರಸರ್ಕಾರದ ಮಿತಿ, ಒತ್ತಡ ಹಾಗೂ ತಮ್ಮ ಕ್ರಮಗಳನ್ನು ಹೈಕಮಾಂಡ್ ಮುಂದೆ ಹೇಳಿಕೊಂಡಿದ್ದಾಗಿ ಧರಂಸಿಂಗ್ ಹೊರಗೆಡಹಿದ್ದಾರೆ.

ಸ್ಫೋಟನೆಗೊಂಡ ಕೃಷ್ಣ

ಸಕ್ರಿಯ ರಾಜಕಾರಣಕ್ಕೆ ಮರಳುವ ಮತ್ತು ಅದರ ಬೆನ್ನಲ್ಲೇ ಬಂಡವಾಳ ಹೂಡಿಕೆಯ ವಾತಾವರಣದ ವರದಿಯೊಳಗಿನ ಭ್ರಷ್ಟಾಚಾರದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿರುವ ಅಂಶ ಪ್ರಕಾಶಮಾನವಾಗಿ ಹೊರಬಂದುದು ಕೃಷ್ಣ ಹಾಗೂ ಅವರ ಬಣವನ್ನು ಕೆರಳಿಸಿದೆ. ಒಂದೆಡೆ ದೇವೇಗೌಡರು, ಇನ್ನೊಂದೆಡೆ ಧರಂಸಿಂಗ್‌ರ ವಿರುದ್ಧ ಬಹಿರಂಗವಾಗಿಯೇ ಕೃಷ್ಣ ಮಾತನಾಡಿದ್ದಾರೆ. ಇದನ್ನು ಸಹಿಸಲಾರೆ ಇನ್ನೂ ಹೆಚ್ಚು ಕಾಲ ರಾಜ್ಯಪಾಲನಾಗಿ ಉಳಿಯಲಾರೆ ಎಂದು ಘೋಷಿಸಿದ್ದಾರೆ.

ಬೀದಿಕಾಳಗ ಘೋಷಣೆ

ಇದು ಇಷ್ಟಕ್ಕೆ ನಿಲ್ಲದೇ ಧರಂ ವಿರುದ್ಧ (ಅದು ದೇವೇಗೌಡರ ವಿರುದ್ಧವೂ ಎಂದು ಭಾವಿಸಿ) ಕಾಂಗ್ರೆಸ್ ಪಕ್ಷದೊಳಗಿನಿಂದ, ಕೆಳಹಂತಗಳಿಂದ ಬಂಡಾಯ ಹುಟ್ಟುಹಾಕುತ್ತಿದ್ದಾರೆ. ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನದ ಹಂಚಿಕೆ ಜೆಡಿ(ಎಸ್)ಗೆ ಬಿಡಲಾಗಿದೆಯೆಂದೂ ಜಾಲಪ್ಪ, ಪರಮೇಶ್ವರ್ ಮತ್ತು ತುಮಕೂರು ಕಾಂಗ್ರೆಸ್ಸಿಗರು, ವಿಕಾಸಸೌಧದ ನಿರ್ಮಾಣದ ವೆಚ್ಚ ಬಜೆಟ್ ಮೀರಿದ್ದು ಅದರ ತನಿಖೆಗೆ ಆದೇಶಿಸಿದ್ದರಿಂದ ಧರಂಸಿಂಗ್‌ಗೆ ಮಂಡ್ಯಕ್ಕೆ ಬರದಂತೆ ತಡೆಹಿಡಿಯುವುದಾಗಿಯೂ ಶಿವರಾಮೇಗೌಡ, ಕೃಷ್ಣರ ಬೆಂಬಲಿಗರು ತಕರಾರು ಎತ್ತಿದ್ದಾರೆ. ಇದಕ್ಕೆಲ್ಲಾ ಧರಂಸಿಂಗ್ ಮೌನ ಮುರಿದು ತಿರುಗೇಟು ನೀಡಿದ್ದಾರೆ. ಕೃಷ್ಣರ ಬಣದ ಈ ಆಟ ಇಲ್ಲಿಗೆ ನಿಲ್ಲುವುದಿಲ್ಲ. ಕಾಂಗ್ರೆಸ್ ಒಳಗಿನ ಜಗಳವೂ ಸಹ. ಈ ಮುಷ್ಟಿಯುದ್ಧ ಯಾವ ಸ್ವರೂಪವನ್ನೂ ಪಡೆದುಕೊಳ್ಳಲಿದೆ? ಧರಂಸಿಂಗರ ಪದಚ್ಯುತಿಯನ್ನೇ? ಅಥವಾ ಸಮಿಶ್ರ ಸರ್ಕಾರದ ಪತನವನ್ನೇ? ಈ ಜಗಳದಲ್ಲಿ ಯಾವ ಜನಹಿತ -ಅಡಗಿದೆ? ಈ ಸಂದರ್ಭವನ್ನೇ ಬಳಸಿ ಬಲಕ್ರೋಢೀಕರಣಕ್ಕೆ ಇಳಿದಿರುವ ಕೋಮುವಾದಿ ಶಕ್ತಿಗಳ ಅಪಾಯದ ಬಗ್ಗೆ ರಾಜಕೀಯ ಎಚ್ಚರವಾದರೂ ಇದೆಯೇ?

ಹಳದಿ ರೇಷನ್ ಕಾರ್ಡಿಗೆ ಮತ್ತು ನಿವೇಶನ ರಹಿತರಿಗೆ ಹಕ್ಕುಪತ್ರಕ್ಕಾಗಿ ಕುಂದಾಪುರದಲ್ಲಿ ಸಮಾವೇಶ ಮತ್ತು ಸಾಮೂಹಿಕ ಧರಣಿ

ಜನಸಾಮಾನ್ಯರನ್ನು ಬಾಧಿಸುವ ಮುಖ್ಯ ಪ್ರಶ್ನೆಗಳಾಗಿರುವ ಆಹಾರ, ಭೂಮಿ ಮತ್ತು ಉದ್ಯೋಗದ ಕುರಿತು ಚಳುವಳಿ ತಾಲೂಕಿನಾದ್ಯಂತ ನಡೆಯುತ್ತಿರುವ ಈ ಸಂದರ್ಭದಲ್ಲಿ ಬಡ ಜನರಿಗೆ ಕಡಿಮೆ ದರದಲ್ಲಿ ರೇಷನ್ ಒದಗಿಸಬೇಕೆಂದು ತೀವ್ರ ಒತ್ತಾಯ ಇದ್ದರೂ ಇನ್ನೂ ಕೂಡಾ ಹಲವೆಡೆ ಬಿ.ಪಿ.ಎಲ್. (ಹಳದಿ ಕಾರ್ಡ್) ವಿತರಣೆಯಾಗಿಲ್ಲ. ಆದಾಯ ಹೆಚ್ಚಿದೆ ಎಂಬ ನೆಪವೊಡ್ಡಿ ಜನತೆಯ ದೊಡ್ಡ ವಿಭಾಗವನ್ನು ರೇಷನ್ ವ್ಯವಸ್ಥೆಯಿಂದ ದೂರವಿಡಲಾಗಿದೆ. ಅಂತ್ಯೋದಯ ಯೋಜನೆಯ ಲಾಭ ಕೆಲವೇ ಕೆಲವು ಜನರಿಗೆ ಸಿಗುತ್ತಿದ್ದು, ಅದರ ವಿಸ್ತರಣೆಯಾಗಲಿಲ್ಲ.

ಭೂಮಿ ಇಲ್ಲದವರಿಗೆ, ಕೃಷಿ ಕೂಲಿಕಾರರಿಗೆ ಭೂಮಿ ಸಿಗುವಂತಾಗಬೇಕು. ತಲಾತಲಾಂತರಗಳಿಂದ ಅರಣ್ಯದ ಉಪ ಉತ್ಪನ್ನ, ಮತ್ತೆ ಅರಣ್ಯ ಭೂಮಿಯ ಹಕ್ಕನ್ನು ಅನುಭವಿಸಿಕೊಂಡು ಬರುತ್ತಿರುವ ಪರಿಶಿಷ್ಟ ಪಂಗಡದ ಜನರಿಗೆ ಆ ಹಕ್ಕುಗಳ ರಕ್ಷಣೆಯಾಗಬೇಕು. ನಿವೇಶನರಹಿತರಿಗೆ ನಿವೇಶನದ ಹಕ್ಕುಪತ್ರಗಳನ್ನು ನೀಡಿ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕೆಂದು ಒತ್ತಾಯಿಸುವ ಬಡರೈತರ, ಕೃಷಿಕೂಲಿಕಾರರ ಸಮಾವೇಶ ಕುಂದಾಪುರ ತಾಲೂಕು ವಾವಿನಕಟ್ಟೆಯಲ್ಲಿ ತಾರೀಕು 2-10-2005ರಂದು ಶ್ರೀಯುತ ಜಿ.ಬಿ.ಮಹ್ಮದ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸುಮಾರು 350 ಮಂದಿ ಭಾಗವಹಿಸಿರುತ್ತಾರೆ.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಶಂಕರ್ ಮಾತನಾಡಿ, ಬಡರೈತರು, ಭೂರಹಿತರು, ಕೃಷಿ ಕಾರ್ಮಿಕರು ಹಾಗೂ ನಿವೇಶನರಹಿತರು ಒಗ್ಗಟ್ಟಾಗಲು ಕರೆ ನೀಡಿದರು. ಅನಂತರ ಸಿಪಿಐ(ಎಂ) ಕುಂದಾಪುರ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಕಾಂ. ಮಹಾಬಲ ವಡೇರಹೋಬಳಿ ಮಾಡನಾಡಿದರು.

ಅಕ್ಟೋಬರ್ 10-11 ಸಾಮೂಹಿಕ ಧರಣಿ

ಮೇಲ್ಕಂಡ ಬೇಡಿಕೆಗಳಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು ಹಾಗೂ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಒತ್ತಾಯಿಸಿ ಸಿ.ಪಿ.ಐ(ಎಂ) ಕುಂದಾಪುರ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಅಕ್ಟೋಬರ್ 10 ಮತ್ತು 11ರಂದು ತಾಲ್ಲೂಕು ಕಛೇರಿಯ ಎದುರು ಸಾಮೂಹಿಕ ಧರಣಿ ಕಾರ್ಯಕ್ರಮ ನಡೆಯಿತು.

ಮುಖ್ಯ ಬೇಡಿಕೆಗಳ ಮನವಿಯೊಂದನ್ನು ಕುಂದಾಪುರ ತಾಲ್ಲೂಕು ತಹಶೀಲ್ದಾರರವರಿಗೆ ಅರ್ಪಿಸಲಾಯಿತು. ಮನವಿಯನ್ನು ಸ್ವೀಕರಿಸಿದ ತಹಶೀಲ್ದಾರರು ತನ್ನ ಅಧಿಕಾರಿ ವ್ಯಾಪ್ತಿಯಲ್ಲಿರುವ ಕೆಲಸಗಳನ್ನು ಮಾಡುವುದಾಗಿ ಹೇಳಿದರು.

ಸಿ.ಪಿ.ಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್‌ರವರು ಮಾತನಾಡಿ, ಎಲ್ಲಾ ಬಡವರಿಗೆ ಹಳದಿ ಕಾರ್ಡು, ನಿವೇಶನರಹಿತರಿಗೆ ಹಕ್ಕುಪತ್ರ, ಇತ್ಯಾದಿ ಮುಖ್ಯ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಅಧಿಕಾರಿಗಳು ತುರ್ತು ಗಮನ ಹರಿಸಬೇಕೆಂದು ಹೇಳಿ, ಸಾಮೂಹಿಕ ಧರಣಿಯಲ್ಲಿ ಭಾಗವಹಿಸಿದ ಕಾರ್ಮಿಕರಿಗೆ, ಬಡರೈತರು ಕೃಷಿ ಕೂಲಿಕಾರರಿಗೆ ಹಾಗೂ ನಿವೇಶನರಹಿತ ಬಡ ಮಹಿಳೆಯರಿಗೆ ಅಭಿನಂದನೆ ಸಲ್ಲಿಸಿದರು.



- ಮಹಾಬಲ ವಡೇರ ಹೋಬಳಿ

ಬೈಂದೂರು : ರೈತ ಕೃಷಿ ಕೂಲಿಗಾರರ ಬೃಹತ್ ಸಮಾವೇಶ

ಬೈಂದೂರು ಗ್ರಾಮ, ವಿದ್ಯಾನಗರದ ಟಿ.ಜಿ.ಸಾಜಿರವರ ಮನೆ ವಠಾರದಲ್ಲಿ ದಿನಾಂಕ 9.10.2005ರಂದು ರೈತ ಕೃಷಿ ಕೂಲಿಕಾರರ ಸಮಾವೇಶವನ್ನು ಅಖಿಲ ಭಾರತ ಕಿಸಾನ್ ಸಭಾ ರೈತ ಸಂಘದ ಉಡುಪಿ ಜಿಲ್ಲಾ ಕಾರ್ಯದರ್ಶಿ ಶ್ರೀ ಯು.ದಾಸ ಭಂಡಾರಿಯವರು ಉದ್ಘಾಟಿಸಿದರು. ರೈತ, ಕೃಷಿ ಕೂಲಿ ಕಾರ್ಮಿಕರು ತಮ್ಮ ಹಕ್ಕಿಗಾಗಿ ಹೋರಾಟ ಮಾಡಿ, ಬೇಡಿಕೆ ಈಡೇರಿಸುವಂತೆ ಸರಕಾರದ ಮೇಲೆ ಒತ್ತಡ ತರಬೇಕು ಹಾಗೂ ಗ್ರಾಮ ಮಟ್ಟದಲ್ಲಿ ರೈತ ಕೂಲಿಕಾರರನ್ನು ಸಂಘಟಿಸಿ ಸಕ್ರಿಯ ಗ್ರಾಮ ಸಮಿತಿ ರಚಿಸಲು ಮುಂದಾಗಬೇಕು ಎಂದು ಹೇಳಿದರು.



ಸಂಚಾಲನ ಸಮಿತಿಯ ಸದಸ್ಯ ವೆಂಕಟೇಶ ಕೋಣೆಯವರು ಸಂಘದ ಬೇಡಿಕೆಯನ್ನು ವಿವರಿಸಿದರು. ಡಿ.ವೈ.ಎಫ್.ಐ ಕುಂದಾಪುರ ತಾಲ್ಲೂಕು ಕಾರ್ಯದರ್ಶಿ ಅಶ್ವತ್ಥ ಕುಮಾರ್‌ರವರು ರೈತ ಕೂಲಿಕಾರರ ಸಂಘದ ಆವಶ್ಯಕತೆ ಕುರಿತು ಮಾತನಾಡಿದರು.

ಜಾತ್ಯಾತೀತ ಜನತಾದಳ ಬೈಂದೂರು ಕ್ಷೇತ್ರ ಅಧ್ಯಕ್ಷ ಹರೀಶ್ ಬೈಂದೂರು, ಅಂಬೇಡ್ಕರ್ ಸಂಘ ಬೈಂದೂರು ಅಧ್ಯಕ್ಷ ಅಣ್ಣಪ್ಪ, ತಗ್ಗರ್ಸೆ ಸುಬ್ಬಣ್ಣಶೆಟ್ಟಿ, ಮಾಜಿ ಪಂಚಾಯತ್ ಸದಸ್ಯ, ಜನಾರ್ಧನ ಆಚಾರ್, ರೈತಮುಖಂಡ ಮಂಜಯ್ಯ ಮಾಸ್ತರ್‌ರವರು ಸಮಾವೇಶಕ್ಕೆ ಶುಭಾಶಯ ಕೋರಿ ಮಾತನಾಡಿದರು. ಸ್ಥಳೀಯ ಮುಂದಾಳು ಬಿ.ಮಂಜುನಾಥ ಶೇಟ್‌ರವರು ಸಭಾಧ್ಯಕ್ಷತೆ ವಹಿಸಿದ್ದರು. ಸಂಚಾಲಕ ಎ.ಕೃಷ್ಣ ಸ್ವಾಗತಿಸಿದರು. ಎಂ.ಕೃಷ್ಣ ವಂದನಾರ್ಪಣೆ ಮಾಡಿದರು. ಬೋಜರಾಜ್‌ರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

- ಕೋಣಿ ವೆಂಕಟೇಶ್ ಬೈಂದೂರು

ಮದರ ಕಲ್ ಗ್ರಾಮದಲ್ಲಿ ಸರಾಯಿ ನಿಷೇದ ಮಾಡಲು ಒತ್ತಾಯಿಸಿ ಹೋರಾಟ

ಸಾರಾಯಿ ಮಾರಾಟ ನಿಷೇದಕ್ಕಾಗಿ ಒತ್ತಾಯಿಸಿ ದೇವದುರ್ಗ ತಾಲೂಕು 'ಮದರಕಲ್' ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಮಹಿಳೆಯರ ಸ್ತ್ರೀಶಕ್ತಿ ಗುಂಪುಗಳ ನೇತೃತ್ವದಲ್ಲಿ ಜಂಟಿಯಾಗಿ ಕಾಂ.ಹನುಮೇಗೌಡ, ಶರಣಬಸವ ನೇತೃತ್ವದಲ್ಲಿ 3 ತಾಸು ಅಮರಾಪುರ ಕ್ರಾಸ್ ಬಳಿ ರಸ್ತೆ ತಡೆ ಚಳುವಳಿ ನಡೆದಿದೆ. ಪ್ರತಿಭಟನಾಕಾರ ಸಂಗಾತಿಗಳ ಮತ್ತು ಮಹಿಳೆಯರ ಗುಂಪನ್ನು ಹೆದರಿಸಿ ಚದುರಿಸಲು ಕೆಲವು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸರಾಯಿ ಗುತ್ತೆದಾರರು 'ಸರಾಯಿ ಬೇಕು' ಎಂದು ಪ್ರತಿ ಚಳುವಳಿ ನಡೆಸುವವರಂತೆ, ಅಬಕಾರಿ ಇಲಾಖೆ ಅಧಿಕಾರಿಯವರಿಗೆ ಒತ್ತಾಯಿಸಿ - ರಸ್ತೆ ತಡೆ ಚಳುವಳಿ ಮಾಡುವ ಕಾರ್ಯಕರ್ತರಿಗೆ ಪೋಲಿಸ್ ಅಧಿಕಾರಿಗಳ ಎದುರಿಗೇ ಬೆದರಿಕೆ ಹಾಕುತ್ತಿದ್ದರು. ಸಂಘಟನೆಯ ತೀವ್ರವಾದ ಚಳುವಳಿಗೆ ಮಣಿದು ಪೋಲೀಸ್ ಅಧಿಕಾರಿಗಳು ಚಳುವಳಿಕಾರರ ಬಳಿ ಅಬಕಾರಿ ಇಲಾಖೆ ಅಧಿಕಾರಿ ಸಿದ್ರಾಮಪ್ಪನವರನ್ನು ಸ್ಥಳಕ್ಕೆ ಬರುವಂತೆ ಮಾಡಿ ಮದರ ಕಲ್ ಗ್ರಾಮದಲ್ಲಿ ಸಂಪೂರ್ಣ ಸರಾಯಿ ನಿಷೇದ ಮಾಡುತ್ತೇವೆ ಎಂದು ಹೇಳಿದಾಗ ಚಳುವಳಿ ವಾಪಸು ಪಡೆಯಲಾಯಿತು.

ಚಳುವಳಿಗಾರರಿಗೆ ಬೆದರಿಕೆ ಹಾಕಿದನ್ನು ವಿರೋಧಿಸಿದ ಸಿಪಿಐ(ಎಂ) ಕಾರ್ಯದರ್ಶಿ ಪಿ.ಗಿರಿಯಪ್ಪ ಜನಪರ ಚಳುವಳಿ ಮಾಡುವವರಿಗೆ ಬೆದರಿಗೆ ಹಾಕುವವರ ವಿರುದ್ಧ ಸಿಪಿಐ(ಎಂ)ನಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ದೇವದುರ್ಗ ಸಿಪಿಐ ಯವರನ್ನು ಸಿಪಿಐ(ಎಂ) ಪಕ್ಷದ ನಿಯೋಗ ಭೇಟಿ ಮಾಡಿ - ಮದರಕಲ್ ಗ್ರಾಮದ ಭಯದ ವಾತಾವರಣ ನಿವಾರಿಸಬೇಕು ಹಾಗೂ ಕಾರ್ಯಕರ್ತರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಒತ್ತಾಯಿಸಲಾಯಿತು. ನಿಯೋಗದಲ್ಲಿ ಸಿಪಿಎಂ ತಾಲ್ಲೂಕು ಸಮಿತಿ ಸದಸ್ಯರಾದ ತಿಪ್ಪಯ್ಯ ನಾಯಕ, ನರಸಣ್ಣ ನಾಯಕ, ಅಲಿಬಾಬ ಪಟೇಲ್ ಹಾಗೂ ಬಿ.ಅಮರೇಶ ಇದ್ದರು.

ಈ ಹೋರಾಟ ತಾಲ್ಲೂಕಿನ ಸಂಗಾತಿಗಳಿಗೆ ಸ್ಫೂರ್ತಿ ತಂದಿದೆ. 17/9/05ರಂದು ಹೈದರಾಬಾದ್ ಕರ್ನಾಟಕ ವಿಮೋಚನೆ ದಿನ ಹೋರಾಟ ಹಮ್ಮಿಕೊಳ್ಳಲಾಗಿತ್ತು. ಚಳುವಳಿಯಲ್ಲಿ ಮಹಿಳೆಯರು ಸೇರಿ 130 ಜನ ಭಾಗವಹಿಸಿದ್ದರು.

ಅಕ್ಷರ ದಾಸೋಹ ಕೆಲಸಗಾರರ ಸಂಘ ಸಿ.ಐ.ಟಿ.ಯು.ಗೆ ಸಿಕ್ಕಿದ ಜಯ

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಬಂಟ್ವಾಳ ತಾಲೂಕಿನ ವಿಟ್ಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ಕೆಲಸದವರಾದ ಶ್ರೀಮತಿ ಇಂದಿರಾ ಇವರು 2004-05ರಲ್ಲಿ ಸರ್ಕಾರದ ನಿಯಮ ಪ್ರಕಾರ ಆಯ್ಕೆಯಾಗಿದ್ದು ಇವರನ್ನು 2005-06ನೇ ಜೂನ್ 1ನೇ ತಾರೀಕಿಗೆ ಶಾಲೆಗೆ ಹೋಗುವಾಗ ವಿಟ್ಲ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರು ಸಂಘ ಪರಿವಾರದ ಬಿ.ಜೆ.ಪಿ.ಯ ಪುಡಾರಿಗಳಾಗಿದ್ದು ಇವರು ರಾಜಕೀಯ ದುರುದ್ದೇಶದಿಂದ ಅಕ್ಷರ ದಾಸೋಹ ಕೆಲಸಗಾರರ ಸಂಘ(ಸಿಐಟಿಯು)ದ ಸದಸ್ಯೆಯಾದ ಶ್ರೀಮತಿ ಇಂದಿರಾ ಅವರನ್ನು ಕೆಲಸದಿಂದ ವಜಾ ಮಾಡಿದರು. ಈ ಬಗ್ಗೆ ಜೂನ್ 1 ರಿಂದ ಗ್ರಾಮ ಪಂಚಾಯತ್ ತಾಲೂಕು ಪಂಚಾಯತ್‌ಗಳಿಗೆ ನ್ಯಾಯಕ್ಕಾಗಿ ಸಂಘದ ವತಿಯಿಂದ ಮನವಿ ನೀಡಿದಾಗ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ವಿಟ್ಲ ಸರಕಾರಿ ಪ್ರಾಥಮಿಕ ಶಾಲೆಯ ಎದುರು ತಾ. 19.07.05ರಂದು ಪ್ರತಿಭಟನೆ ನಡೆಸಿ ತಹಶೀಲ್ದಾರರ ಮುಖಾಂತರ ಜಿಲ್ಲಾಧಿಕಾರಿಯವರಿಗೆ ಮನವಿ ನೀಡಲಾಯಿತು. ಈ ಪ್ರತಿಭಟನೆಯಲ್ಲಿ ಅಕ್ಷರ ದಾಸೋಹ ಕೆಲಸಗಾರರು ಭಾಗವಹಿಸದಂತೆ ವಿಟ್ಲ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸಂಘ ಪರಿವಾರದ ಗೂಂಡಾಗಳು ಬಾರಿ ಪ್ರಯತ್ನ ನಡೆಸಿದರೂ ಅದನ್ನು ಎದುರಿಸಿ ಪ್ರತಿಭಟನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಲೆಗೆ ಅಪಾರ ಹಾನಿಯಾಗಿದೆ ಹಾಗೂ ಭಯದ ವಾತಾವರಣ ನಿರ್ಮಿಸಿದ್ದಾರೆ ಎಂದು ವಿಟ್ಲ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ವಿಟ್ಲ ಗ್ರಾಮ ಪಂಚಾಯತ್ ಅಧ್ಯಕ್ಷರು ಬಂಟ್ವಾಳ ತಾಲೂಕು ಅಕ್ಷರ ದಾಸೋಹ ಕೆಲಸಗಾರರ ಸಂಘದ ಸಂಚಾಲಕ ಎ.ರಾಮಣ್ಣ ವಿಟ್ಲ ಇವರ ಮೇಲೆ ವಿಟ್ಲ ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡಿ ಕೇಸು ದಾಖಲಿಸಬೇಕೆಂದು ವಿಟ್ಲ ವಿಧಾನಸಭಾ ಶಾಸಕರಾದ ಬಿ.ಜೆ.ಪಿ.ಯ ಪದ್ಮನಾಭ ಕೊಟ್ಟಾರಿ ಹಾಗೂ ಬಿಜೆಪಿ ಲೋಕಸಭಾ ಸದಸ್ಯ ಸದಾನಂದ ಗೌಡ ಇವರು ಪೋಲೀಸರ ಮೇಲೆ ಒತ್ತಡ ತಂದು ರಾಜಕೀಯ ಪಿತೂರಿ ನಡೆಸಿದರು.

ವಿಟ್ಲ ಪೋಲಿಸ್ ಠಾಣೆಯಲ್ಲಿ ಇವರ ರಾಜಕೀಯ ಪಿತೂರಿ ನಡೆಯಲಿಲ್ಲ. ಎಲ್ಲಾ ಕುತಂತ್ರವನ್ನು ಎದುರಿಸಿ ವಿಟ್ಲ ಗ್ರಾಮ ಪಂಚಾಯತ್ ಕಛೇರಿ ಎದುರು ತಾ. 20.08.05ರಂದು ಪ್ರತಿಭಟನೆ ನಡೆಸಿ ಪಂಚಾಯತ್ ಕಾರ್ಯದರ್ಶಿ ಮುಖಾಂತರ ಜಿಲ್ಲಾ ಪಂಚಾಯತ್ ಮುಖ್ಯಾಧಿಕಾರಿ ಮಂಗಳೂರು ಇವರಿಗೆ ಮನವಿ ನೀಡಲಾಯಿತು. ಈ ಪ್ರತಿಭಟನೆ ನಡೆಯುವ ಸಂದರ್ಭದಲ್ಲಿ ಅಕ್ಷರ ದಾಸೋಹ ಕೆಲಸಗಾರರು ಭಾಗವಹಿಸದಂತೆ ತಡೆಯಲು ವಿಟ್ಲ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸಂಘ ಪರಿವಾರದ ಗೂಂಡಾಗಳು ಕಾರ್ಯಕರ್ತರಿಗೆ ಬೆದರಿಸಿದರೂ ಇದನ್ನು ಎದುರಿಸಿ ಸುಮಾರು 75 ಮಂದಿ ಭಾಗವಹಿಸಿ ಪ್ರತಿಭಟನೆಯನ್ನು ನಡೆಸಿದರು. ಈ ಎಲ್ಲಾ ಅಕ್ಷರ ದಾಸೋಹ ಕೆಲಸಗಾರರು ಹಾಗೂ ಸಿಐಟಿಯುನ ನಿರಂತರ ಹೋರಾಟದಿಂದ ತಾ. 5.10.05ರಂದು ಕೆಲಸದಿಂದ ವಜಾ ಮಾಡಿದ ಶ್ರೀಮತಿ ಇಂದಿರಾ ಅವರನ್ನೇ ವಿಟ್ಲ ಹಿರಿಯ ಪ್ರಾಥಮಿಕ ಶಾಲೆಗೆ ಮರುನೇಮಕ ಮಾಡಲು ತಾಲೂಕು ಪಂಚಾಯತ್ ಕಾರ್ಯದರ್ಶಿ ಅವರಿಂದ ಆದೇಶ ಬಂದಿರುತ್ತದೆ. ಇದು ನಮ್ಮ ಹೋರಾಟಕ್ಕೆ ಸಿಕ್ಕಿದ ಜಯ ಎಂದು ಸಂಘದ ಸಂಚಾಲಕ ಎ.ರಾಮಣ್ಣ ವಿಟ್ಲ ಅವರು ಅಭಿಪ್ರಾಯ ಪಟ್ಟಿದ್ದಾರೆ.

- ಪ್ರೇಮ ವಿಟ್ಲ

ಮಹಿಳೆಯರ ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಮತ್ತು ಅಂಗನವಾಡಿ ನೌಕರರ ಬದುಕಿನ ಭದ್ರತೆಗೆ ಒತ್ತಾಯಿಸಿ

ಅಂಗನವಾಡಿ ನೌಕರರ 5ನೇ ಅಖಿಲ ಭಾರತ ಸಮ್ಮೇಳನ

ಬೆಂಗಳೂರಿನಲ್ಲಿ ಭರದ ಸಿದ್ಧತೆ

ಭಾರತವು ಸ್ವಾತಂತ್ರ್ಯ ಗಳಿಸಿ 57 ವರ್ಷಗಳು ಉರುಳಿ ಹೋದರೂ, ಮಾನವ ಅಭಿವೃದ್ಧಿಯಲ್ಲಿ ಭಾರತದ ಸಾಧನೆ ದಯನೀಯವಾಗಿದೆ. ವಿಶ್ವದ ಮಾನವ ಅಭಿವೃದ್ಧಿ ವರದಿ 2005 ಇತ್ತೀಚೆಗೆ ಬಿಡುಗಡೆಯಾಗಿದೆ. 177 ರಾಷ್ಟ್ರಗಳ ಸಮೀಕ್ಷೆಯಲ್ಲಿ ಭಾರತ 121ನೇ ಸ್ಥಾನದಿಂದ 127ನೇ ಸ್ಥಾನಕ್ಕೆ ಕುಸಿದಿದೆ. 103 ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾನವ ಬಡತನದಲ್ಲಿ ಭಾರತ 58ನೇ ಸ್ಥಾನದಲ್ಲಿದೆ. ಲಿಂಗ ತಾರತಮ್ಯದಲ್ಲಿ 248 ರಾಷ್ಟ್ರಗಳ ಪೈಕಿ 98ನೇ ಸ್ಥಾನದಲ್ಲಿದೆ. ಕೆಲವು ಮುಖ್ಯ ಮಾನವ ಅಭಿವೃದ್ಧಿ ಸೂಚ್ಯಾಂಕಗಳ ವಿಚಾರದಲ್ಲಿ ಶಿಶು ಮರಣದ ದರ (ಐಎಂಆರ್), ತಾಯಂದಿರ ಮರಣದ ದರ (ಎಮ್‌ಎಮ್‌ಆರ್)ಗಳು ಬಹು ತೀವ್ರವಾಗಿಯೇ ಇದೆ. ಸಾಕ್ಷರತಾ ದರ ಆದರಲ್ಲೂ ಮಹಿಳೆಯರ ಸಾಕ್ಷರತಾ ದರವು ಹಾಗೂ ಅವರ ಪೈಕಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರಲ್ಲಿ ಬಹು ಕೆಳಮಟ್ಟದಲ್ಲಿದೆ. ಶಿಶುಮರಣ ದರ ಜನರಲ್ಲಿ ಬಹು ಕೆಳಮಟ್ಟದಲ್ಲಿದೆ. ಶಿಶುಮರಣದ ದರವು ಹುಟ್ಟಿದ ಸಾವಿರ ಮಕ್ಕಳ ಪೈಕಿ 44 ರಷ್ಟಿದೆ. 3ನೇ 1 ಭಾಗದಷ್ಟು ನವಜಾತ ಶಿಶುಗಳು ಕನಿಷ್ಠ ತೂಕಕ್ಕಿಂತಲೂ ಕಡಿಮೆ ಇರುವರು. ಇದು ಗರ್ಭಿಣಿಯರ ದುರ್ಬಲ ಆರೋಗ್ಯ ಸ್ಥಿತಿಯನ್ನು ಬಿಂಬಿಸುತ್ತಿದೆ.

ಈ ಸ್ಥಿತಿಯನ್ನು ಸ್ವಲ್ಪ ಸುಧಾರಿಸಬೇಕೆಂದರೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್)ಯನ್ನು ಬಲಿಷ್ಠಪಡಿಸುವುದರೊಟ್ಟಿಗೆ ದೇಶದ ಆರ್ಥಿಕ ನೀತಿ ಭಾರತದ ಅಭಿವೃದ್ಧಿಗೆ ಪೂರಕವಾಗಿ ಬದಲಾದಾಗ ಮಾತ್ರ ಸಾಧ್ಯ ಎಂಬುದು ಹಾಗೂ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳಿರುವ ಐಸಿಡಿಎಸ್‌ನ್ನು ಸಾರ್ವತ್ರೀಕರಣ ಮಾಡಬೇಕೆಂಬುದು ಈಗಾಗಲೇ 2005-06ರ ಬಜೆಟ್‌ನಲ್ಲಿ 1,88,168 ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಲಾಗಿದೆ. ಅದರ ಪ್ರಕಾರ 11 ಸಾವಿರ ಅಂಗನವಾಡಿಗಳು ಕರ್ನಾಟಕ ರಾಜ್ಯಕ್ಕೆ ಬರುತ್ತಿವೆ.

ಈ ಕೇಂದ್ರಗಳನ್ನು ಬಲಿಷ್ಠಪಡಿಸುವುದು ಮತ್ತು ಅಲ್ಲಿಯ ನೌಕರರ ಪರಿಸ್ಥಿತಿಯನ್ನು ಸುಧಾರಿಸುವತ್ತಾ ಕೆಳಕಂಡ ಅಂಶಗಳನ್ನು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದೆ.

1ನೇ ತರಗತಿಗೆ ಸೇರುವ ಮಕ್ಕಳು ಮೊದಲು ಅಂಗನವಾಡಿ ಕೇಂದ್ರಗಳಿಂದ ವರ್ಗಾವಣೆ ಪತ್ರ ಕೊಡುವಂತೆ ಆಗಬೇಕು.

ನಿವೃತ್ತಿ ವೇತನವನ್ನು ನಿಗದಿ ಮಾಡಬೇಕು. ಈ ಅಂಶಗಳನ್ನು ಒತ್ತಾಯಿಸಿ ಸರ್ಕಾರದ ಮತ್ತು ಸಮಾಜದ ಗಮನ ಸೆಳೆಯಲು ಮತ್ತು ಮುಂದಿನ ಹೋರಾಟವನ್ನು ರೂಪಿಸಲು ಕರ್ನಾಟಕದಲ್ಲಿ ಅಖಿಲ ಭಾರತ 5ನೇ ಸಮ್ಮೇಳನ ನಡೆಯುತ್ತಿದೆ. ಈ ಸಮ್ಮೇಳನಕ್ಕೆ ಸರ್ವ ಸಿದ್ಧತೆ ನಡೆಸಲು ರಾಜ್ಯದ ಬುದ್ಧಿಜೀವಿಗಳು, ಖ್ಯಾತ ಬರಹಗಾರರು, ಸಂಘಟಿತ, ಅಸಂಘಟಿತ ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ, ಯುವಜನ, ರೈತ-ಕೃಷಿ ಕೂಲಿಕಾರರ ಮತ್ತು ಮಹಿಳೆಯರ ವಿಶಾಲ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಖ್ಯಾತ ಬಂಡಾಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿದ್ದಾರೆ. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ವಿ.ಜೆ.ಕೆ ನಾಯರ್ ಕಾರ್ಯಾಧ್ಯಕ್ಷರಾಗಿದ್ದಾರೆ.

ನೌಕರರ ಸಮ್ಮೇಳನದ ಸಲುವಾಗಿ ಅಂಗನವಾಡಿ ಕೇಂದ್ರಗಳಿರುವ ಹಳ್ಳಿಗಳು, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವ್ಯಾಪಕ ಗೋಡೆ ಬರಹಗಳನ್ನು ಮಾಡಲಾಗುತ್ತಿದೆ.

ಸಮ್ಮೇಳನದ ಯಶಸ್ಸಿಗೆ ಸಂಬಂಧಿಸಿ ಎಲ್ಲಾ ತಾಲ್ಲೂಕುಗಳಲ್ಲಿ ಸರ್ವಸದಸ್ಯರ ಸಭೆಗಳು ನಡೆಯುತ್ತಿದ್ದು, ದೇಶದ ವಿವಿಧ ರಾಜ್ಯಗಳಲ್ಲಿ ರಾಜ್ಯ ಸಮ್ಮೇಳನಗಳು ನಡೆಯುತ್ತಿವೆ.

ಈ ಸಮ್ಮೇಳನಕ್ಕೆ 22 ರಾಜ್ಯಗಳಿಂದಲೂ 600ಕ್ಕೂ ಅಧಿಕ ಪ್ರತಿನಿಧಿಗಳು ಆಗಮಿಸುತ್ತಿದ್ದಾರೆ.

ನವೆಂಬರ್ 8ರಂದು ಬೆಳಿಗ್ಗೆ 10-00 ಗಂಟೆಗೆ ಟೌನ್‌ಹಾಲ್‌ನಲ್ಲಿ ಉದ್ಘಾಟನೆ. ಉದ್ಘಾಟನೆಯನ್ನು ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ.ಚಿತ್ತಬ್ರಥ ಮಜುಂದಾರ್ ಮಾಡಲಿದ್ದಾರೆ.

ನವೆಂಬರ್ 8ರಂದು ಮದ್ಯಾಹ್ನ 12.00ಕ್ಕೆ ರೈಲ್ವೆ ನಿಲ್ದಾಣದಿಂದ ಅಂಗನವಾಡಿ ನೌಕರರ ಬೃಹತ್ ಕೆಂಪು ಸಮವಸ್ತ್ರಧಾರಿಗಳ ರ್‍ಯಾಲಿಯು ಹೊರಟು ಮಲ್ಲೇಶ್ವರಂ ಆಟದ ಮೈದಾನದಲ್ಲಿ ಸೇರಿ ಅಲ್ಲಿ ಬಹಿರಂಗ ಸಭೆ ನಡೆಯಲಿದೆ.

ನವೆಂಬರ್ 9ರಂದು ಸಾಯಂಕಾಲ 5 ಗಂಟೆಗೆ "ಐಸಿಡಿಎಸ್-ಸರ್ಕಾರದ ಪಾತ್ರ ವಿಚಾರ ಸಂಕಿರಣ" ಉದ್ಘಾಟನೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಂದ.

ಮುಖ್ಯ ಅತಿಥಿಗಳಾಗಿ ಮಾನ್ಯಮುಖ್ಯಮಂತ್ರಿಗಳಾದ ಧರ್ಮಸಿಂಗ್, ಸಿಪಿಐ(ಎಂ) ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ.ಪ್ರಕಾಶ್ ಕಾರಟ್, ಆರ್ಥಿಕ ತಜ್ಞ-ಜಯತಿಘೋಷ್‌ರವರು ಪಾಲ್ಗೊಳ್ಳಲಿದ್ದಾರೆ. ಅಂದು ಸಮ್ಮೇಳನ ಸ್ಮರಣ ಸಂಚಿಕೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರಾದ ಶ್ರೀಮತಿ ಭಾಗೀರತಿ ಮರುಳಸಿದ್ದನಗೌಡರು ಬಿಡುಗಡೆ ಮಾಡಲಿದ್ದಾರೆ.

ನವೆಂಬರ್ 10ರಂದು ಅಂಗನವಾಡಿ ನೌಕರರ ಅಖಿಲ ಭಾರತ ಚಳುವಳಿಗೆ ಸಂಬಂಧಿಸಿದ ಪುಸ್ತಕ ಬಿಡುಗಡೆಯನ್ನು AIDWA ದ ಅ.ಭಾ. ಉಪಾಧ್ಯಕ್ಷೆ ಕಾಂ.ಮಲ್ಲು ಸ್ವರಾಜ್ಯಂ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಉದಯವಾಣಿ ಪತ್ರಿಕಾ ಸಂಪಾದಕರಾದ ಶ್ರೀಮತಿ ಆರ್.ಪೂರ್ಣಿಮಾರವರು ಪಾಲ್ಗೊಳ್ಳಲಿದ್ದಾರೆ.

ಸಮಾರೋಪದಲ್ಲಿ ಸಿಐಟಿಯು ಅಖಿಲಭಾರತ ಅಧ್ಯಕ್ಷರಾದ ಕಾಂ. ಎಂ.ಕೆ.ಪಂಧೆ ಹಾಗೂ ಅಂಗನವಾಡಿ ನೌಕರರ ಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ, ಕಾಂ. ಹೇಮಲತಾ ಮತ್ತು ಅಧ್ಯಕ್ಷರಾದ ನೀಲಿಮಾ ಮೊತ್ರಾ ಭಾಗವಹಿಸಲಿದ್ದಾರೆ. ಸಮ್ಮೇಳನದ ಅಂಗವಾಗಿ ರಾಜ್ಯದಾದ್ಯಂತ ತಾಲ್ಲೂಕು ಕೇಂದ್ರಗಳಲ್ಲಿ ಸಂಘಟನೆಯ ಬಾವುಟ ಹಾರಿಸಿ ಧ್ವಜ ದಿನಾಚರಣೆ ನಡೆಸಲಾಗಿದೆ. ○

ಮುಷ್ಕರದತ್ತ ಮೈಕೊ ಕಾರ್ಮಿಕರು

ಬೆಂಗಳೂರಿನ ಎರಡು ಘಟಕಗಳು ಸೇರಿದಂತೆ ರಾಷ್ಟ್ರದಾದ್ಯಂತ ಇರುವ ಮೈಕೋ ಕಾರ್ಖಾನೆಯ ನಾಲ್ಕು ಘಟಕಗಳ ಪೈಕಿ ಮೂರು ಘಟಕಗಳಲ್ಲಿನ ಸಹಸ್ರಾರು ಕಾರ್ಮಿಕರು ನವೆಂಬರ್ ಎರಡನೇ ವಾರದಿಂದ ಮುಷ್ಕರಕ್ಕಿಳಿಯುವ ಸಾಧ್ಯತೆಗಳು ನಿಚ್ಚಳವಾದಂತೆ ತೋರುತ್ತಿದೆ. ಜೈಪುರದ ಘಟಕವೂ ಮುಷ್ಕರವನ್ನು ಸೇರುವ ಸಾಧ್ಯತೆಗಳಿವೆ. ಮಾಲೀಕವರ್ಗದ ಅಗಾಧ ಶೋಷಣೆಯ ಸ್ವರೂಪವೇನು? ಕಾರ್ಮಿಕ ವರ್ಗದ ಬೇಡಿಕೆ ಏನು? ಅದಕ್ಕೆ ಒಪ್ಪದ ಆಡಳಿತ ಮಂಡಳಿಯ ಮೊಂಡಾಟ ಎಂಥದ್ದು? ಈ ಬಗ್ಗೆ ಓದಿ.

ರಕ್ತ ಬಸಿದು, ಬೆವರು ಸುರಿಸಿ ದುಡಿಯುವ ಕಾರ್ಮಿಕರ ಶ್ರಮಕ್ಕೆ ತಕ್ಕ ಪ್ರತಿಫಲ ನೀಡಬೇಕೆಂಬ ಮನೋಭಾವ ಬಂಡವಾಳಶಾಹಿ ವರ್ಗಕ್ಕೆ ಎಂದಿಗೂ ಬರಲಾರದು. ಕಾರ್ಮಿಕ ವರ್ಗವನ್ನು ಶೋಷಿಸುವ ಅದರ ಶೋಷಕ ಗುಣ ಎಂದಿಗೂ ಬದಲಾಗದು. ದುಡಿಮೆಗಾರರ ದುಡಿಮೆಯಿಂದ ಎಷ್ಟೇ ದೊಡ್ಡ ಲಾಭವನ್ನು ಕೊಳ್ಳೆ ಹೊಡೆದರೂ ಅದರ ಒಂದು ಸಣ್ಣ ಪಾಲನ್ನು ಕಾರ್ಮಿಕ ವರ್ಗದೊಂದಿಗೆ ಹಂಚಿಕೊಳ್ಳಲು ಆಡಳಿತ ವರ್ಗಕ್ಕೆ ಮನಸ್ಸಾಗದು. ಉತ್ಪಾದಕತೆ ಮಾತ್ರ ಹೆಚ್ಚಬೇಕು. ಉತ್ಪಾದನೆ ಮಾತ್ರ ಏರಬೇಕು.

ಇತ್ತ ಹಣದುಬ್ಬರ, ಬೆಲೆ ಏರಿಕೆ ನಿರಂತರವಾಗಿ ಏರುಮುಖವಾಗಿರುವ ಜೀವನವೆಚ್ಚಗಳಿಂದ ಜರ್ಜರಿತವಾಗಿರುವ ಕಾರ್ಮಿಕ ವರ್ಗವು ಅದನ್ನು ಅನುಭವಿಸಿಕೊಂಡೇ ಹೋಗಬೇಕೇ ಹೊರತು ಉತ್ತಮ ಬದುಕಿನ ಕನಸನ್ನೂ ಕಾಣಬಾರದು. ಹೆಚ್ಚೇನೂ ಕೇಳಬಾರದು ಎನ್ನುತ್ತದೆ ಮಾಲಿಕವರ್ಗ.

ಮೈಕೊ ಕಾರ್ಖಾನೆಯಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಮಿಕರ ನಡುವೆ ಈ ಹಿಂದೆ ಆಗಿರುವ ವೇತನ ಒಪ್ಪಂದದ ಅವಧಿಯು ಡಿಸೆಂಬರ್ 2004ಕ್ಕೆ ಮುಗಿದಿದೆ. 2005 ಜನವರಿಯಿಂದ ಹೊಸ ಮಾತುಕತೆ ನಡೆದು ಹೊಸ ಒಪ್ಪಂದ ಜಾರಿಯಾಗಬೇಕಿತ್ತು. ಆದರೆ ಮಾಲೀಕ ವರ್ಗದ ತುಡಿತವೇ ಬೇರೆ ಇದೆ. ಮೈಕೋ ಬೆಂಗಳೂರಿನ ಘಟಕದಲ್ಲಿ ಶೇ.13ರಷ್ಟು, ನಾಗನಾಥಪುರದಲ್ಲಿ ಶೇ.16ರಷ್ಟು ಉತ್ಪಾದಕತೆ (Productivity) ಹೆಚ್ಚಬೇಕು ಎನ್ನುತ್ತಿದೆ ಮಾಲೀಕ ವರ್ಗ. ಅಂದರೆ ಕಾರ್ಮಿಕರು ಇನ್ನಷ್ಟು ಹೆಚ್ಚು ವೇಗವಾಗಿ, ಇನ್ನಷ್ಟು ಉಸಿರು ಬಿಗಿ ಹಿಡಿದು ಕೆಲಸ ಮಾಡಬೇಕು. ಉತ್ಪಾದನೆ ಹೆಚ್ಚಿಸಬೇಕು. ಕಂಪನಿಯ ಲಾಭ ಇನ್ನಷ್ಟು ಹೆಚ್ಚಬೇಕು.

ಕಾರ್ಮಿಕರಿಗೇನು ಪ್ರತಿಫಲ ? 1998ರಲ್ಲಿ ಮೈಕೋ ಕಾರ್ಖಾನೆಯು ಎಲ್ಲ ತೆರಿಗೆ ಪಾವತಿಯ ನಂತರ 69 ಕೋಟಿ ರೂಪಾಯಿಗಳ ನಿವ್ವಳ ಲಾಭಗಳಿಸಿದ್ದಾಗ ಯಾವುದೇ ರೀತಿಯ ಉತ್ಪಾದಕತೆಯ ಹೆಚ್ಚಳವಿಲ್ಲದೆ ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳಿಗೆ ತಲಾ 2375 ರೂಗಳ ವೇತನ ಹೆಚ್ಚಳದ ಒಪ್ಪಂದ ಸಾಧ್ಯವಾಗಿತ್ತು. ಆದರೆ ಈಗ ಈ ಕಾರ್ಖಾನೆಯ ನಿವ್ವಳ ಲಾಭ 374.8 ಕೋಟಿ ರೂಗಳಾಗಿರುವಾಗ ವೇತನ ಹೆಚ್ಚಳದ ಬದಲಿಗೆ ಆಡಳಿತ ಮಂಡಳಿಯು ಉತ್ಪಾದಕತೆಯ ಹೆಚ್ಚಳಕ್ಕೆ ಒತ್ತಡ ಹಾಕುತ್ತಿರುವುದು ಮಾಲೀಕ ವರ್ಗದ ಸುಲಿಗೆಯ ಗುಣದ ಸಂಕೇತದಂತಿದೆ.

ಕಾರ್ಖಾನೆಯ ಒಟ್ಟಾರೆ ವೆಚ್ಚದಲ್ಲಿ ಹಿಂದೆ ಶೇ.18.75ರಷ್ಟು 'ಕಾರ್ಮಿಕ ಸಂಬಂಧಿ ವೆಚ್ಚ'ವನ್ನಾಗಿ ಮಾಡಲಾಗುತ್ತಿತ್ತು ಇದೀಗ ಕಾರ್ಮಿಕರಿಗಾಗಿ ಕಾರ್ಖಾನೆ ಮಾಡುವ ಈ ವೆಚ್ಚವು ಶೇ.14.52ಕ್ಕೆ ಕುಸಿದಿದೆ. ಆದರೂ ಸೂಕ್ತ ವೇತನ ಹೆಚ್ಚಳಕ್ಕೆ ಆಡಳಿತ ಮಂಡಳಿ ಒಪ್ಪುತ್ತಿಲ್ಲ. 10 ಸುತ್ತು ಮಾತುಕತೆ ನಡೆದಿದೆ. ಆದರೆ ಅದು ಫಲಪ್ರದವಾಗಿಲ್ಲ. ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳಿಗೆ ತಲಾ 1250 ರೂಗಳ ಕಂಪನಿ ವೆಚ್ಚಕ್ಕೆ ಮಾತ್ರ ಆಡಳಿತ ಮಂಡಳಿ ಸಿದ್ಧವಿದೆ. ಇದರ ಜೊತೆಗೆ ಉತ್ಪಾದಕತೆ ಹೆಚ್ಚಳದ ಷರತ್ತು ಇದೆ. ಆದರೆ ಕಾರ್ಮಿಕರು 1998ರಕ್ಕಿಂತ ಉತ್ತಮ ವೇತನ ಹೆಚ್ಚಳವನ್ನು ಮತ್ತು ಉತ್ಪಾದಕತೆಯಲ್ಲಿ ಹೆಚ್ಚಳದ ಒಪ್ಪಂದವಾದರೆ ಮತ್ತೆ ಅದಕ್ಕೆ ತಕ್ಕ ಪ್ರತಿಫಲವನ್ನು ನಿರೀಕ್ಷಿಸುತ್ತಿದ್ದಾರೆ.

ಪರಿಸರ ಮಾಲಿನ್ಯ ನಿಯಂತ್ರಣ ಮಾನದಂಡಗಳಲ್ಲಿ ಬದಲಾವಣೆಗಳಾಗಿವೆ. ಹಳೆಯ ತಂತ್ರಜ್ಞಾನದ ಡೀಸೆಲ್ ಪಂಪ್‌ಗಳಿಗೆ ಈಗ ಬೇಡಿಕೆ ಇಲ್ಲ. ಹೊಸದನ್ನು ಉತ್ಪಾದಿಸಬೇಕಿದೆ ಎಂದೆಲ್ಲಾ ಆಡಳಿತ ಮಂಡಳಿ ಸಬೂಬು ಹೇಳುತ್ತಿದ್ದರೂ ಸಹ ಕಂಪನಿಯ 'ಬ್ಯಾಲನ್ಸ್ ಶೀಟ್' - ಲಾಭದ ಮೊತ್ತ ಇತ್ಯಾದಿಗಳು ಕಂಪನಿ ಹೇಳುವ ಕಷ್ಟಗಳನ್ನೇನೂ ಪ್ರತಿಫಲಿಸುತ್ತಿಲ್ಲ.

ಮಹಾರಾಷ್ಟ್ರದ ನಾಸಿಕ್‌ನಲ್ಲಿಯೂ ಕಾರ್ಮಿಕರಿಗೆ ಸಮಸ್ಯೆಗಳಿವೆ. ಅಲ್ಲಿ ಕೇವಲ 610 ರೂಗಳಷ್ಟು ಮಾತ್ರವೇ ವೇತನ ಹೆಚ್ಚಳವಾಗಿದೆ. ನಿಗದಿತ ಉತ್ಪಾದನೆಗೆ 17.5ರಷ್ಟು ಸಮಯವನ್ನು ಕಡಿತ ಮಾಡಲಾಗಿತ್ತು. ರಾಜಸ್ಥಾನದ ಜೈಪುರದ ಘಟಕದಲ್ಲಿ 800 ಕಾರ್ಮಿಕರ ನಡುವೆ 9 ಜನರಿಗೆ ಮಾತ್ರ ವೇತನ ಹೆಚ್ಚಳ ಮಾಡಿ, ಕೇವಲ 150 ಜನ ಕಾರ್ಮಿಕರಿಗೆ ಮಾತ್ರ ಸ್ವಲ್ಪ ಮಟ್ಟಿನ ವೇತನ ಹೆಚ್ಚಳ ಮಾಡುವ ತಂತ್ರ ಅನುಸರಿಸಲಾಗಿದೆ. ಹೀಗಾಗಿ ಆ ಬಗ್ಗೆ ಕಾರ್ಮಿಕರ ನಡುವೆ ಅಸಮಾಧಾನವಿದೆ. ಅವರೂ ಸಹ ಮುಷ್ಕರಕ್ಕೆ ಸೇರುವ ಸಾಧ್ಯತೆಗಳಿವೆ.

ಈ ನಾಲ್ಕು ಮೈಕೊ ಘಟಕಗಳ ಕಾರ್ಮಿಕರ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಸಮನ್ವಯ ಸಮಿತಿ ರಚಿಸಲಾಗಿದೆ.

ಸಿಐಟಿಯು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ರಾಷ್ಟ್ರೀಯ ಉಪಾಧ್ಯಕ್ಷರೂ ಹಾಗೂ ಮೈಕೊ ಬೆಂಗಳೂರು ಮತ್ತು ನಾಗನಾಥಪುರ ಘಟಕಗಳ ಕಾರ್ಮಿಕ ಸಂಘಗಳ ಅಧ್ಯಕ್ಷರೂ ಆಗಿರುವ ಕಾಂ.ವಿ.ಜೆ.ಕೆ ನಾಯರ್‌ರವರು ಈ ಸಮನ್ವಯ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಮತ್ತು ಒಟ್ಟು ಚಳುವಳಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಈ ಸಮನ್ವಯ ಸಮಿತಿಯನ್ನು ಗುರುತಿಸಲು ಹಾಗೂ ಬೇಡಿಕೆಗಳನ್ನು ಪರಿಗಣಿಸಲು ಆಡಳಿತ ಮಂಡಳಿ ಸಿದ್ಧವಿಲ್ಲ. ಅದಕ್ಕೆ ಈಗ ಬೇಕಿರುವುದೇನೆಂದರೆ ಹೇಗಾದರೂ ಸರಿ ಕಾರ್ಖಾನೆಯಲ್ಲಿ ಒಟ್ಟಾರೆ ಸರಾಸರಿ ಶೇ.30ರಷ್ಟು ಉತ್ಪಾದಕತೆಯನ್ನು ಹೆಚ್ಚಿಸುವುದು.

ಅಕ್ಟೋಬರ್ 16ರಂದು ಬೆಂಗಳೂರಿನಲ್ಲಿ ಸಮನ್ವಯ ಸಮಿತಿ ಸಭೆ ನಡೆದಿದೆ. ಅಕ್ಟೋಬರ್-ನವೆಂಬರ್ ಮೊದಲ ವಾರಗಳೊಳಗೆ ಉತ್ತಮ ವೇತನ ಒಪ್ಪಂದದ ಸೂಚನೆಗಳು ಕಂಡುಬರದಿದ್ದರೆ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ.

ಅಕ್ಟೋಬರ್ 18ರಂದು ಈ ಸಂಬಂಧ ಕೊಡಲು ಉದ್ದೇಶಿಸಿದ್ದ ನೋಟೀಸ್‌ನ್ನು ಕಾರ್ಮಿಕರ ಸಮ್ಮುಖದಲ್ಲಿ ಸ್ವೀಕರಿಸಲು ನಿರ್ದೇಶಕರು ಸಿದ್ಧವಿರಲಿಲ್ಲ. ಬೆಂಗಳೂರಿನ ಮೈಕೋ ಘಟಕದಲ್ಲಿನ ಆಡಳಿತ ಕಛೇರಿಯ ಮುಂದೆ ಸೇರಿದ ಕಾರ್ಮಿಕರು

ಪುಟ 9 ಕ್ಕೆ

ಕಾಶ್ಮೀರ ಕಣಿವೆಯಲ್ಲೀಗ ಸಾವಿನ ರುದ್ರ ನರ್ತನವೇ ನಡೆದಿದೆ. ಕಳೆದ 120 ವರ್ಷಗಳಲ್ಲಿ ಕಂಡರಿಯದ ಭೀಕರ ಭೂಕಂಪದಿಂದ ಬೀದಿ ಪಾಲಾಗಿರುವ ಲಕ್ಷಾಂತರ ಜನರನ್ನು ಮೈಕೊರೆಯುವ ಶೀತಲ ಚಳಿಯಿಂದ-ಹಸಿವಿನಿಂದ ರಕ್ಷಿಸುವುದು ಹೇಗೆ? ಗಾಯಾಳುಗಳ ಚಿಕಿತ್ಸೆ ಹೇಗೆಂದು ಆಡಳಿತ - ಸಂಘ ಸಂಸ್ಥೆಗಳು ನಾಗರೀಕರು ಶ್ರಮಿಸುತ್ತಿದ್ದಾರೆ.

ಭೂಕಂಪದ ತೀವ್ರತೆಯೇನೋ ರಿಕ್ಟರ್ ಮಾಪಕದಲ್ಲಿ 7.6ರಷ್ಟು ಎಂದು ದಾಖಲಾಗಿದೆ. ಆದರೆ ಪೈಶಾಚಿಕ ಮನಸ್ಸಿನ ಭಯೋತ್ಪಾದಕರ ಕ್ರೌರ್ಯವನ್ನು ಅಳೆಯುವುದಾದರೂ ಹೇಗೆ? ಭೂಕಂಪ ಪರಿಹಾರ ಕಾರ್ಯಾಚರಣೆಗಳಲ್ಲಿ ಹಗಲಿರುಳು ಶ್ರಮಿಸುತ್ತಿರುವ ಸಿಪಿಐ(ಎಂ) ಪಕ್ಷದ ಮುಖಂಡರ ಮೇಲೆ ಅವರು ಪೈಶಾಚಿಕ ದಾಳಿ ನಡೆಸಿದ್ದಾರೆ.

ಅನಂತನಾಗ್ ಜಿಲ್ಲೆಯ ಸಿಪಿಐ(ಎಂ) ಪಕ್ಷದ ಮುಖಂಡ ಕಾಂ.ಗುಲಾಂ ನಬಿ ಗನಿಯವರನ್ನು ಕೊಂದು ಹಾಕಿರುವ ಭಯೋತ್ಪಾದಕರು, ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯ ಕಾಂ.ಮಹಮದ್ ಯೂಸಫ್ ತರಿಗಾಮಿಯವರ ಮನೆಗೆ ದಾಳಿಯಿಟ್ಟು ಒಬ್ಬ ಅಂಗರಕ್ಷಕರನ್ನು ಕೊಂದಿದ್ದಾರೆ. ಭದ್ರತಾ ಪಡೆಯ ಪ್ರತಿರೋಧದಿಂದ ಹಿಮ್ಮೆಟ್ಟಿ ಕೊನೆಗೆ ನೆರೆ ಮನೆಯ ನಿವಾಸಿ ರಾಜ್ಯ ಶಿಕ್ಷಣ ಸಚಿವ ಡಾ|| ಜಿ.ಎನ್.ಲೋನೆಯವರನ್ನು ಕೊಂದಿದ್ದಾರೆ.

ಈಗೀಗ ಎರಡೂ ದೇಶಗಳ ಮಿಲಿಯಾಂತರ ಜನರ ಮನಸ್ಸಿಗೆ ನಾಟುತ್ತಿರುವ ಶಾಂತಿ ಪ್ರಕ್ರಿಯೆಯ ಕಲ್ಪನೆಯನ್ನು ಅದರಲ್ಲೂ ಭೂಕಂಪ ಪರಿಹಾರ ಕಾರ್ಯಾಚರಣೆಯ ಮೂಲಕ ಮತ್ತಷ್ಟು ಹತ್ತಿರವಾಗುತ್ತಿರುವ ಭಾರತ ಪಾಕಿಸ್ತಾನಗಳ ನಡುವಿನ ಶಾಂತಿ ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸುವುದು ಈ ಭಯೋತ್ಪಾದಕರ ಗುರಿ.

ಶಾಸನ ಸಭೆಯ ಒಳಗೆ ಮತ್ತು ಹೊರಗೆ ಜನರ ಸಮಸ್ಯೆಗಳ ವಿರುದ್ಧ ಸೆಣೆಸುತ್ತಾ ಶಾಂತಿ ಸ್ಥಾಪನೆಯ ಚಳುವಳಿಯಲ್ಲಿ ಮುಂಚೂಣಿ ಪಾತ್ರ ವಹಿಸುತ್ತಿರುವ ಸಿಪಿಐ(ಎಂ) ಪಕ್ಷ ಇದೇ ಕಾರಣಕ್ಕಾಗಿ ಭಯೋತ್ಪಾದಕರ ದಾಳಿಗೆ ಗುರಿಯಾಗುತ್ತಿದೆ.





ಯುದ್ಧ ವಿರಾಮವನ್ನು ಘೋಷಿಸಿದ್ದರೂ ಈ ನೀಚದಾಳಿ ನಡೆದಿದೆ.

ಕಂದಕವನ್ನು ಹಿಗ್ಗಿಸುವ ಸಂಚು

ರಾಜ್ಯದಲ್ಲಿ ಸೈನ್ಯ ಮತ್ತು ಭದ್ರತಾ ಸಿಬ್ಬಂದಿ ಸದ್ಯಕ್ಕೆ ಭೂಕಂಪ ಪರಿಹಾರ ಕಾರ್ಯಾಚರಣೆಗಳಲ್ಲಿ ತೊಡಗಿಕೊಂಡಿದ್ದಾರೆ. ಇಂತಹ ಪ್ರಕ್ರಿಯೆಯ ಮೂಲಕ ಸೈನ್ಯವು ಜನರ ವಿಶ್ವಾಸಗಳಿಸಿದ್ದೆ ಆದರೆ ಭಯೋತ್ಪಾದಕ ಶಕ್ತಿಗಳಿಗೆ ತಾವು ಜನರಿಂದ ಇನ್ನಷ್ಟು

ರಾಜ್ಯಪಾಲರ ನಡುವಿನ ಕೊಂಡಿಯಾಗಿ ಕಾರ್ಯ ನಿರ್ವಹಿಸಿದರು. ಕಾಶ್ಮೀರ ಕಣಿವೆಯಲ್ಲಿ ಉಳಿಯುವುದೇ ಒಂದು ಗಂಭೀರ ಸವಾಲಾಗಿದ್ದಂತಹ ಸನ್ನಿವೇಶದಲ್ಲಿ ಪ್ರಾಣದ ಹಂಗನ್ನು ತೊರೆದು ಕಾಂ.ಮಹಮದ್ ಯೂಸಫ್ ತರಿಗಾಮಿ ಕಾಶ್ಮೀರಿ ಕಣಿವೆಯಲ್ಲಿಯೇ ಉಳಿದರು. ಮಾತ್ರವಲ್ಲ ಜನರ ಕಷ್ಟಗಳಿಗೆ ಸಮಸ್ಯೆಗಳಿಗೆ ಸ್ಪಂದಿಸಿ ಶ್ರಮಿಸಿದರು. ಅಪಾರ ಕಷ್ಟನಷ್ಟ ತೊಡಕುಗಳನ್ನು ಎದುರಿಸಿದರು.

ಕಾಂ.ತರಿಗಾಮಿಯವರ ನಾಯಕತ್ವದಲ್ಲಿ ಪಕ್ಷ ತೋರಿದ ಈ ಧೀಮಂತಿಕೆ ಮತ್ತು ಜನಪರ ಕಾಳಜಿಯ ಬದ್ಧತೆಯಿಂದಾಗಿ ಕಾಶ್ಮೀರಿ ಜನರ ನಡುವೆ ಪಕ್ಷದ ಬಗೆಗೆ ಅಭಿಮಾನ ಬೆಳೆಯಿತು. ಮೊದಲು ಕಾಂ.ತರಿಗಾಮಿ ನಂತರ ಮತ್ತೊಬ್ಬ ಸಂಗಾತಿ ರಾಜ್ಯ ವಿಧಾನ ಸಭೆಗೆ ಚುನಾಯಿತರಾದರು. ಕಾಂ.ತರಿಗಾಮಿಯವರ ನಾಯಕತ್ವದಲ್ಲಿ ಪಕ್ಷ ಜನಬೆಂಬಲ ಗಳಿಸುತ್ತಾ ಬೆಳೆಯುತ್ತಿದೆ.

ಹೀಗೆ ರಾಜ್ಯದೊಳಗೆ ಮತ್ತು ಭಾರತ - ಪಾಕ್‌ಗಳ ನಡುವೆ ಶಾಂತಿ ಪ್ರಕ್ರಿಯೆ

ಕಾಂ. ಗನಿ - ಡಾ. ಲೋನೆ ಹತ್ಯೆ - ಕಾಂ. ತರಿಗಾಮಿ ಹತ್ಯೆ ಯತ್ನ

ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕರ ಅನಾಗರೀಕ ದಾಳಿಗಳು

ಅಕ್ಟೋಬರ್ 17, ಶ್ರೀನಗರದಿಂದ 65 ಕಿ.ಮೀ ದೂರದ ಅನಂತನಾಗ್ ಜಿಲ್ಲೆಯ ಸೀರ್ ಹಮ್ದನ್ ಪ್ರದೇಶ. ಪ್ರದೇಶದ ಜನಪ್ರಿಯ ಮುಖಂಡರೂ, ಸಿಪಿಐ(ಎಂ) ಪಕ್ಷದ ಜಿಲ್ಲಾಸಮಿತಿ ಸದಸ್ಯರೂ ಆಗಿದ್ದ ಕಾಂ.ಗುಲಾಮ್ ನಬಿ ಗನಿ ಅವರನ್ನು ಅವರ ಮನೆಯ ಬಳಿ ಭಯೋತ್ಪಾದಕರು ಗುಂಡಿಕ್ಕಿ ಕೊಂದರು.

ಅಕ್ಟೋಬರ್ 18, ಜಮ್ಮು-ಕಾಶ್ಮೀರದ ರಾಜಧಾನಿ ಶ್ರೀನಗರದ ತುಳಸೀಬಾಗ್ ಪ್ರದೇಶ. ಬಾರಿ ಶಾಸ್ತ್ರಗಳೊಂದಿಗೆ ಸಜ್ಜಾಗಿದ್ದ ಭಯೋತ್ಪಾದಕರು ಕಾಂ.ಗುಲಾಮ್ ನಬಿ ಗನಿಯವರ ಅಂತಿಮ ಯಾತ್ರೆಗೆ ಹೊರಡುವುದರಲ್ಲಿದ್ದ ಕಾಂ.ಮಹಮ್ಮದ್ ಯೂಸಫ್ ತರಿಗಾಮಿಯವರ ಮನೆಯ ಮೇಲೆ ದಾಳಿ ನಡೆಸಿದರು. ತರಿಗಾಮಿಯವರ ಅಂಗರಕ್ಷಕ ಪಡೆ ತೋರಿದ ಧೀಮಂತಿಕೆಯಿಂದಾಗಿ ಭಯೋತ್ಪಾದಕರು ಒಳ ನುಗ್ಗುವುದು ಸಾಧ್ಯವಾಗಲಿಲ್ಲ. ಈ ಸೆಣಸಾಟದಲ್ಲಿ ಭದ್ರತಾ ಪಡೆಯ ಅಬ್ದುಲ್ ರಶೀದ್ ವಾಣಿ ಸಾಕಷ್ಟು ಪ್ರತಿರೋಧ ಒಡ್ಡಿ ನಂತರ ಭಯೋತ್ಪಾದಕರ ಗುಂಡಿಗೆ ಬಲಿಯಾದರು. ನಂತರ ಪಕ್ಕದಲ್ಲಿದ್ದ ರಾಜ್ಯ ಶಿಕ್ಷಣ ಸಚಿವ ಡಾ|| ಜಿ.ಎನ್.ಲೋನೆ ಯವರ ಮನೆಗೆ ನುಗ್ಗಿದ ಭಯೋತ್ಪಾದಕರು ಅವರನ್ನು ಭೀಕರವಾಗಿ ಗುಂಡುಹಾರಿಸಿ ಕೊಂದರು.

ಇವೆಲ್ಲವೂ ನಡೆಯುವಾಗ ಭೂಕಂಪ ಪೀಡಿತ ಜನತೆ ಮುಂಬರುವ ದಿನಗಳಲ್ಲಿ ಹಿಮಾಲಯದ ಪರ್ವತ ಪ್ರದೇಶದಿಂದ ಬೀಸಿ ಬರುವ ಭೀಕರ ಶೀತ ಗಾಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆಂಬ ಚಿಂತೆಯಲ್ಲಿದ್ದರು. ರಕ್ತ ಪಿಪಾಸು ಭಯೋತ್ಪಾದಕರಿಗೆ ಈ ಬಗ್ಗೆ ಯಾವ ಚಿಂತೆಯೂ ಇರಲಿಲ್ಲ. ತಾವು ಯಾವ ಜನತೆಯ ಪರವಾಗಿ ಭಯೋತ್ಪಾದನೆ ನಡೆಸುತ್ತೇವೆಂದು ಇವರು ಘೋಷಿಸುವರೋ ಆ ಜನತೆ ಹೃದಯವಿದ್ರಾವಕ ಪರಿಸ್ಥಿತಿಗಳಲ್ಲಿ ನರಳುತ್ತಿರುವಾಗ, ಒಂದಲ್ಲ ಒಂದು



ರೀತಿಯಲ್ಲಿ ಭೂಕಂಪ ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿರುವ ರಾಜಕೀಯ ಮುಖಂಡರನ್ನು ಕೊಲ್ಲುವ ಭಯೋತ್ಪಾದಕರ ಸಂಕುಚಿತ ಗುರಿಗಳು ಬೇರೆಯೇ ಇವೆ. ಯುನೈಟೆಡ್ ಜಿಹಾದ್ ಕೌನ್ಸಿಲ್‌ನ ಹಲವಾರು ಭಯೋತ್ಪಾದಕ ಸಂಘಟನೆಗಳ ವೇದಿಕೆಯು ಭೂಕಂಪ ಸ್ಥಿತಿಯಲ್ಲಿ

ದೂರವಾಗುತ್ತೇವೆಂಬ ಆತಂಕ ಕಾಡುತ್ತಿದೆ.

ಶಾಂತಿ ಪ್ರಕ್ರಿಯೆಯ ಮೇಲೆ ದಾಳಿ

ಭಾರತ ಮತ್ತು ಪಾಕ್‌ಗಳ ನಡುವಿನ ಶಾಂತಿ ಪ್ರಕ್ರಿಯೆ ಇನ್ನೇನು ಮೂರನೇ ವರ್ಷಕ್ಕೆ ಕಾಲಿಡುತ್ತಿದೆ. ಇದೀಗ ಗಡಿ ನಿಯಂತ್ರಣ ರೇಖೆಯುದ್ದಕ್ಕೂ, ಸಿಯಾಚಿನ್ ಮತ್ತು ಅಂತರ ರಾಷ್ಟ್ರೀಯ ಗಡಿಯುದ್ದಕ್ಕೂ ಯುದ್ಧ ವಿರಾಮ ಘೋಷಿಸಲಾಗಿದೆ. ಶ್ರೀನಗರ - ಮುಜಾಫರಾಬಾದ್‌ಗಳ ನಡುವಿನ ರಸ್ತೆಯನ್ನು ಮತ್ತೆ ತೆರೆಯಲಾಗಿದೆ. ಇದಲ್ಲದೆ ಇನ್ನೂ ಹಲವಾರು ವಿಶ್ವಾಸ ತುಂಬುವ ಶಾಂತಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದೆಲ್ಲದರ ಶಿಖರ ಪ್ರಾಯವಾಗಿ ಕಾಶ್ಮೀರ ವಿಚಾರ ಸೇರಿದಂತೆ ಭಾರತ ಮತ್ತು ಪಾಕ್‌ಗಳ ನಡುವಿನ ಎಲ್ಲಾ ವಿವಾದಗಳನ್ನು ಶಾಂತಿಯುತ ಚರ್ಚೆಗಳ ಮೂಲಕ ಬಗೆಹರಿಸಿಕೊಳ್ಳುವ ಒಪ್ಪಂದಕ್ಕೆ ಬರಲಾಗಿದೆ. ಎರಡೂ ದೇಶಗಳ ರಾಜಕೀಯ ಮುಖಂಡತ್ವವೂ ಸೇರಿ ಈ ಶಾಂತಿ ಪ್ರಕ್ರಿಯೆಗಳು ತಿರುಗು ಮುರುಗು ಮಾಡಲಾರದಂತಹದ್ದು ಎಂದು ಘೋಷಿಸಿದ್ದಾರೆ.

ಎರಡೂ ದೇಶಗಳ ಜನತೆ ಸಹ ಈ ಶಾಂತಿ ಪ್ರಕ್ರಿಯೆಗೆ ಅಮೋಘವಾಗಿ ಸ್ಪಂದಿಸುತ್ತಿದ್ದಾರೆ. ಇಂತಹ ಬೆಳವಣಿಗೆಗಳಿಂದ ಆತಂಕಿತರಾಗಿರುವ ಭಯೋತ್ಪಾದಕರು ಈ ಶಾಂತಿ ಪ್ರಕ್ರಿಯೆಯನ್ನು ತಿರುಗು ಮುರುಗು ಮಾಡುವ ಗುರಿ ಹೊಂದಿರುವುದು ರಹಸ್ಯವಾದ ವಿಚಾರವೇನೂ ಅಲ್ಲ.

ಸಿಪಿಐ(ಎಂ) ಮುಖಂಡರ ಮೇಲೇ ಧಾಳಿ ಏಕೆ?

ಜಮ್ಮು ಕಾಶ್ಮೀರದ ಪರಿಸ್ಥಿತಿ ಪ್ರಕ್ಷುಬ್ದಗೊಂಡು ಭೀಕರ ಹಿಂಸಾಚಾರಗಳು ಅವ್ಯಾಹತವಾಗಿ ನಡೆಯುತ್ತಿದ್ದ ಅವಧಿಯಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವಿತ್ತು. ಚುನಾಯಿತ ಸರ್ಕಾರ ಇರಲಿಲ್ಲ. ಬಹುತೇಕ ರಾಜಕೀಯ ಪಕ್ಷಗಳ ಮುಖಂಡರು ಹಿಂಸೆಯ ಭೀತಿಯಿಂದ ತತ್ತರಿಸಿ ಪಲಾಯನ ಮಾಡಿದ್ದರು. ಜನರ ನಡುವೆ ಬೆರೆಯದೇ ದೂರವಾಗಿದ್ದರು. ಇಂತಹ ಗಂಭೀರ ಸನ್ನಿವೇಶದಲ್ಲಿ ಸಿಪಿಐ(ಎಂ) ಪಕ್ಷದ ಮುಖಂಡರು ರಾಜ್ಯದ ಜನರ ಆಶಯದ ಧ್ವನಿಯಾಗಿ ರಾಜ್ಯದ ಜನತೆ ಮತ್ತು

ಬಲವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಸಿಪಿಐ(ಎಂ) ಪಕ್ಷದ ಮುಖಂಡರು ಸಹಜವಾಗಿಯೇ ಭಯೋತ್ಪಾದಕರ ದಾಳಿಯ ಕೇಂದ್ರವಾಗಿದ್ದಾರೆ.

ಇಷ್ಟೆಲ್ಲಾ ದಾಳಿಯ ನಂತರವೂ ಸಿಪಿಐ(ಎಂ) ಪಕ್ಷ ವಿಚಲಿತವಾಗಿಲ್ಲ. ಏನೇ ದಾಳಿ ನಡೆದರೂ ತಾವು ಮತ್ತು ಸಿಪಿಐ(ಎಂ) ಪಕ್ಷದ ಮುಖಂಡರು ಭೂಕಂಪ ಪರಿಹಾರ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವುದನ್ನಾಗಲಿ, ಜನಪರ ಚಳುವಳಿಯಲ್ಲಿ ತೊಡಗುವುದನ್ನಾಗಲೀ ತಡೆಯಲಾಗದು ಎಂದು ಕಾಂ.ತರಿಗಾಮಿ ಘೋಷಿಸಿದ್ದಾರೆ.

ಸೀರ್ ಹಮ್ದನ್‌ನಲ್ಲಿ ನಡೆದ ಕಾಂ.ಗುಲಮ್ ನಬಿ ಗನಿಯವರ ಅಂತಿಮಯಾತ್ರೆಯಲ್ಲಿ ಸಹಸ್ರಾರು ಜನತೆ ಪಾಲ್ಗೊಂಡು ದುಃಖವನ್ನು ಹಂಚಿಕೊಂಡಿದ್ದಾರೆ. ಹತ್ಯೆಯತ್ನದಿಂದ ಸ್ವಲ್ಪದರದಲ್ಲಿ ಪಾರಾದ ಕಾಂ.ತರಿಗಾಮಿಯವರ ಬಗ್ಗೆ ರೈತರು ಕಾರ್ಮಿಕರು, ಪತ್ರಕರ್ತರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ರಾಜಕೀಯ ಕಾರ್ಯಕರ್ತರು ಸಹಸ್ರಾರು ಮಂದಿ ಆಘಾತ - ಕಾಳಜಿ ವ್ಯಕ್ತಪಡಿಸಿದ್ದಾರೆ. ಇಂತಹ ಜನಬೆಂಬಲವೇ ಸಿಪಿಐ(ಎಂ) ಪಕ್ಷದ ಹೋರಾಟದ ಬೆನ್ನೆಲುಬಾಗಿದೆ.

ಕಾಂ.ಮಹಮದ್ ಯೂಸಫ್ ತರಿಗಾಮಿಯವರ ಮೇಲೆ ದಾಳಿ ನಡೆದ ಪ್ರದೇಶ ಶ್ರೀನಗರದ ತುಳಸಿ ಬಾಗ್. ಈ ಪ್ರದೇಶ ರಾಜ್ಯದಲ್ಲಿ ಅತಿ ಹೆಚ್ಚು ಭದ್ರತೆ ಇರುವ ಹಾಗೂ ಗಣ್ಯರ ಮನೆಗಳಿರುವ ವಸತಿ ಸಮುಚ್ಚಯದ ಪ್ರದೇಶ. ಎ.ಕೆ.47 ಗನ್‌ಗಳು ಗ್ರೆನೇಡ್‌ಗಳು ಇತ್ಯಾದಿ ಭಯಾನಕ ಶಸ್ತ್ರಗಳನ್ನು ಹೊಂದಿದ ಭಯೋತ್ಪಾದಕರ ತಂಡ ಈ ಪ್ರದೇಶದೊಳಕ್ಕೆ ಪ್ರವೇಶ ಪಡೆದದ್ದೇ ಒಂದು ಗಂಭೀರ ವಿಚಾರವಾಗಿದೆ. ಭದ್ರತಾ ವ್ಯವಸ್ಥೆಯಲ್ಲಿನ ಲೋಪಗಳ ಬಗೆಗೆ ಮತ್ತು ಕಾಂ.ಯೂಸೆಫ್ ತರಿಗಾಮಿಯವರಿಗೆ ಮತ್ತಷ್ಟು ಉನ್ನತ ಮಟ್ಟದ ಭದ್ರತೆ ನೀಡಬೇಕಾದ ಅಗತ್ಯದ ಬಗ್ಗೆ ಸಿಪಿಐ(ಎಂ) ನಿರಂತರವಾಗಿ ಒತ್ತಾಯಿಸುತ್ತಲೇ ಇತ್ತು. ಇದೀಗ ಸಿಪಿಐ(ಎಂ) ಪಕ್ಷದ ಆತಂಕ ನಿಜವಾದುದು ಎಂಬುದು ಸಾಬೀತಾಗಿದೆ.

ವಾಸ್ತವ ವಿಚಾರ - ಕೋಮುವಾದಿ ಪ್ರಚಾರ

ಕಾಶ್ಮೀರ ಕುರಿತಂತೆ ಆರ್.ಎಸ್.ಎಸ್, ಬಿಜೆಪಿ, ಎಬಿವಿಪಿ ಇತ್ಯಾದಿ ಸಂಘ ಪರಿವಾರ ರಾಷ್ಟ್ರಾದ್ಯಂತ ನಡೆಸಿರುವ ವಿಷ ಪ್ರಚಾರದ ಪ್ರಭಾವದಲ್ಲಿರುವವರ ಗ್ರಹಿಕೆ ವಾಸ್ತವಕ್ಕಿಂತ ಬಹಳ ಭಿನ್ನವಾಗಿರುತ್ತದೆ. ಜಮ್ಮುಕಾಶ್ಮೀರದಲ್ಲಿ ಭಯೋತ್ಪಾದಕರು- ಕಾಶ್ಮೀರಿ ಪಂಡಿತರೂ ಸೇರಿದಂತೆ ಸಾಮಾನ್ಯವಾಗಿ ಹಿಂದುಗಳನ್ನು ಕೊಲ್ಲುತ್ತಾರೆ ಎಂಬುದೇ ಅವರ ಗ್ರಹಿಕೆ. ಬಹಳಷ್ಟು ಪತ್ರಿಕೆಗಳಲ್ಲಿಯೂ 'ಹಿಂದೂಗಳ ಹತ್ಯೆ' ಎಂದೇ ದೊಡ್ಡಕ್ಷರಗಳಲ್ಲಿ ಪ್ರಕಟಿಸಲಾಗುತ್ತದೆ. ಇತ್ತೀಚಿಗೆ ಕಾಶ್ಮೀರದಲ್ಲಿ ನಡೆದಿರುವ ಮತ್ತು ಹಿಂದಿನಿಂದಲೂ ನಡೆಯುತ್ತಿರುವ ಈ ಭಯೋತ್ಪಾದಕರ ಕೃತ್ಯಗಳು ಏನನ್ನು ಹೇಳುತ್ತಿವೆ. ರಕ್ತ ಪಿಪಾಸು ಭಯೋತ್ಪಾದಕರಿಗೆ 'ಧರ್ಮ'ವೆಂಬುದೇನಿಲ್ಲ. ತಮ್ಮ ಸಂಕುಚಿತ ರಾಜಕೀಯ ಹಿತಾಸಕ್ತಿಗೆ ಅಡ್ಡಿಬರುವ ಯಾರನ್ನೇ ಆಗಲಿ ಅವರು ಕೊಲ್ಲ ಬಯಸುತ್ತಾರೆ. ಅದರಲ್ಲೂ ಜನಪರ ಚಳುವಳಿಯ ನಾಯಕರ ಕಡೆಗೆ ಅವರ ಬಂದೂಕು ಸದಾ ಕಣ್ಣಿಟ್ಟಿರುತ್ತದೆ.

ಹಿಂದುಗಳೆಲ್ಲಾ ಒಂದೇ ಎನ್ನುತ್ತಲೇ ದಲಿತರ ಮನೆಗಳಿಗೆ ಕೊಳ್ಳಿಯಿಡುವ, ದಲಿತರನ್ನು ಜೀವಂತಸುಡುವ ಹಿಂದೂ ಮತಾಂಧರಿಗೆ ಇದು ಗೊತ್ತೇ ಇರುತ್ತದೆ. ಆದರೆ ಸತ್ಯವನ್ನು ಸಾರಿದರೆ ಅವರ ರಾಜಕೀಯ ಗುರಿ ಈಡೇರಬಲ್ಲದೇ? ಅದಕ್ಕೆ ಅರ್ಧ ಸತ್ಯ ಪೂರ್ಣ ಸುಳ್ಳುಗಳನ್ನು ಅವರು ಸಾರುತ್ತಾರೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸಾಮಾಜಿಕ ನಿಯಂತ್ರಣ

- ಸೀತಾರಾಂ ಯೆಚೂರಿ

ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಣದ ಮಹತ್ತರ ಪಾತ್ರವನ್ನು ಹಾಗೂ ಇಂತಹ ಶಿಕ್ಷಣವು ವ್ಯಾಪಾರೀಕರಣ -ಖಾಸಗೀಕರಣದಿಂದ ಮುಕ್ತವಾಗಬೇಕಾದ ಅಗತ್ಯವನ್ನು ಹಾಗೂ ಇತ್ತೀಚಿನ ನ್ಯಾಯಾಲಯದ ತೀರ್ಪುಗಳಿಂದ ತುರ್ತು ಪ್ರಶ್ನೆಯಾಗಿರುವ ಕೇಂದ್ರೀಯ ಶಾಸನದ ಅಗತ್ಯವನ್ನು ವಿವರಿಸುವ ಲೇಖನ

ಇತ್ತೀಚಿಗೆ ಶಿಕ್ಷಣದ ವಿಷಯದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ ಚಕಮಕಿ ಏನೇ ನಡೆದಿರಲಿ, ಖಾಸಗಿ ಮತ್ತು ಅನುದಾನವಿಲ್ಲದ ಶಿಕ್ಷಣ ಸಂಸ್ಥೆಗಳ ಮೇಲೆ ಸಾಮಾಜಿಕ ನಿಯಂತ್ರಣದ ಪ್ರಶ್ನೆಯನ್ನು ತುರ್ತಾಗಿ ಪರಿಶೀಲಿಸಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿಯೂ ಸೇರಿದಂತೆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಒತ್ತಿ ಹೇಳಲಾಗಿದೆಯಾದರೂ, ಸಾಮಾಜಿಕ ಹತೋಟಿಯ ಪ್ರಶ್ನೆ ಇನ್ನೂ ವ್ಯಾಪಕ ಹರಹು ಉಳ್ಳದ್ದು. ವರದಿಗಳ ಪ್ರಕಾರ ಮುಖ್ಯ ನ್ಯಾಯಾಧೀಶರು ಅಟಾರ್ನಿ ಜನರಲ್‌ಗೆ 'ನಿಮಗೆ ತೀರ್ಪು ಅರ್ಥವಾಗಿಲ್ಲ.... ಎಲ್ಲಾ ಮೂರು ತೀರ್ಪುಗಳು ಹೇಳಿದ್ದು ಸರ್ಕಾರ ಒಂದು ಶಾಸನ ತರಬೇಕೆಂದು' ಎಂದು ಹೇಳಿದರು.

ಹೌದು, ಈಗ ಆಗಬೇಕಾದ್ದು ಇದೇ. ಯುಪಿಎ ಸರ್ಕಾರ ಇಂತಹ ಒಂದು ಶಾಸನ ತರುವುದನ್ನು ಪರಿಶೀಲಿಸಲು ರಾಜಕೀಯ ಪಕ್ಷಗಳು ಮತ್ತು ಇತರರೊಂದಿಗೆ ಸಮಾಲೋಚನೆ ಆರಂಭಿಸಿದೆ. ಇದು ಒಳ್ಳೆಯದು. ಕಳೆದ ಮೂರು ವರ್ಷಗಳಲ್ಲಿ ಸುಪ್ರೀಂಕೋರ್ಟ್ ಇದಕ್ಕೆ ಸಂಬಂಧಪಟ್ಟ ಪ್ರಶ್ನೆಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸಿದೆ. ಮೊದಲು ಅಕ್ಟೋಬರ್ 2002 ರಲ್ಲಿ, ನಂತರ ಆಗಸ್ಟ್ 2003 ರಲ್ಲಿ ಹಾಗೂ ಈಗ ಆಗಸ್ಟ್ 2005 ರಲ್ಲಿ. ಈ ತೀರ್ಪುಗಳನ್ನು ಓದಿದರೆ ಕಾಣುವ ಅಂಶ ಎಂದರೆ ಈಗಿರುವ ಕಾನೂನುಗಳ ಪ್ರಕಾರ ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದನ್ನು, ಅವುಗಳ ನಿರ್ವಹಣೆಯನ್ನು ನಿಯಂತ್ರಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾನೂನು ವ್ಯಾಪ್ತಿ ಸೀಮಿತವಾಗಿದೆ. ದೇಶದ ಒಟ್ಟು ಹಿತದೃಷ್ಟಿಯಿಂದ ಇದನ್ನು ಬದಲಿಸಬೇಕಾಗಿದೆ.

ಆದರೆ ಪ್ರತಿಭೆ ಮತ್ತು ಸಾಮಾಜಿಕ ನ್ಯಾಯಕ್ಕೆ ಪರಸ್ಪರ ಹೊಂದಾಣಿಕೆ ಇಲ್ಲ ಎಂಬ ಮೇಲ್ವರ್ಗ-ಪಕ್ಷಪಾತಿಯಾದ ವಕ್ರ ನಿಲುವನ್ನು ಪ್ರತಿಧ್ವನಿಸುತ್ತಾ ಬಂದಿರುವ ವಿವಿಧ ಪ್ರಕ್ರಿಯೆಗಳು ಈ ಖಾಸಗೀ ಸಂಸ್ಥೆಗಳ ತಥಾಕಥಿತ ಸ್ವಾತಂತ್ರ್ಯವನ್ನು, ಸ್ವಾಯತ್ತತೆಯನ್ನು ಸ್ವಾಗತಿಸಿವೆ. ಈ ಸಂಸ್ಥೆಗಳು ಯಾವುದೇ ಸರ್ಕಾರಿ ನಿಧಿಯನ್ನು ಪಡೆಯುವುದಿಲ್ಲವಾದ್ದರಿಂದ ಅವು ಸಮಭಾವ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಗಳನ್ನು ಮಾನ್ಯ ಮಾಡಬೇಕಿಲ್ಲ ಎಂದು ವಾದಿಸುವುದು ಅಸಂಬದ್ಧವಾಗುತ್ತದೆ. ಇದು ಸರ್ಕಾರಿ ನೌಕರರು ಮಾತ್ರ ತೆರಿಗೆ ಕೊಡಬೇಕು, ಇತರರು ಯಾರೂ ಕೊಡಬೇಕಾಗಿಲ್ಲ, ಏಕೆಂದರೆ ಸರ್ಕಾರದಿಂದ ಅವರಿಗೆ ಯಾವುದೇ ಆದಾಯ ಸಿಗುವುದಿಲ್ಲ ಎಂದಂತೆಯೇ ಸರಿ! ಈ ಚರ್ಚೆ ಒಟ್ಟಾರೆಯಾಗಿ ಶಿಕ್ಷಣದ ಕುರಿತಾದ ನಿಲುವಿನತ್ತ ಬೊಟ್ಟು ಮಾಡುತ್ತದೆ. ಶಿಕ್ಷಣ ಎಂಬುದು ಉಳ್ಳವರ ಮರ್ಜಿಗೆ ಬಂದಂತೆ ಖರೀದಿಸುವ ಮತ್ತು ಮಾರುವ ಸರಕೇನು? ಅಥವಾ ಅದು ಒಂದು ನಾಗರಿಕ ಸಮಾಜಕ್ಕೆ ಅಗತ್ಯವಾದದ್ದು, ಅದರಿಂದಾಗಿ ದೇಶದ ಒಂದು ಹಕ್ಕೇನು?

ಪಾಶ್ಚಾತ್ಯ ಸಮಾಜದಲ್ಲೂ

ಆಧುನಿಕ ಸಮಾಜದಲ್ಲಿ ಸಾರ್ವಜನಿಕ ಶಿಕ್ಷಣದ ಮೂಲವನ್ನು, ಇತಿಹಾಸವನ್ನು ನೆನಪಿಸಿಕೊಳ್ಳುವುದು ಕುತೂಹಲಕಾರಿಯಾಗಬಲ್ಲದು, ಬ್ರಿಟನ್ನಿನಲ್ಲಿಯೂ, ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲೂ ಸಾರ್ವಜನಿಕ ಶಿಕ್ಷಣವನ್ನು ಸರ್ಕಾರವೇ ರೂಪಿಸಿ, ಆದರ ಆಡಳಿತ ನಡೆಸಿತು ಹಾಗೂ ಅದಕ್ಕೆ ಹಣಕಾಸು ನೀಡಿತು. 1779 ರಲ್ಲಿ ಅಮೆರಿಕಾ ಸ್ವತಂತ್ರವಾದ ಕೂಡಲೇ ಆಗ ಉದಯಗೊಳ್ಳುತ್ತಿದ್ದ ಬೂರ್ಜ್ವಾ ವರ್ಗದ ದೂರದೃಷ್ಟಿಯಿಂದ ಥಾಮಸ್ ಜೆಫರ್ಸನ್ "ಶಿಕ್ಷಣದ ಹೆಚ್ಚು ಸಾರ್ವತ್ರಿಕ ಪ್ರಸಾರ" ದ ಮಸೂದೆಯನ್ನು ತಂದರು. ಆ ಸಮಯದಲ್ಲೇನೋ ಆ ಮಸೂದೆ ಬಿದ್ದುಹೋಯಿತು. ಆದರೆ ಅದರ ಹಿಂದಿದ್ದ ತತ್ವ ನಂತರದ ವರ್ಷಗಳಲ್ಲಿ ಅಮೆರಿಕಾದ ಶಿಕ್ಷಣ ವ್ಯವಸ್ಥೆಯ ಬೆಳವಣಿಗೆಯ ಮೇಲೆ ಪ್ರಭಾವ ಬೀರಿತು. ಮೂರು ಹಂತದ ಶಿಕ್ಷಣ ಯುವಜನರನ್ನು ಸಮಾಜದ ಎರಡು ಗುಂಪುಗಳಾದ 'ಶ್ರಮಿಕರು ಮತ್ತು ಓದಿದವರು'. ಇದರಲ್ಲಿ ಒಂದು ಗುಂಪಿಗೆ ಸಿದ್ಧಗೊಳಿಸಬೇಕು, ಈ ಇಡೀ ವ್ಯವಸ್ಥೆಯ ಖರ್ಚನ್ನು ಸರ್ಕಾರದ ಖಜಾನೆಯಿಂದಲೇ ಭರಿಸಬೇಕು ಎಂದು ಜೆಫರ್ಸನ್ ವಾದ. 1840 ರ ದಶಕದಲ್ಲಿ ರೆವರೆಂಡ್ ಜಾರ್ಜ್ ವಾಶಿಂಗ್ಟನ್ ಹೊಸ್ಮರ್ ಎಂಬ ಬಫೆಲೋ ಪ್ರದೇಶದಿಂದ ಸ್ಪರ್ಧಿಸಿದಾತ ಸಾರ್ವಜನಿಕ ಶಿಕ್ಷಣಕ್ಕಾಗಿ ಒಂದು ಹೋರಾಟಕ್ಕೆ ನೇತೃತ್ವ ನೀಡಿದ. "ನಮ್ಮಲ್ಲಿ ಸಾವಿರಾರು ಮಂದಿ ಜನರ ಶಿಕ್ಷಣದ ಪ್ರಭಾವಗಳ ಕನಸು ಕಂಡಿಲ್ಲ, ಅದರ ಖರ್ಚುಗಳ ಬಗ್ಗೆಯೇ ದೂರುತ್ತಾರೆ; ಅದು ಪುಂಡು ಪೋಲಿತನ, ನಿರ್ಗತಿಕತೆ ಹಾಗೂ ಅಪರಾಧಗಳನ್ನು ಕಮ್ಮಿ ಮಾಡುತ್ತದೆ, ನಮ್ಮದೇ ಜನಗಳನ್ನು ವ್ಯವಸ್ಥಿತವಾಗಿಡಲು ಒಂದು ಪ್ರತ್ಯೇಕ ಸೇನೆಯ ಅಗತ್ಯವನ್ನು ಅದು ತಡೆಯುತ್ತದೆ. ಪ್ರತಿಯೊಬ್ಬರೂ ತಮ್ಮದೇ ಆಯ್ಕೆ ಮಾಡಿಕೊಳ್ಳಬಹುದು - ಶಿಕ್ಷಕರಿಗೆ ಹಣ ಕೊಡುವುದೋ ಅಥವಾ ಸೇನಾಭರ್ತಿಯ ಸಾರ್ಜೆಂಟರಿಗೋ ಅಂತ, ಶಾಲೆಗಳನ್ನು ಬೆಂಬಲಿಸಬೇಕೋ ಅಥವಾ ಕಾನ್ಸ್‌ಟೇಬಲ್ ಅಥವಾ ವಾಚ್‌ಮನ್‌ಗಳನ್ನೋ ಎಂದು" ಎಂದಾತ ಹೇಳುತ್ತಿದ್ದ. ಒಂದು ಆರೋಗ್ಯವಂತ ತರಬೇತು ಹೊಂದಿದ ಯುವಶಕ್ತಿ ದೇಶ ನಿರ್ಮಾಣಕ್ಕೆ ಒಂದು ಆಸ್ತಿಯೇ ಹೊರತು ಹೊರೆಯಲ್ಲ ಎಂಬ ಕ್ರೋಢೀಕೃತ ಅನುಭವದ ಫಲವೇ ಈಗ ಎಲ್ಲಾ ಅಭಿವೃದ್ಧಿಶೀಲ ದೇಶಗಳಲ್ಲಿ ಇರುವ ಸಾರ್ವತ್ರಿಕ ಶಾಲಾ ಶಿಕ್ಷಣ ಹಾಗೂ ಸಾರ್ವಜನಿಕ ನಿಧಿಯಿಂದ ನೀಡಲಾಗುವ ಉನ್ನತ ಶಿಕ್ಷಣ.

ಸ್ವತಂತ್ರ ಭಾರತದಲ್ಲಿ

ಸ್ವತಂತ್ರ ಭಾರತದಲ್ಲಿ, ಇದೇ ಪರಿಗಣನೆಯಿಂದ ಹಾಗೂ ಒಂದು ಸಮಾನತೆಯ ಸಮಾಜ ವ್ಯವಸ್ಥೆ ಬಯಸುತ್ತಿದ್ದ ಜನಗಳ ಆಕಾಂಕ್ಷೆಗಳನ್ನು ಈಡೇರಿಸಲು ಹೊಸದಾಗಿ ರಚನೆಯಾದ ಜವಾಹರಲಾಲ್ ನೆಹರೂ ಸರ್ಕಾರ 1948 ರಲ್ಲಿ ಡಾ.ಎಸ್. ರಾಧಾಕೃಷ್ಣನ್ ಅಧ್ಯಕ್ಷತೆಯಲ್ಲಿ ಒಂದು ವಿಶ್ವವಿದ್ಯಾಲಯ ಶಿಕ್ಷಣ ಆಯೋಗವನ್ನು ರಚಿಸಿತು. ಈ ವರದಿ "ಆರ್ಥಿಕ ಸ್ವಾತಂತ್ರ್ಯ, ಸಾರ್ವತ್ರಿಕ ಸಮೃದ್ಧಿಯ ಹೆಚ್ಚಳ, ಜಾತಿ-ಮತ ಮತ್ತು ಬಡವ-ಶ್ರೀಮಂತ ಎಂಬ ವ್ಯತ್ಯಾಸಗಳನ್ನು ಮೀರಿ ಒಂದು ಪರಿಣಾಮಕಾರಿ ಪ್ರಜಾಪ್ರಭುತ್ವದ ಸಾಧನೆ, ಸಾಂಸತಿಕ ಮಟ್ಟದಲ್ಲಿ ಹೆಚ್ಚಳ, ರಾಷ್ಟ್ರೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಲು ಈ ಗುರಿಗಳ ತ್ವರಿತ ಹಾಗೂ ಪರಿಣಾಮಕಾರಿ ಸಾಧನೆಗೆ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಸಂಘಟಿಸಿದರೆ ಅದು ಒಂದು ಬಲಿಷ್ಠ ಅಸ್ತ್ರವಾಗಬಲ್ಲದು. ನಾವು ನಾಗರಿಕ ಜನಗಳು ಎಂದು ಹೇಳಿಕೊಳ್ಳುವುದರಿಂದ ಉದಯವಾಗುತ್ತಿರುವ ಪೀಳಿಗೆಯ ಉನ್ನತ ಶಿಕ್ಷಣ ನಮ್ಮ ಪ್ರಧಾನ ಪರಿಗಣನೆಯಾಗಬೇಕು" ಎಂದು ಹೇಳಿತು. 'ಈ ಪ್ರಸ್ತಾವಗಳಲ್ಲಿ ಹಲವು ಹೆಚ್ಚಿನ ಖರ್ಚಿಗೆ ಕಾರಣವಾಗಬಹುದು. ಆದರೆ ಈ ಹೆಚ್ಚಳ ಒಂದು ಸ್ವತಂತ್ರ ಜನತೆಯ ಪ್ರಜಾಸತ್ತಾತ್ಮಕ ಭವಿಷ್ಯಕ್ಕಾಗಿ ಹೂಡಿಕೆ ಎಂಬುದು ನಮಗೆ ಮನದಟ್ಟಾಗಿದೆ' ಎಂದು ಮುಂದುವರೆದು ಈ ವರದಿ ಹೇಳುತ್ತದೆ. ಈ ಅಭಿಪ್ರಾಯಗಳನ್ನು ನಂತರದ ಎಲ್ಲಾ ಶಿಕ್ಷಣ ಆಯೋಗಗಳು, 1952 ರ ಲಕ್ಷ್ಮಣಸ್ವಾಮಿ ಮೊದಲಿಯಾರ್ ಮಾಧ್ಯಮಿಕ ಶಿಕ್ಷಣ ಆಯೋಗ, 1964 ರ ಡಿಎಸ್ ಕೊಠಾರಿ ಶಿಕ್ಷಣ ಆಯೋಗ ಇತ್ಯಾದಿ ಎಲ್ಲವೂ ಮತ್ತಷ್ಟು ಬಲಗೊಳಿಸಿವೆ.



ಶಿಕ್ಷಣ ಸರಕಾಗಬಾರದು

ಆದರೆ ಇತ್ತೀಚಿನ ವರ್ಷಗಳಲ್ಲಿ, ವಾರ್ಷಿಕ ಬಜೆಟ್ ನೀಡಿಕೆಗಳಲ್ಲಿ ಕಾಣುವಂತೆ ಶಿಕ್ಷಣಕ್ಕೆ ಪ್ರಭುತ್ವದಿಂದ ಹಣ ನೀಡಿಕೆ ಇಳಿಮುಖವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ಮತ್ತು ವ್ಯಾಪ್ತಿ ಅಪಾರವಾಗಿ ಹೆಚ್ಚಿದೆ. ಇದು ಉನ್ನತ ಶಿಕ್ಷಣದ ವಾಣಿಜ್ಯೀಕರಣದ ಧಾವಂತವನ್ನು ಹೆಚ್ಚಿಸಿ ಶಿಕ್ಷಣವನ್ನು ಒಂದು ಸರಕಿನ ಮಟ್ಟಕ್ಕೆ ಇಳಿಸಿದೆ. ಆದರೆ ಉನ್ನತ ಶಿಕ್ಷಣಕ್ಕೆ ಸರ್ಕಾರದಿಂದ ಹಣ ನೀಡಿಕೆ ಹೆಚ್ಚದೇ ಹೋದುದರಿಂದ ಲಕ್ಷಾಂತರ ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಈ ಸಂಸ್ಥೆಗಳನ್ನು ಸೇರುವುದಲ್ಲದೆ ಬೇರೆ ದಾರಿಯಿಲ್ಲದಾಗಿದೆ. ದೇಶದ ಹಾಗೂ ಜನಗಳ ವಿಶಾಲ ಹಿತದೃಷ್ಟಿಯಿಂದ ಈ ಸಂಸ್ಥೆಗಳು ಕೆಲವು ಸಾಮಾಜಿಕವಾಗಿ ಸ್ವೀಕೃತವಾದ ನಿಯಮಾವಳಿಗಳನ್ನು ಅನುಸರಿಸುವುದು ಅತ್ಯಂತ ಅಗತ್ಯವಾಗುತ್ತದೆ. ಇದು ಭಾರತೀಯ ಶಿಕ್ಷಣದಲ್ಲಿ ಪ್ರಮಾಣ, ಗುಣಮಟ್ಟ ಹಾಗೂ ಸಮದರ್ಶಿತ್ವದ ತ್ರಿಕೋನವನ್ನು ಸಮತೋಲಗೊಳಿಸುವ ದೇಶದ ಒಟ್ಟು ಪ್ರಯತ್ನದ ಭಾಗವಾಗಿರಬೇಕು. ಈ ಮೂರು ಅಂಶಗಳು ಪರಸ್ಪರ ವಿರುದ್ಧವಾಗಿವೆ ಎಂಬ ತಪ್ಪು ತಿಳುವಳಿಕೆಯಿದೆ. ವಾಸ್ತವವಾಗಿ ಅವು ಪರಸ್ಪರ ಪೂರಕವಾಗಿವೆ.

ಈಗಿನ ಸಂದರ್ಭದಲ್ಲಿ, ಭಾರತದ 54 ಶೇಕಡಾ ಜನಸಂಖ್ಯೆ 25 ವರ್ಷಕ್ಕಿಂತ ಕೆಳಗಿನದಾಗಿರುವಾಗ ಈ ವಿಷಯದಲ್ಲಿ ಸಮತೋಲನ ಮತ್ತಷ್ಟು ಮಹತ್ವದ್ದಾಗುತ್ತದೆ. ಈ ಯುವಜನ ಆರೋಗ್ಯವಂತರು ಹಾಗೂ ವಿದ್ಯಾವಂತರಾಗಿದ್ದರೆ ಭಾರತ ನಿಜವಾಗಿಯೂ ಒಂದು ಜ್ಞಾನವಂತ ಸಮಾಜವಾಗಿ ಪರಿವರ್ತನೆಗೊಳ್ಳಬಹುದು. ಭಾರತ ಬಿಪಿಒ ಹಾಗೂ ಕರೆಕೇಂದ್ರ(ಕಾಲ್ ಸೆಂಟರ್) ಗಳಿಗೆ ಸಿಬ್ಬಂದಿಯನ್ನು ತರಬೇತಿಗೊಳಿಸುವುದಕ್ಕೆ




ಸೀಮಿತಗೊಳ್ಳದೆ ಆದರಿಂದ ಮೇಲೇರಬೇಕು. ವಾಸ್ತವವಾಗಿ ಇತ್ತೀಚಿಗೆ ವಿಶ್ವದ ಮಾಹಿತಿ ತಂತ್ರಜ್ಞಾನ ವಲಯದ ಮುನ್ನಡೆಗಳಲ್ಲಿ ಭಾರತದ ಪಾತ್ರದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವವರು ಇದೆಲ್ಲಾ ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರ ರೂಪಿಸಿದ ಪ್ರಭುತ್ವದ ಹಣಕಾಸು ನೆರವಿನ ಶಿಕ್ಷಣ ವ್ಯವಸ್ಥೆಯ ಫಲಗಳು ಎಂಬುದನ್ನು ಗುರುತಿಸಬೇಕು. ಇಂತಹ ಒಂದು ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಇರದಿದ್ದರೆ ನಮ್ಮ ರಾಷ್ಟ್ರಪತಿಗಳಾದ ಡಾ. ಅಬ್ದುಲ್ ಕಲಾಂರಂತವರು ಇರುತ್ತಿರಲಿಲ್ಲ.

ಯುಪಿಎ ಸರ್ಕಾರ ಶಿಕ್ಷಣಕ್ಕೆ ಪ್ರಭುತ್ವದ ಖರ್ಚಿನಲ್ಲಿ ಸತತ ಇಳಿಕೆಯ ಈ ಪ್ರವೃತ್ತಿಯನ್ನು ಬದಲಿಸಬೇಕು. ಈ ನಡುವೆ ನಾಯಿಕೊಡೆಗಳಂತೆ ಹೆಚ್ಚುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಬೇಕು. ಇದರರ್ಥ ಇವು ಸರ್ಕಾರಿ ನಿಯಂತ್ರಣದಲ್ಲಿ ಕೆಲಸಮಾಡಬೇಕೆಂದೇನಲ್ಲ. ಈ ಸಂಸ್ಥೆಗಳು 1)ಶುಲ್ಕ ರಚನೆ, 2) ಮೀಸಲಾತಿಯೂ ಸೇರಿದಂತೆ ಪ್ರವೇಶ ನೀತಿ ಹಾಗೂ 3) ಕೋರ್ಸ್‌ನಲ್ಲಿ ಏನಿರಬೇಕು ಎಂಬ ಬಗ್ಗೆ ಕೆಲವು ನಿರ್ಧಾರಿತ ನಿಯಮಾವಳಿಗಳಿಗೆ ಬದ್ಧವಾಗಿರುವಂತೆ ಒಂದು ನಿಯಂತ್ರಣ ವ್ಯವಸ್ಥೆಯನ್ನು ತರಲು ಸಾಧ್ಯವಿದೆ. ಈ ಸಾಮಾಜಿಕ ನಿಯಂತ್ರಣದ ಬಗ್ಗೆ ಗಂಭೀರವಾಗಿ ಯೋಚಿಸಬೇಕು. ಇದನ್ನು ಜಾರಿಗೆ ತರಲು, ಶಿಕ್ಷಣ ನಮ್ಮ ಸಂವಿಧಾನದಲ್ಲಿ ಸಮವರ್ತಿ ಪಟ್ಟಿಯಲ್ಲಿ ಇರುವುದರಿಂದ, ಸೂಕ್ತ ಕೇಂದ್ರ ಶಾಸನವನ್ನು ತರಬೇಕು, ಈ ಮೂಲಕ ರಾಜ್ಯ ಸರ್ಕಾರಗಳು ಇಂತಹ ಸಾಮಾಜಿಕ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಲು ಅಧಿಕಾರ ಪಡೆಯುತ್ತವೆ.

ನಮ್ಮ ಭವಿಷ್ಯಕ್ಕೆ ಹೂಡಿಕೆ ಮಾಡೋಣ, ನಿಜವಾಗಿಯೂ ಭಾರತವನ್ನು ಒಂದು ಜ್ಞಾನವಂತ ಸಮಾಜವಾಗಿ ಪರಿವರ್ತಿಸೋಣ. ಈಗಾಗಲೇ ಭಾರತ ಪ್ರತಿವರ್ಷ ಇಡೀ ಯುರೋಪಿಯನ್ ಒಕ್ಕೂಟ ಒಟ್ಟಾಗಿ ಉತ್ಪಾದಿಸುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಿಪುಣ ಮಾನವ ಶಕ್ತಿಯನ್ನು ಉತ್ಪಾದಿಸುತ್ತಿದೆ. ಇದೇ ನಮ್ಮ ಶಕ್ತಿ. ಅದನ್ನು ಪೋಲು ಮಾಡುವುದು ಬೇಡ.

ಅಬ್ದುಲ್ ರಜಾಕ್ ಮುಲ್ಲಾ ಇನ್ನಿಲ್ಲ

ಡಿವೈಎಫ್ಐ ರಾಜ್ಯ ಮುಖಂಡರೂ ಸಿಪಿಐ(ಎಂ) ಪಕ್ಷದ ಧಾರವಾಡ ಜಿಲ್ಲಾ ಸಮಿತಿಯ ಮುಖಂಡರೂ ಆದ ಕಾಂ. ಅಬ್ದುಲ್ ರಜಾಕ್ ಮುಲ್ಲಾ ಅವರ ಅನಿರೀಕ್ಷಿತ ನಿಧನದ ಆಘಾತಕಾರಿ ಸುದ್ದಿ ಬರಸಿಡಿಲಿನಂತೆ ಬಂದೆರಗಿದೆ. ಹೃದಯಾಘಾತಕ್ಕೊಳಗಾದ ಈ ಯುವ ಹೋರಾಟಗಾರನ ಸಾವಿಗೆ ಇದೋ ದುಃಖಪೂರಿತ ಕಂಬನಿ



ಮರೆತೆನೆಂದರೂ..... ಮರೆಯಲಿ ಹ್ಯಾಂಗ.....

ನಮ್ಮೆಲ್ಲರ ಪ್ರೀತಿಯ ಸಂಗಾತಿ ಕಾಂ.ಅಬ್ದುಲ್ ರಜಾಕ್ ಮುಲ್ಲಾ ಅಕ್ಟೋಬರ್-17ರ ನಡು ಮದ್ಯಾಹ್ನದಲ್ಲಿ ನಮ್ಮನ್ನೆಲ್ಲಾ ಬಿಟ್ಟು ದೂರವಾದರು ಎಂಬ ಆಕಸ್ಮಿಕ, ಬರಸಿಡಿಲಿನಂತೆ ಬಂದ ಸುದ್ದಿ ನನ್ನ ಹೃದಯವನ್ನೇ ಘಾಸಿಗೊಳಿಸಿತು. ನನ್ನ ಮನೆಯ ಹಿಂದಿರುವ ಸ್ಮಶಾನಕ್ಕೆ ಬೆನ್ನು ಮಾಡಿ ಯಾವುದೋ ಒಂದು ಪುಸ್ತಕವೊಂದನ್ನು ತದೇಕಚಿತ್ತನಾಗಿ ಓದುತ್ತಿದ್ದೆ. ಈ ಆಘಾತಕಾರಿ ವಿಷಯ ಕೇಳಿದೊಡನೆ ಒಂದು ಕ್ಷಣ ನನ್ನ ಮುಖವನ್ನು ಸ್ಮಶಾನದತ್ತ ತಿರುಗಿಸಿ ಮೌನವಾಗಿ ನಿಂತೆ. ಒಂದೇ ಸಮನೆ ಕಣ್ಣೀರ ಹನಿಗಳು ಸುರಿಯಲಾರಂಭಿಸಿದವು.

ನರಗುಂದ -ನವಲಗುಂದ -ರೈತ ಬಂಡಾಯ ಚಳುವಳಿ ರಾಜ್ಯದಲ್ಲಿ ರಾಜಕೀಯ ಸ್ಥಿತ್ಯಂತರಕ್ಕೆ ಕಾರಣವಾಗಿದ್ದರೂ, ಆ ಚಳುವಳಿಯ ಹಿಂದಿನ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿರುವವರು ಕಮ್ಯುನಿಸ್ಟರು ಎಂಬ ಸಂಗತಿ ಇಡೀ ರಾಜ್ಯಕ್ಕೆ ತಿಳಿದಿದ್ದರೂ ಆ ಭಾಗದಲ್ಲಿ ಮಾತ್ರ ಅಂದು ಮತ್ತು ಇಂದಿನವರೆಗೂ ಎಡ ಮತ್ತು ಕಮ್ಯುನಿಸ್ಟ್ ಚಳುವಳಿ ಸಾಕಷ್ಟು ವಿಸ್ತಾರಗೊಳ್ಳಲಿಲ್ಲ.

ಅಂತಹದೊಂದು ಎಡ-ಚಳುವಳಿ ತೀರ ಹಿಂದುಳಿದ ನರಗುಂದದಂತಹ ನಗರದಲ್ಲಿ ವಿದ್ಯಾರ್ಥಿ ಸಂಘಟನೆಯೊಂದರ ಮುಖಂಡನಾಗಿ ಹೊರ ಹೊಮ್ಮಿದ್ದರು ಕಾಂ.ಅಬ್ದುಲ್ ರಜಾಕ್ ಮುಲ್ಲಾ. ಅತ್ಯಂತ ಸಂಪ್ರದಾಯಬದ್ಧ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಮುಲ್ಲಾ ಮೊದಲಿನಿಂದಲೂ ಬಂಡಾಯದ ಗುಣಗಳನ್ನ ಮೈಗೂಡಿಸಿಕೊಂಡು ಬೆಳೆದುದರ ಫಲದಿಂದಲೇನೋ ಅವರು ಎಡ ಚಳುವಳಿಯತ್ತ ಆಕರ್ಷಿತರಾದರು. ಸಂಪ್ರದಾಯಸ್ಥ ಮುಲ್ಲಾನಾಗಿ ಬೆಳೆಯಬೇಕಿದ್ದ ಅವರಿಗೆ ಬಹುಶಃ ವಾತಾವರಣ ಉಸಿರುಗಟ್ಟಿಸುವಂತದ್ದಾಗಿರಬೇಕು. ಆ ಕಾರಣದಿಂದಾಗಿ ಶಾಲೆಯನ್ನು ಅರ್ಧಕ್ಕೆ ಬಿಟ್ಟು ಕೆಲವು ವರ್ಷಗಳ ಕಾಲ ಊರನ್ನೇ ತೊರೆದು ಅಲ್ಲಲ್ಲಿ ಅಲೆದಾಡಿ ಹಲವು ಹೊಡೆತ, ಸಂಕಟ ನೋವುಗಳನ್ನು ಅನುಭವಿಸಿದ ಮುಲ್ಲಾ, ಮತ್ತೆ ಊರಿನತ್ತ ಮುಖಮಾಡಿ ತನ್ನ ಶಿಕ್ಷಣವನ್ನು ಮುಂದುವರೆಸಲು ನಿರ್ಧರಿಸಿದ ಪರಿಣಾಮವಾಗಿ ಆ ಭಾಗದ ಎಡ ಚಳುವಳಿಗೊಂದು ಗಟ್ಟಿ ಬೀಜ ಸಿಕ್ಕಿದಂತಾಯಿತು. ಹೀಗೆ ಆರಂಭದಲ್ಲಿ ವಿದ್ಯಾರ್ಥಿ ಮುಖಂಡನಾಗಿ ನಂತರದಲ್ಲಿ ಯುವಜನ ರೈತ ಮುಖಂಡನಾಗಿ ಇತ್ತೀಚಿನ ದಿನಗಳಲ್ಲಿ ಗ್ರಾಮಪಂಚಾಯ್ತಿ, ಅಕ್ಷರದಾಸೋಹ, ಅಂಗನವಾಡಿ ನೌಕರರ ಸಂಘದ ಮುಖಂಡನಾಗಿ ಬೆಳವಣಿಕೆ ಗ್ರಾಮದಿಂದ ಹಿಡಿದು ರಾಜ್ಯ ಮಟ್ಟದವರೆಗೂ ಅವರು ಬೆಳೆಯುತ್ತಾ ಬಂದರು.

ಕಳೆದ ಹತ್ತಾರು ವರ್ಷಗಳಿಂದ ಅಬ್ದುಲ್‌ರಜಾಕ್ ಮತ್ತು ಆತನ ಸಂಗಾತಿಗಳು ಕೂಡಿ ಪ್ರಮುಖವಾಗಿ ಯುವಜನ ಚಳುವಳಿಯನ್ನು ಬೆಳೆಸಲು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಕಿತ್ತು ತಿನ್ನುವ ಬಡತನ, ನಿರುದ್ಯೋಗ, ನಿರಂತರ ಬರಗಾಲ, ಕೂಲಿಪ್ರಶ್ನೆ, ನೀರಾವರಿ, ವಿದ್ಯುತ್‌ನಂತಹ ಸಮಸ್ಯೆಗಳನ್ನು ಗದಗ ಜಿಲ್ಲೆ ತನ್ನ ಗರ್ಭದಲ್ಲಿ ಹೊತ್ತುಕೊಂಡಿದ್ದರೂ ಆ ಪ್ರದೇಶದಲ್ಲಿ ಇಂತಹ ಯವುದೇ ಪ್ರಶ್ನೆಗಳಿಗಾಗಿ ಹೋರಾಟ ನಡೆಯುವುದನ್ನು ತಡೆಯುವಲ್ಲಿ ಅಲ್ಲಿನ ಭೂಮಾಲಿಕ -ಪಾಳೇಗಾರಿ ಮತ್ತು ಬಂಡವಾಳ ಶಕ್ತಿಗಳು ಯಶಸ್ವಿಯಾಗಿವೆ. ಕಳೆದ 10 ವರ್ಷಗಳಿಂದೀಚೆಗೆ ಭಜರಂಗದಳದ ವಿಪರೀತ ಹಾವಳಿ ನಮ್ಮ ಚಳುವಳಿಯ ಬೆಳವಣಿಗೆಗೆ ಪ್ರಮುಖ ಅಡ್ಡಿಯಾಗಿದೆ. ಕಳೆದ ಐದಾರು ವರ್ಷಗಳಿಂದ ಸ್ವತಃ ಕಾಂ.ಮುಲ್ಲಾರವರು ಗದಗ್ ಜಿಲ್ಲೆಯ ಐದಾರು ತಾಲ್ಲೂಕುಗಳಲ್ಲಿ ಯುವಜನರನ್ನು ಸಂಘಟಿಸಲು ಪಟ್ಟಿರುವ ಶ್ರಮವನ್ನು ನಮ್ಮ ಕಣ್ಣಾರೆ ಕಂಡಿದ್ದೇವೆ. ಅವರು ಎಷ್ಟು ಬಾರಿ ಸ್ಥಾಪಿತ ಹಿತಾಸಕ್ತಿಗಳಿಂದ, ಭಜರಂಗದಳದವರಿಂದ ಮತ್ತು ತನ್ನ ಸ್ವಧರ್ಮೀಯರಿಂದ ಎದುರಾದ ಪ್ರತಿರೋಧವನ್ನು ಧೈರ್ಯದಿಂದ ಎದುರಿಸಿದ್ದಾರೆ.

ಇಂತಹ ಎಲ್ಲಾ ಸವಾಲುಗಳನ್ನು ಎದುರಿಸಿಯೂ ಕಾಂ.ಮುಲ್ಲಾ ಜಿಲ್ಲೆಯಲ್ಲಿ ಹಲವು ಸಂಘಟನೆಗಳನ್ನು ಹುಟ್ಟುಹಾಕುವಲ್ಲಿ ತನ್ನ ಸಂಗಾತಿಗಳೊಡಗೂಡಿ ಯಶಸ್ವಿಯಾಗಿದ್ದರು. ಅವರ ಸಾಂಘಿಕ ಪ್ರಯತ್ನಗಳು
ಇತ್ತೀಚಿನ ದಿನಗಳಲ್ಲಿ ಫಲವನ್ನು ನೀಡತೊಡಗಿದ್ದ
ಅದಕ್ಕೆ ಕಳೆದ ಆರು ತಿಂಗಳ ಹಿಂದೆ ನಡೆದ ಪಂಚಾ
ಚುನಾವಣೆಯಲ್ಲಿ ಅವರ ಸ್ವಗ್ರಾಮ 'ಬೆಳವಣ
ಗ್ರಾಮ ಪಂಚಾಯ್ತಿಯಲ್ಲಿ ಎಲ್ಲಾ 9 ಸ್ಥಾನಗ
ಅಭ್ಯರ್ಥಿಗಳನ್ನು ಸ್ಪರ್ಧಿಸುವಂತೆ ಮಾಡಿ
ಅದರಲ್ಲಿ 2 ಸ್ಥಾನಗಳನ್ನು ಅತ್ಯಧಿಕ ಮತಗ
ಗೆಲ್ಲಲಿಕ್ಕೆ ಸಾಧ್ಯವಾದುದು ಮತ್ತೂ ಮೂ
ಸ್ಥಾನಗಳಲ್ಲಿ 2ನೇ ಸ್ಥಾನ ಲಭಿಸಿದ್ದು ಎಲ್ಲರ
ನಿಬ್ಬೆರಗಾಗಿಸಿತು. ಹೀಗೆ ಪ್ರತಿ ಚುನಾವಣೆಗ
ಜಾತಿ, ಹಣವನ್ನು ಮುಂದು ಮಾಡಿ ವ
ಕೇಳುತ್ತಿದ್ದವರ ಎದುರು ಪರ್ಯಾಯವಾಗಿ ಅಭಿ
ಪ್ರಶ್ನೆ ಹಾಗೂ ಜನರ ಮೂಲಭೂತ ಸೌಕರ್ಯ
ಬೇಡಿಕೆಗಳ ಪಟ್ಟಿಯನ್ನೊಳಗೊಂಡು 'ಪ್ರತ್ಯೆ
ಗುಂಪು'ನ್ನು ರೂಪಿಸಿ ಚುನಾವಣೆ ಎದುರಿಸು
ಕಾಂ.ಮುಲ್ಲಾ ರೂಪಿಸಿದ ಕಾರ್ಯತಂತ್ರ ಜನರಿ
ಪ್ರಶಂಸೆಗೊಳಗಾಯಿತು.

ಇತ್ತೀಚಿನ ವರ್ಷಗಳಲ್ಲಿ ಹಿಂದೂ ಕೋಮುವಾ
ಶಕ್ತಿಗಳು ಜಿಲ್ಲೆಯಲ್ಲಿ ಹರಿಯಬಿಡುತ್ತಿದ್ದ ಅಪಾಯಕ
ದಾಳಿಗಳ ವಿರುದ್ಧ, ಹಲವು ಪ್ರಗತಿಪ
ಸಂಘಟನೆಗಳು ಹಾಗೂ ವಿಚಾರವಂತರೊಂ
ಕೂಡಿ ಹಲವು ಸೌಹಾರ್ದ ಕಾರ್ಯಕ್ರಮಗಳ
ರೂಪಿಸುವಲ್ಲಿ ಕಾಂ.ಮುಲ್ಲಾ ಸಾಕಷ್ಟು ಶ್ರಮಿಸಿದ್ದ
ಮಾತ್ರವಲ್ಲ ಹೊಳೆಹೊನ್ನೂರು ಮತ್ತಿತರೆ ಕಡೆಗಳ
ನಡೆದ ಕೋಮುಗಲಭೆಗಳ ಹಿಂದೆ ನ
ಭಜರಂಗದಳದವರ ಕೈವಾಡವಿರುವ ಸಂಗತಿಗಳ
ತಮ್ಮ ಸೂಕ್ಷ್ಮಗ್ರಹಿಕೆ ಮತ್ತು ವಿಚಾರದ ಮೂ
ಇಡೀ ರಾಜ್ಯಕ್ಕೆ ನೀಡಿದ್ದರು. ಅಲ್ಲಿ-ಇಲ್ಲಿ ಸಿಗು
ಸಂಪರ್ಕಗಳನ್ನೇ ಬಳಸಿ ಯುವಜನ ಸಂಘಟನೆಯ
ಬೆಳೆಸಲು ಹಗಲಿರುಳು ಕನಸು ಕಾಣುತ್ತಾ ಅದಕ
ಊರೂರು ತಿರುಗಾಡುತ್ತಿದ್ದ ಅವರು ಕೆಲವೊ
ನಿರೀಕ್ಷಿತ ಫಲ ಸಿಗದಿದ್ದಾಗ ಅಥ
'ಭಜರಂಗದಳ'ದವರ ಕುತಂತ್ರದಿಂದಾಗಿ ಅಂತ
ಯುವಕರ ಪಡೆಗಳೇ ದೂರವಾದಾಗ ತೀ
ನಿರಾಶೆಗೊಳ್ಳುತ್ತಿದ್ದರೂ ಯಾವೊತ್ತು ಮುಂದೆ
ಹೆಜ್ಜೆ ಹಿಂದೆ ತೆಗೆಯುತ್ತಿರಲಿಲ್ಲ. ಎಷ್ಟೆಲ್ಲಾ ಸಮಸ್ಯೆ
ನಡುವೆಯೂ ದೃಢವಿಶ್ವಾಸದಿಂದ ಕೆಲ

→

ಗದಗ ಜಿಲ್ಲಾ ಚಳುವಳಿಗೆ ತುಂಬಲಾಗದ ನಷ್ಟ

ಸುಮಾರು ಹದಿನೈದು - ಇಪ್ಪತ್ತು ವರ್ಷಗಳ ಹಿಂದಿನ ಮಾತು. ಆಗ ನಾನು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದೆ. ಅದೊಂದು ದಿನ ಅಂಚೆಯವನು ತಂದುಕೊಟ್ಟ ಪತ್ರಗಳಲ್ಲಿ ಒಂದು ಇನ್‌ಲ್ಯಾಂಡ್ ಲೆಟರ್ ಇತ್ತು. ಪತ್ರದೊಳಗಿನ ಪ್ರಸ್ತಾವ ಅನಿರೀಕ್ಷಿತವೇ ಆಗಿತ್ತು. ಅದರ ಸಾರಾಂಶ ಹೀಗಿತ್ತು. "ನಾನು ಸಿಪಿಐ(ಎಂ) ಕುರಿತು ಅಲ್ಪಸ್ವಲ್ಪ ತಿಳಿದುಕೊಂಡಿದ್ದೇನೆ. ಇನ್ನೂ ಹೆಚ್ಚು ತಿಳಿದುಕೊಳ್ಳಲು ಬಯಸುತ್ತೇನೆ. ನಾನು ಪಕ್ಷದ ಸದಸ್ಯನಾಗಬಹುದೇ? ದಯವಿಟ್ಟು ತಿಳಿಸಿರಿ?". ಈ ರೀತಿ ಪತ್ರವನ್ನು ಬರೆದು ಸಿಪಿಐ(ಎಂ) ಪಕ್ಷವನ್ನು ಹುಡುಕಿಕೊಂಡು ಬಂದವರು ಮತ್ಯಾರೂ ಅಲ್ಲ, ಅವರು ಇದೇ ಅಕ್ಟೋಬರ್ 17ರಂದು ನಮ್ಮನ್ನಗಲಿದ ನಮ್ಮೆಲ್ಲರ ಪ್ರೀತಿಯ ಕಾಮ್ರೇಡ್ ಅಬ್ದುಲ್ ರಜಾಕ್ ಮುಲ್ಲಾ. ಅನಿರೀಕ್ಷಿತವಾಗಿ ಬಂದು ತುಂಬ ನಿರೀಕ್ಷೆಗಳನ್ನು ಹುಟ್ಟುಹಾಕಿದ ಕಾಮ್ರೆಡ್ ಮುಲ್ಲಾ ಅನಿರೀಕ್ಷಿತವಾಗಿಯೇ ಹೊರಟುಹೋಗಿದ್ದಾರೆ. ಕಾಮ್ರೇಡ್ ಮುಲ್ಲಾರವರ ನಿಧನದ ಸುದ್ದಿ ನಂಬಲಾಗದ ಸುದ್ದಿಯಾಗಿದೆ. ಚಳುವಳಿಯ ಅವರ ಒಡನಾಡಿಗಳಿಗೆ ಬಾರೀ ಆಘಾತವಾಗಿದೆ. ಅವರನ್ನೇ ನಂಬಿ ಬದುಕುತ್ತಿದ್ದ ಮಡದಿ ಮತ್ತು ಪುಟ್ಟ ಮಕ್ಕಳಾದ ರೇಷ್ಮಾ ಮತ್ತು ಸಮತಾರಿಗೆ ಚೇತರಿಸಿಕೊಳ್ಳಲಾಗದ ಆಘಾತವನ್ನು ಉಂಟುಮಾಡಿದೆ.

ಕಾಮ್ರೇಡ್ ಮುಲ್ಲಾ ತೀವ್ರ ಹೃದಯಾಘಾತಕ್ಕೆ ಒಳಗಾಗಿ ನಿಧನರಾದರು ಎಂಬ ವಾರ್ತೆಯನ್ನು ಅವರನ್ನು ಹತ್ತಿರದಿಂದ ಬಲ್ಲವರೇ ನಂಬದಂತಾಗಲು ಅವರ ಆರೋಗ್ಯದ ಪರಿಸ್ಥಿತಿಯ ಬಗ್ಗೆ ಯಾವುದೇ ಗಂಭೀರ ಸಮಸ್ಯೆ ಇದುವರೆಗೆ ಗಮನಕ್ಕೆ ಬಾರದಿರುವುದೇ ಕಾರಣವಾಗಿದೆ. ಆಗಾಗ ಕಾಣಿಸಿಕೊಳ್ಳುತ್ತಿದ್ದ ತಲೆ ಸುತ್ತುವುದು, ಆಯಾಸವಾಗುವುದು ಮೊದಲಾದ ಸಮಸ್ಯೆಗಳನ್ನು ಬಿಟ್ಟರೆ ಬೇರೆ ಯಾವ ತಕರಾರುಗಳು ಇರುತ್ತಿರಲಿಲ್ಲ. ಇತ್ತೀಚೆಗೆ ಅವರು ಬೆಳವಣಿಕೆಯಲ್ಲಿರುವ ತಮ್ಮ ಮನೆಯನ್ನು ಬಿಟ್ಟು ಗದಗ ನಗರಕ್ಕೆ ಬಂದಿದ್ದರು. ನಗರದ ಹೊರವಲಯದ ಆಶ್ರಯ ಕಾಲೋನಿಯ ಒಂದು ಮನೆಯನ್ನು ಬಾಡಿಗೆ ಪಡೆದು ಕೆಲಸ ಆರಂಭಿಸಿದ್ದರು. ಸಂಘಟನೆಯ ಕೆಲಸಗಳಿಗಾಗಿ ನಗರಕ್ಕೆ ಬಂದು ಹೋಗಲು ಸೈಕಲ್ ಬಳಸುತ್ತಿದ್ದರು. 'ಬೇಸಿಗೆಯ ಬಿಸಿಲಲ್ಲಿ ಇಡೀ ದಿನ ಸೈಕಲ್ ಮೇಲೆ ಓಡಾಡಿ ಸುಸ್ತಾಗಿದ್ದೇನೆ?' ಎಂದು ಒಂದು ಸಲ ಕಾಂ.ಮುಲ್ಲಾ ಉದ್ಗರಿಸಿದ್ದು ನನ್ನ ಕಿವಿಗಳಲ್ಲಿ ಈಗ ಮಾರ್ದನಿಗೊಳ್ಳುತ್ತಿದೆ. ವಿವರವಾದ ವೈದ್ಯಕೀಯ ಪರಿಶೀಲನೆಗೆ ನಡೆಸಿದ್ದರೆ ಅಪಾಯದ ಮುನ್ಸೂಚನೆ ದೊರೆಯುತ್ತಿತ್ತೋ, ಏನೋ? ಪಕ್ಷದಲ್ಲಿ ಕೆಲಸ ಮಾಡಲು ಬಯಸಿ ಬಂದ ಕಾಮ್ರೆಡ್ ಮುಲ್ಲಾ ಕೆಲಕಾಲ ಹುಬ್ಬಳ್ಳಿಯಲ್ಲಿರುವ ಪಕ್ಷದ ಜಿಲ್ಲಾ ಸಮಿತಿ ಆಫೀಸಿನಲ್ಲಿ ನನ್ನೊಂದಿಗಿದ್ದರು. ಪಕ್ಷದ ಆಫೀಸಿನಲ್ಲಿ ಪ್ರತಿದಿನ ಕಸ ಗುಡಿಸುವ ಕೆಲಸವೂ ಕ್ರಾಂತಿಕಾರಿ ಕೆಲಸದ ಭಾಗವಾಗಿದೆ ಎಂದು ಹೇಳಿದಾಗ ಅದನ್ನು ಕಾಂ.ಮುಲ್ಲಾ ಅರ್ಥ ಮಾಡಿಕೊಂಡರು. ಅನಂತರ ಅವರನ್ನು ವಿದ್ಯಾರ್ಥಿ ರಂಗದ ಚಟುವಟಿಕೆಗಳಿಗಾಗಿ ನಿಯೋಜಿಸಲಾಯಿತು. ಈ ತೀರ್ಮಾನಕ್ಕನುಗುಣವಾಗಿ ಅವರು ಹುಬ್ಬಳ್ಳಿ, ನರಗುಂದ, ನವಲಗುಂದ, ಮುಂಡರಗಿ, ಗಜೇಂದ್ರಗಡ ಮೊದಲಾದ ಕಡೆಗಳಲ್ಲಿ ಎಸ್‌ಎಫ್ಐ ಕಟ್ಟಲು ಓಡಾಡಿದರು. ಕಾಮ್ರೇಡ್ ಮಹೇಶ್ ಪತ್ತಾರ್, ಬಸವರಾಜ್ ಪೂಜಾರ್ ಮೊದಲಾದರನ್ನು ಗುರುತಿಸಿ ಸಂಘಟನೆಯೊಳಗೆ ತಂದರು. ಕಾಂ.ಮುಲ್ಲಾರವರ ಪರಿಶ್ರಮದಿಂದಾಗಿ ಸ್ಥಗಿತಗೊಂಡಿದ್ದ ವಿದ್ಯಾರ್ಥಿ ರಂಗದ ಚಳುವಳಿ ಮತ್ತೆ ತಲೆ ಎತ್ತುವಂತಾಯಿತು.

ವಿದ್ಯಾರ್ಥಿ ರಂಗದಿಂದ ಕಾಂ.ಮುಲ್ಲಾ ಹೊರಬರುತ್ತಿದ್ದಂತೆ ಯುವಜನ ಸಂಘಟನೆಯ ಮತ್ತು ರೈತ ಸಂಘಟನೆಯ ರಾಜ್ಯ ಮುಖಂಡತ್ವ ತಮ್ಮ ತಮ್ಮ ಸಂಘಟನೆಗಳಿಗೆ ಸೆಳೆಯಲು ಪ್ರಯತ್ನಿಸಿದರು. ಅಷ್ಟರಲ್ಲಿ ಕಾಂ.ಮುಲ್ಲಾ ಗ್ರಾಮೀಣ ಹಿನ್ನೆಲೆಯ



ಕಾರಣದಿಂದಾಗಿ ರೈತರ ನಡುವೆಯೂ ಸಂಪರ್ಕವನ್ನು ಹೊಂದಿದ್ದರು. ಗ್ರಾಮೀಣ ಯುವಕರ ನಡುವೆಯೂ ಪ್ರಭಾವವನ್ನು ಹೊಂದಿದ್ದರು. ಪಕ್ಷದ ಜಿಲ್ಲಾಸಮಿತಿಯ ತೀರ್ಮಾನಕ್ಕೆ ತಲೆಬಾಗಿ ಅವರು ಯುವಜನ ಚಳುವಳಿಗೆ ಮೊದಲ ಆದ್ಯತೆ ನೀಡಿ ಕೆಲಸ ಮಾಡಲು ನಿರ್ಧರಿಸಿ ಗದಗ ಜಿಲ್ಲೆಯಲ್ಲಿ ಕೆಲಸ ಮಾಡತೊಡಗಿದರು. ಗದಗ, ಮುಂಡರಗಿ, ರೋಣ ಮೊದಲಾದ ತಾಲ್ಲೂಕುಗಳಲ್ಲಿ ಯುವಜನ ರಂಗದ ಚಟುವಟಿಕೆಗಳು ವಿಸ್ತರಿಸುವಂತಾಯಿತು.

ಈ ನಡುವೆ ಕಾಂ.ಮುಲ್ಲಾ ಪಕ್ಷದ ಜಿಲ್ಲಾ
ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಅಲ್ಲದ
ಪಕ್ಷದ ಪೂರ್ಣಕಾಲದ ಕಾರ್ಯಕರ್ತರೆಂದು
ಘೋಷಿಸಲ್ಪಟ್ಟಿದ್ದರು. ಅಂದಿನಿಂದ ಅವರು
ಜಿಲ್ಲೆಯಲ್ಲಿ ವಿವಿಧ ಜನವಿಭಾಗಗಳನ್ನು
ಸಂಘಟಿಸುವಲ್ಲಿ ವಿಶೇಷ ಮುತುವರ್ಜಿ
ವಹಿಸತೊಡಗಿದರು. ಸಂಘಟನೆಯ ಕೆಲಸಕ
ಸಹಾಯವಾಗಲೆಂದೇ ಅವರು ತಮ್ಮ ಪಾಲಿಗ
ಬಂದ ಆಸ್ತಿಯಲ್ಲಿ ಒಂದು ಭಾಗವನ್ನು ಲೀಸಿಗ
ಕೊಟ್ಟು ಆ ಹಣದಿಂದ ಗದಗ ನಗರದಲ್ಲಿ ಒಂದು
ಮನೆಯನ್ನು ಮಾಡಿಕೊಂಡು ಇರಲಾರಂಭಿಸಿದ್ದರು
ಹೀಗೆ ತಮ್ಮ ಇಡೀ ಜೀವನವನ್ನು ಪಕ್ಷಕ್ಕಾಗಿ
ದುಡಿಯುವ ಜನರ ವಿಮೋಚನೆಗಾಗಿ
ಮುಡಿಪಾಗಿಟ್ಟಿದ್ದರು. ಪಾಳೇಗಾರಿ
ಪ್ರತಿಗಾಮಿ ಶಕ್ತಿಗಳು ತುಂಬಾ
ಪ್ರಬಲವಾಗಿರುವ ಗದಗ ಜಿಲ್ಲೆಯಲ್ಲಿ
ಕಾಂ.ಮುಲ್ಲಾ ಅವರು ಪೂರ್ಣಕಾಲದ
ಕಾರ್ಯಕರ್ತನಾಗಿ ಕೆಲಸ ಮಾಡಲು
ತೊಡಗಿದ್ದು ಅವರಿಗೆ ವೈಯಕ್ತಿಕವಾಗಿ
ಅನೇಕ ಗಂಡಾಂತರಗಳನ್ನು
ತಂದೊಡ್ಡಲಿದೆ ಎಂಬುದು ಅವರಿಗೆ
ತಿಳಿದಿತ್ತು. ಆದರೂ ಕಾಂ.ಮುಲ್ಲಾ
ಧೈರ್ಯದಿಂದ ಈ ಸವಾಲನ್ನು
ಅಂಗೀಕರಿಸಿದ್ದರು. ಅವರ ಪರಿಶ್ರಮ ಫಲ ನೀಡಲು
ಆರಂಭಿಸಿತ್ತು. ಅವರ ಈ ಅನಿರೀಕ್ಷಿತ ಸಾವಿನಿಂದ
ಗದಗ ಜಿಲ್ಲೆಯ ಪ್ರಜಾಸತ್ತಾತ್ಮಕ ಚಳುವಳಿಗೆ
ತುಂಬಲಾರದ ಹಾನಿಯಾಗಿದೆ. ಜಿಲ್ಲೆಯಲ್ಲಿ
ಕಾಂ.ಮುಲ್ಲಾರವರು ಅತ್ಯಂತ ಪ್ರಾಮಾಣಿಕವಾಗಿ
ಆರಂಭಿಸಿದ ಕೆಲಸವನ್ನು ಮುನ್ನಡೆಸುವ
ಮೂಲಕವಷ್ಟೇ ಈ ಹಾನಿಯನ್ನು ತುಂಬಲು
ಸಾಧ್ಯ.

- ನಿತ್ಯಾನಂದಸ್ವಾಮಿ

ಮಾಡುತ್ತಿದ್ದರು. ಮಾಡುವ ಕೆಲಸ ಚಿಕ್ಕದಿರಲಿ ದೊಡ್ಡದಾಗಿರಲಿ ಅದು ಸಾಕಷ್ಟು ಚೊಕ್ಕವಾಗಿ ಮಾಡುವ ವಿಧಾನವನ್ನು ಅವರು ಅಳವಡಿಸಿ ಕೊಂಡಿದ್ದರು. ಇಂತಹ ನೇರ-ನಿಷ್ಠುರ-ಸಂಗಾತಿಯೊಬ್ಬ ಆಕಸ್ಮಿಕವಾಗಿ, ಅನಿರೀಕ್ಷಿತವಾಗಿ ನಮ್ಮೆಲ್ಲರಿಂದ ದೂರವಾಗಿರುವ ಸಂಗತಿಯನ್ನು ಒಪ್ಪಲು ನಮ್ಮ ಮನಸ್ಸು ಇನ್ನೂ ಸಿದ್ದವಿಲ್ಲ! ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಅತ್ಯಂತ ಬದ್ದತೆಯೊಂದಿಗೆ ಕೆಲಸ ಮಾಡುತ್ತಿದ್ದ ಕಾಂ.ಮುಲ್ಲಾ, ರಾತ್ರಿಯಿಡೀ ಎಚ್ಚರವಾಗಿರುತ್ತಿದ್ದು ಜನರೆಲ್ಲಾ ಮಲಗಿದ್ದಾಗಲೂ ಏನಾದರೂ ಮಾಡುತ್ತಿದ್ದ! ಇದು ಮುಲ್ಲಾರವರನ್ನು ಹತ್ತಿರದಿಂದ ನೋಡಿದವರಿಗೆಲ್ಲಾ ತಿಳಿದ ಸಂಗತಿ.

ಅಂತಹ ಮುಲ್ಲಾ.........

ಅಕ್ಟೋಬರ್-17ರ ನಡುಮಧ್ಯಾಹ್ನದಲ್ಲಿ ಎರಡು ಹೆಣ್ಣು ಕಂದಮ್ಮಗಳನ್ನೊಳಗೊಂಡ ಪುಟ್ಟ ಸಂಸಾರವೊಂದನ್ನು ನಮ್ಮೊಂದಿಗೆ ಬಿಟ್ಟು ಇದ್ದಕ್ಕಿದ್ದಂತೆ ದೂರವಾದ.... ಅಂತಹ ಪ್ರೀತಿಯ ಸಂಗಾತಿಯೊಬ್ಬರನ್ನು ಮರೆತೆನೆಂದರೂ....ಮರೆಯಲಿ ಹ್ಯಾಂಗ...........

ಕಾಂ.ಅಬ್ದುಲ್ ರಜಾಕ್ ಮುಲ್ಲಾ

ನಿನಗಿದೋ ನಮ್ಮ ಭಾವಪೂರ್ಣ ನಮನಗಳು!!!

ಕೆ.ಮಹಾಂತೇಶ್

ಭಾವಪೂರ್ಣ ವಿದಾಯ.........

ಡಿವೈಎಫ್ಐ ಗದಗ ಜಿಲ್ಲಾ ಸಂಚಾಲಕ, ಗ್ರಾಮಪಂಚಾಯ್ತಿ, ಅಕ್ಷರದಾಸೋಹ ನೌಕರರ ಸಂಘದ ಜಿಲ್ಲಾಧ್ಯಕ್ಷ, ರೈತಸಂಘದ ರಾಜ್ಯಸಮಿತಿ ಸದಸ್ಯ ಹಾಗೂ ಸಿ.ಪಿ.ಐ(ಎಂ) ದಾರವಾಡ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾಗಿದ್ದ ಕಾಂ.ಅಬ್ದುಲ್ ರಜಾಕ್ ಮುಲ್ಲಾ ಅಕ್ಟೋಬರ್-17ರ ಮಧ್ಯಾಹ್ನ ಅನಿರೀಕ್ಷಿತವಾಗಿ ಸಂಭವಿಸಿದ ಹೃದಯಾಘಾತದಿಂದಾಗಿ ನಿಧನರಾದರು. ಅವರಿಗೆ 38 ವರ್ಷವಾಗಿತ್ತು. ಅವರು 8 ವರ್ಷದ ರೇಷ್ಮಾ, 6 ವರ್ಷದ ಸಮತಾ ಎಂಬ ಎರಡು ಹೆಣ್ಣುಮಕ್ಕಳು ಹಾಗೂ ಹೆಂಡತಿ, ವಯಸ್ಸಾದ ತಾಯಿ, ಒಬ್ಬ ಸೋದರ ಮತ್ತು 3 ಜನ ಸೋದರಿಯರು, ಬಂಧುಗಳು ಹಾಗೂ ಅಪಾರ ಸಂಖ್ಯೆಯ ಸಂಗಾತಿಗಳನ್ನು ಅಗಲಿದ್ದಾರೆ.

17ರ ಮಧ್ಯಾಹ್ನ ಗದಗ್ ನಗರದಲ್ಲಿ ಊರಿನಿಂದ ಬಂದಿದ್ದ ತನ್ನ ತಾಯಿಯನ್ನು ಕರೆತರಲು ಸೈಕಲ್‌ನಲ್ಲಿ ತೆರಳುತ್ತಿದ್ದಾಗ ಆಕಸ್ಮಿಕವಾಗಿ ತೀವ್ರ ಹೃದಯಾಘಾತಕ್ಕೊಳಗಾಗಿ ಕುಸಿದುಬಿದ್ದಿದ್ದಾರೆ. ಆ ಕ್ಷಣದಲ್ಲಿ ಪರಿಚಿತ ಪೊಲೀಸರೊಬ್ಬರು ಅವರನ್ನು ಮನೆಗೆ ಸಾಗಿಸಿದ್ದಾರೆ. ಸ್ವಲ್ಪ ಸಮಯದ ನಂತರ ಮನೆಯಲ್ಲೇ ಮತ್ತೆ ತೀವ್ರ ಹೃದಯಾಘಾತಕ್ಕೊಳಗಾದಾಗ ನೆರೆಯುವರ ಸಹಾಯದಿಂದ ಅವರ ಶ್ರೀಮತಿಯವರು ಆಸ್ಪತ್ರೆಗೆ ಸಾಗಿಸಿದ್ದಾರೆ. ಆಸ್ಪತ್ರೆಯಲ್ಲಿ ಕಾಂ.ಮುಲ್ಲಾ ಮೃತಪಟ್ಟಿದ್ದಾರೆ.



1967 ಜೂನ್-1ರಂದು ಜನಿಸಿದ ಕಾಂ.ಮುಲ್ಲಾ ನರಗುಂದ, ರಾಮದುರ್ಗದಲ್ಲಿ ಆರಂಭಿಕ ಶಿಕ್ಷಣ ಪಡೆದು ಕೆಲವಾರು ವರ್ಷ ಹಲವು ಕಾರಣಗಳಿಂದ ಶಿಕ್ಷಣದಿಂದ ದೂರವಿದ್ದರು. 90ರ ಸುಮಾರಿನಲ್ಲಿ ಪುನಃ ನರಗುಂದ ನಗರದ ಕಾಲೇಜಿನಲ್ಲಿ ತನ್ನ ಶಿಕ್ಷಣ ಮುಂದುವರೆಸುವ ಸಮಯದಲ್ಲೇ ಎಸ್‌ಎಫ್ಐ ಸಂಪರ್ಕಕ್ಕೆ ಬಂದ ಅವರು ಕೆಲವಾರು ವರ್ಷಗಳ ಕಾಲ ಎಸ್‌ಎಫ್ಐ ಮುಖಂಡರಾಗಿ, ರಾಜ್ಯಸಮಿತಿ ಸದಸ್ಯರಾಗಿ ಕೆಲಸ ಮಾಡಿದರು.

ಕಾಂ.ಮುಲ್ಲಾರವರು ಹೃದಯಾಘಾತಕ್ಕೆ ಒಳಗಾದ ಸುದ್ದಿ ತಿಳಿಯುತ್ತಿದ್ದಂತೆ ಡಿವೈಎಫ್ಐ ಮುಖಂಡರಾದ ಕಾಂ.ರವೀಂದ್ರ ಹೊನವಾಡ, ಶರಣಬಸವ ಮರದ, ಎಸ್‌ಎಫ್ಐ ಮುಖಂಡರಾದ ಎಂ.ಎಸ್.ಹಡಪದ ಮೊದಲಾದ ಸಂಗಾತಿಗಳು ಆಸ್ಪತ್ರೆಗೆ ಧಾವಿಸಿದ್ದಾರೆ. ನಂತರ ಬೆಳವಣಿಕೆ ಡಿವೈಎಫ್ಐ, ಎಸ್‌ಎಫ್ಐ ಸಂಗಾತಿಗಳಾದ ಬಸವರಾಜ್ ಮಂತೂರು, ಬಿ.ಜಿ.ವಿ.ಎಸ್.ನ ಚೀಗರೆಡ್ಡಿ, ಮಹೇಶ ಹಿರೇಮಠ, ಹದ್ಲಿ ಮಾಗೊಂಡಪ್ಪ ಮೊದಲಾದ ಹತ್ತಾರು ಸಂಗಾತಿಗಳು ದೌಡಾಯಿಸಿದ್ದಾರೆ ಅವರನ್ನು ಉಳಿಸಿಕೊಳ್ಳಲಾಗಲಿಲ್ಲ ಎಂಬ ನೋವಿನಲ್ಲೇ ಅಂತಿಮಯಾತ್ರೆಗೆ ಬೇಕಾದ ಸಿದ್ದತೆಗಳನ್ನು ಮಾಡಿದರು.

ಮತ್ತೊಂದೆಡೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದಸ್ವಾಮಿ. ಎಸ್‌ಎಫ್ಐ ಉಪಾಧ್ಯಕ್ಷ ಕಾಂ.ವಿಜಯಕುಮಾರ್ ನೇತೃತ್ವದಲ್ಲಿ ಎಸ್‌ಎಫ್ಐ ಸಂಗಾತಿಗಳೊಡಗೂಡಿದ ಒಂದು ತಂಡ ಅದೇ ದಿನ ಸಂಜೆ ಬೆಳವಣಿಕೆ ಗ್ರಾಮ ತಲುಪಿತು. ಡಿವೈಎಫ್ಐ ರಾಜ್ಯ ಉಪಾಧ್ಯಕ್ಷ ಕಾಂ.ವಿಠ್ಠಲ ಭಂಡಾರಿ, ಎಸ್‌ಎಫ್ಐ ರಾಜ್ಯ ಕಾರ್ಯದರ್ಶಿ ಕಾಂ.ನವೀನ್‌ಕುಮಾರ್, ಸಿಐಟಿಯು ಮುಖಂಡರಾದ ಕಾಂ.ಯಮುನಾ ಗಾಂವ್ಕರ್, ಧಾರವಾಡ ಜಿಲ್ಲಾ ಡಿವೈಎಫ್ಐ ಮುಖಂಡರಾದ ಕಾಂ.ಮಹೇಶ ಪತ್ತಾರ್, ಬಿ.ವಿ.ಕೊರಿಮಠ ಮೊದಲಾದವರ ಇನ್ನೊಂದು ಗುಂಪು 18ರ ಬೆಳಗಿನ ಜಾವ ಬೆಳವಣಿಕೆ ತಲುಪಿದರು.

ಇನ್ನೂ 18ರ ಬೆಳಿಗ್ಗೆಯಿಂದಲೇ ಕಾಂ.ಮುಲ್ಲಾರವರ ಅಂತಿಮಯಾತ್ರೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿನಿಂದ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕಾಂ.ಕೆ.ಮಹಾಂತೇಶ್, ಡಿವೈಎಫ್ಐ ಮುಖಂಡ ಕಾಂ.ಲಿಂಗರಾಜ್, ಬಳ್ಳಾರಿ ಜಿಲ್ಲೆಯ ಸತ್ಯಬಾಬು, ಜಿ.ವಿ.ರಮೇಶ್ ರಾಯಚೂರಿನಿಂದ ಶರ್ಫುದ್ದೀನ್, ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರಾದ ಕಾಂ.ವಿ.ಪಿ.ಕುಲಕರ್ಣಿ, ಧಾರವಾಡ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಕಾಂ.ಆರ್.ಹೆಚ್.ಆಯಿ, ಸಿಐಟಿಯು ಮುಖಂಡರಾದ ಗೈಬು ಜೈನಖಾನ್, ಬಿ.ಐ.ಈಳಗೇರ್, ಬಂಡಾಯ-ಸಾಹಿತ್ಯ ಸಂಘಟನೆಯ ಸಂಚಾಲಕರಾದ ಬಸವರಾಜ್ ಸೂಳಿಬಾಯಿ, ಪ್ರೊ. ಚಿಕ್ಕನರಗುಂದು, ಕೆಂಚರೆಡ್ಡಿ, ಬಿ.ಬಾಬು, ಪತ್ರಕರ್ತರಾದ ಬಸವರಾಜ್ ಪೂಜಾರ್, ಶರೀಫ್, ರಾಜ್ಯರೈತ ಸಂಘದ ಕೂಡ್ಲೆಪ್ಪ ಗರಡಿಮನಿ, ಸರ್ಕಾರಿ ನೌಕರರ ಒಕ್ಕೂಟದ ಜಿ.ಸಿ.ಯಲ್ಬುರ್ಗಿಮಠ ಸೇರಿದಂತೆ ನೂರಾರು ವಿವಿಧ ಸಂಘಟನೆಗಳ ಮುಖಂಡರು ಕಾರ್ಯಕರ್ತರುಗಳು ಬೆಳವಣಿಕೆಯತ್ತ ಧಾವಿಸಿದರು.

18ರ ಮದ್ಯಾಹ್ನ 1 ಗಂಟೆಗೆ ಸರಿಯಾಗಿ ಕಾಂ.ಮುಲ್ಲಾರವರ ಪಾರ್ಥೀವ ಶರೀರದ ಅಂತಿಮಯಾತ್ರೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಹೋರಾಟದ ಹಾಡುಗಳೊಂದಿಗೆ ಆರಂಭಗೊಂಡು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಊರಹೊರಗಿನ ಸ್ಮಶಾನವನ್ನು ತಲುಪಿತು. ಅದೇ ಸ್ಥಳದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಆರ್.ಹೆಚ್.ಆಯಿಯವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆಯೊಂದನ್ನು ನಡೆಸಿ ಜನತೆಗಾಗಿ ಸಮಾಜಕ್ಕಾಗಿ - ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಅತ್ಯಂತ ನಿಸ್ವಾರ್ಥವಾಗಿ ದುಡಿದ ಕಾಂ.ಮುಲ್ಲಾರವರ ಆದರ್ಶಗಳನ್ನು ಆಶಯಗಳನ್ನು ನನಸಾಗಿಸುವ ದಿಶೆಯಲ್ಲಿ ಚಳುವಳಿಯನ್ನು ಮುನ್ನಡೆಸುವ ಪಣ ತೊಡಲು ಮಾತನಾಡಿದ ಎಲ್ಲರೂ ಕರೆ ನೀಡುವುದರ ಮೂಲಕ ಕಾಂ.ಮುಲ್ಲಾರವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಅಂತಿಮ ವಿದಾಯ ನೀಡಲಾಯ್ತು. ○

ವಿಶ್ವಬ್ಯಾಂಕ್ ವರದಿ....

ಪುಟ 3 ರಿಂದ

ನಿಧಾನವಾಗಿಲ್ಲ. ಆಡಳಿತ ಸುಧಾರಣೆ ಎಂದರೆ ಉದ್ಯೋಗನಾಶ- ಕೆಲಸಗಳ ಖಾಸಗೀಕರಣ. ಸಾರಿಗೆ ಸುಧಾರಣೆ- ರಸ್ತೆ ನಿರ್ಮಾಣಕ್ಕೆ ವಿಶ್ವಬ್ಯಾಂಕ್‌ಗೆ ಇನ್ನೂ ಹೆಚ್ಚು ಕೈ ಒಡ್ಡಬೇಕು. ಹಾಗೆ ನೀರು ಸರಬರಾಜು ಖಾಸಗೀಕರಿಸಬೇಕು. ಕಂಪನಿಗಳಿಗೆ ಖುಷಿ ತರುವುದೆಂದರೆ ಸಾಮಾನ್ಯ ಜನಕೋಟಿಗೆ ಸಂಕಷ್ಟದ, ದುಃಖದ ಹೊರೆ, ಅಮಾನವೀಯ ಸುಲಿಗೆ.

ಭ್ರಷ್ಟತೆಯಲ್ಲಿ ಪಾಲು:

ಸತ್ಯ ಒಪ್ಪಿಕೊಂಡ ಬ್ಯಾಂಕ್ :

ಈ ವರದಿ ಅರ್ಥಾತ್ ವಿಶ್ವಬ್ಯಾಂಕ್ ಕೆಲವು ನಿಷ್ಠುರ ಸತ್ಯಗಳನ್ನು ಒಪ್ಪಿಕೊಂಡಿದೆ. ತನ್ನ ಷರತ್ತುಗಳನ್ನು ಶಿರಸಾವಹಿಸಿ ಒಪ್ಪಿ ಜಾರಿಗೆ ತೊಡಗಿಸಲು ವಿಶ್ವಬ್ಯಾಂಕ್ ವ್ಯವಹಾರ ನಡೆಸುವುದೇ ಬಹುತೇಕ ಭ್ರಷ್ಟಾಚಾರದ ಮೂಲಕ, ಅಂತಹ ಸರ್ಕಾರ - ಅಧಿಕಾರಸ್ತರು, ಅಧಿಕಾರಿಗಳನ್ನು ಭ್ರಷ್ಟಗೊಳಿಸಿಯೇ (ವಿಶ್ವಬ್ಯಾಂಕ್ ಷರತ್ತು ಒಪ್ಪದ ಎಡರಂಗ ಸರ್ಕಾರಗಳ ಮೇಲೆ ಕೋಪ). ಈಗಲೂ ತನ್ನ ಸಲಹೆಗಾರರೆಂದೋ, ಮಾಜಿ ಸದಸ್ಯರೆಂದೋ ಜಗತ್ತಿನಾದ್ಯಂತ ಆಯಕಟ್ಟಿನ ಆಯ್ದವರಿಗೆ ಯಥೇಚ್ಛವಾಗಿ 'ಸಲಹಾ ಶುಲ್ಕ'ದ ಹೆಸರಿನಲ್ಲಿ ಲಕ್ಷಾಂತರ, ಕೋಟ್ಯಾಂತರ ಹಣ ನೀಡುವುದು ಅದರ ತಂತ್ರದ ಭಾಗ.

ಉದಾರೀಕರಣ-ಜಾಗತೀಕರಣದ ಮಂತ್ರ ಊದುವ ವಿಶ್ವಬ್ಯಾಂಕ್‌ನ ಷರತ್ತುಗಳಿಗೆ ತಲೆಬಾಗಿದ ಕೃಷ್ಣರ ಸರ್ಕಾರ ಬ್ಯಾಂಕ್‌ಗೂ ಅಚ್ಚುಮೆಚ್ಚು. ಇಂತಹ ಭ್ರಷ್ಟತೆ -ಭ್ರಷ್ಟ ಸಂಸ್ಥೆಯೊಂದು ತನ್ನ ಸಮೀಕ್ಷಾ ವರದಿಯಲ್ಲಿ ಭ್ರಷ್ಟಾಚಾರ ಗುರುತಿಸಿರುವುದು ತನ್ನ ಸಹ ಏಜೆಂಟ್‌ನ ಭ್ರಷ್ಟತೆಯನ್ನು ದೃಡಪಡಿಸಿದಂತೆ ಅಷ್ಟೆ. ಈ ಮೂಲಕ ಕೃಷ್ಣರ ಹೈಟೆಕ್ ಸರ್ಕಾರ ಭ್ರಷ್ಟ ಸರ್ಕಾರ ಎಂಬುದನ್ನು ಮತ್ತೊಮ್ಮೆ ಗೋಣಾಟದ ಮೂಲಕ ಜಗತ್ತಿಗೇ ಸಾರಿದೆ.

ತನಿಖೆಯೇಕಿಲ್ಲ?

ಈ ವರದಿಯ ಅಂಶಗಳನ್ನು ತನಿಖೆಗೊಳಪಡಿಸಲು ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಮೊದಲ ಪ್ರತಿಕ್ರಿಯೆ ನೀಡಿದರು. ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್‌ರವರು ಗಂಭೀರ ವಿಚಾರವಿದು, ಸಂಪುಟದಲ್ಲಿ ಚರ್ಚಿಸಲಾಗುವುದು ಎಂದರು. ಕೃಷ್ಣ ತೀವ್ರ ಆಕ್ಷೇಪ ಎತ್ತಿ ಲೋಕೋಪಯೋಗಿ ಇಲಾಖೆಯಿಂದಲೇ ತನಿಖೆ ಆರಂಭವಾಗಲಿ ಎಂದು ಪರೋಕ್ಷವಾಗಿ ಧರಂಸಿಂಗ್‌ರಿಗೆ ಬೆದರಿಕೆ ಹಾಕಿದರು. ನಂತರ ಎಲ್ಲವೂ ಸುಖಾಂತ. ತನಿಖೆಯ ಮಾತು ಮಾಯ! ವಿರೋಧ ಪಕ್ಷದ ನಾಯಕನ ಕೆಲಸವೆಂದರೆ ಯಡಿಯೂರಪ್ಪ ಜಗದೀಶ್ ಶೆಟ್ಟರ್‌ಗೆ ಮುಖ್ಯಮಂತ್ರಿ ಮನೆ ಮುಂದೆ ಸದಾ ಮನೆ ಸೈಟ್, ಭೂಮಿಗಾಗಿ ಅರ್ಜಿ ಹಿಡಿದು ಕಾಯುವುದೇ ಏನು ಎಂದು ಜೆಡಿ(ಎಸ್)ನ ಕುಮಾರಸ್ವಾಮಿ ಪ್ರಶ್ನಿಸಿದ ಬಳಿಕ ಒಳ್ಳೆ ಮೇವು ಸಿಕ್ಕವರಂತೆ ಚೀರಾಡುತ್ತಿದ್ದ ಬಿಜೆಪಿ ನಾಯಕ ಯಡಿಯೂರಪ್ಪನವರು ತಣ್ಣಗೆ! ಇವರೆಲ್ಲಾ ಬ್ಯಾಂಕ್‌ಮಯ! ಹೇಗಿದೆ ಮಾಯ?

ಪ್ರತಿರೋಧ, ಎಚ್ಚರ ಅಗತ್ಯ

ಇವರೆಲ್ಲಾ ಅದೆಷ್ಟೆ ಕಾನೂನು ಪದಗಳನ್ನು ಹೇಳೀ ಭ್ರಷ್ಟಾಚಾರ ಜಗಜ್ಜಾಹೀರಾಗಿದೆ. ಪ್ರಮುಖವಾಗಿ ವಿಶ್ವಬ್ಯಾಂಕ್ ತನ್ನ ತಾಳಕ್ಕೆ ತಕ್ಕಂತೆ ಇನ್ನೂ ಕರ್ನಾಟಕ ಸರ್ಕಾರ ಕುಣಿಯಬೇಕೆಂದು ಬಯಸಿದೆ. ಮೈತ್ರಿಕೂಟದ ಸರ್ಕಾರಕ್ಕೂ ಅದಕ್ಕೆ ವಿರೋಧ ಅಷ್ಟಾಗಿ ಇಲ್ಲ. ಬದಲಾಗಿ ಅದೇ ನೀತಿ ಮುಂದುವರಿಸುತ್ತಿದೆ. ದೇಶ ಪರಭಾರೆ ಮಾಡುವುದರ ವಿರುದ್ಧ ಜನ ಪ್ರತಿರೋಧಿಸಬೇಕಿದೆ. ○

ಮುಷ್ಕರದತ್ತ ಮೈಕೊ ಕಾರ್ಮಿಕರು.....

ಪುಟ 5 ರಿಂದ

ನಿರ್ದೇಶಕರೇ ಹೊರಬಂದು ನೋಟೀಸ್ ಸ್ವೀಕರಿಸಬೇಕೆಂದು ಒತ್ತಾಯಿಸಿದರು. ಆದರೆ ಮುಖಂಡರೇ ಕಛೇರಿಗೆ ಬಂದು ಮನವಿ ಕೊಡಬೇಕೆಂಬುದು ಆಡಳಿತ ಮಂಡಳಿಯ ಧೋರಣೆ. ಕೊನೆಗೆ ಕಾರ್ಮಿಕರು ಕುಳಿತ ಸ್ಥಳ ಹಾಗೂ ಆಡಳಿತ ಮಂಡಳಿ ಕಛೇರಿ ನಡುವೆ ರಾಷ್ಟ್ರ ಧ್ವಜ ಸ್ಥಂಭದ ಬಳಿಗೆ ನಿರ್ದೇಶಕರೂ ಮತ್ತು ಕಾರ್ಮಿಕ ಮುಖಂಡರೂ ಬರುವುದೆಂಬ ಮಧ್ಯಂತರ ದಾರಿಯನ್ನು ಸೂಚಿಸಲಾಯಿತು. ಇಂಥ ಸನ್ನಿವೇಶವನ್ನು ನಿವಾರಿಸಲು ಆಡಳಿತ ಮಂಡಳಿ ಕಂಡುಕೊಂಡ ತಂತ್ರ ಏನೆಂದರೆ ದಿಢೀರನೆ ರಾಷ್ಟ್ರಧ್ವಜವನ್ನೇ ಇಳಿಸಿ - ಮಡಚಿ ಇಡುವುದು.

ಮದ್ಯಾಹ್ನ 3.15ಕ್ಕೆ ಅಕಾಲಿಕವಾಗಿ ರಾಷ್ಟ್ರಧ್ವಜ ಇಳಿಸಿ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿರುವುದನ್ನು ಖಂಡಿಸಿ ಕಾರ್ಮಿಕರು ಕಾರ್ಖಾನೆ ಮುಂಭಾಗ ಹೊಸೂರು ರಸ್ತೆಯಲ್ಲಿ ರಸ್ತೆ ತಡೆ ನಡೆಸಿದರು. ನಂತರ ರಾಷ್ಟ್ರಧ್ವಜ ಹಾರಿಸಲಾಯಿತು. ಮತ್ತು ಕಾರ್ಮಿಕ ಮುಖಂಡರು ತೆರಳಿ ಮುಷ್ಕರದ ನೋಟೀಸ್ ನೀಡಿದರು. ಕಾರ್ಮಿಕರ ಮನಸ್ಸು- ಏನೇ ಆಗಲಿ ತಮ್ಮ ನ್ಯಾಯಬದ್ಧವಾದ ಪಾಲು ಪಡೆಯುವುದರ ಬಗ್ಗೆ ದೃಢವಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ಬಿದ್ದರೆ ಮುಷ್ಕರ ನಡೆಸುವ ಬಗ್ಗೆಯೂ ಅವರು ಹುಮ್ಮಸ್ಸಿನಲ್ಲಿದ್ದಾರೆ.


ನೌಕರ ಸಂಬಂಧಿ ವೆಚ್ಚದ (ಇಆರ್‌ಇ)ದ ನಿಜವಾದ ಮುಖ

ಕಂಪನಿಯ ಒಟ್ಟು ವಹಿವಾಟಿನಲ್ಲಿ (23,279 ಕೋಟಿ) ನೌಕರ ಸಂಬಂಧಿ ವೆಚ್ಚ (Employment Related Exp.) ಈಗ ಪ್ರಸ್ತುತ ಶೇ.14.52 ಇದೆ ಎಂದು ಅಂಕಿಸಂಖ್ಯೆಗಳು ತೋರಿಸುತ್ತಿವೆ. ಇಲ್ಲಿಯೂ ಆಡಳಿತ ವರ್ಗದ ಗುಣವೇ ಎದ್ದು ಕಾಣುತ್ತದೆ. ಕಂಪನಿಯಲ್ಲಿ ಒಟ್ಟಾರೆ ಸುಮಾರು 6000 ಕಾರ್ಮಿಕರಿದ್ದಾರೆ. ಆದರೆ ಆಡಳಿತ ಮಂಡಳಿ ನೌಕರರಿರುವುದು ಸುಮಾರು 1500. ಅಂದರೆ ಕಾರ್ಮಿಕರ ಸಂಖ್ಯೆಯ ಕಾಲು ಭಾಗ. ಈ ಕಾಲು ಭಾಗದ ಆಡಳಿತ ಮಂಡಳಿ ನೌಕರರು ನೌಕರ ಸಂಬಂಧಿ ವೆಚ್ಚ(ಇಆರ್‌ಇ)ದಲ್ಲಿ ಪಡೆಯುವುದು ಎಷ್ಟು ಗೊತ್ತೇ?

ಕಾರ್ಮಿಕರು ಪಡೆಯುವುದರ ಸುಮಾರು 10ಪಟ್ಟು ಹೆಚ್ಚು ಮೊತ್ತ. ಮೈಮುರಿದು ದುಡಿಯುವ ಬಹುಸಂಖ್ಯೆಯ ಕಾರ್ಮಿಕರಿಗೆ ಶೇ.14.52 ಇಆರ್‌ಇಯಲ್ಲಿ ಸಿಗುವುದು ಶೇ.6ರಿಂದ 7 ಮೊತ್ತ ಮಾತ್ರ. ಉತ್ಪಾದನಾ ವೆಚ್ಚ ಕಡಿತದ ಬಗ್ಗೆ ಕಂಪನಿ ಬಹಳ ಮಾತನಾಡುತ್ತಿದ್ದರೂ ಸಹ ಆಡಳಿತ ಮಂಡಳಿ ನೌಕರರ ವೇತನ -ಸೌಲಭ್ಯಗಳಲ್ಲಿ ಯಾವುದೇ ಕಡಿತ ಸೂಚಿಸುತ್ತಿಲ್ಲ. ಕಡಿತ ಬಡಿತ ಏನಿದ್ದರೂ ಕಾರ್ಮಿಕರಿಗೆ ಮೀಸಲು.

ಕಾರ್ಖಾನೆಯ ಬೇರೆ ಬೇರೆ ಘಟಕಗಳಲ್ಲಿ ಬೇರೆ ಬೇರೆ ಸಂಘಟನೆಗಳ ಕಡೆಗೆ ಒಲವುಳ್ಳ ನಾಯಕತ್ವ ವಿದ್ದರೂ ಅವರು ಸಮನ್ವಯ ಸಮಿತಿಯ ಅಡಿಯಲ್ಲಿ ಒಂದುಗೂಡಿ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಒಟ್ಟಾರೆ ಈ ಸಂಬಂಧದ ಚರ್ಚೆಗಳಲ್ಲಿ ಹಾಗೂ ಆಡಳಿತ ಮಂಡಳಿಯ ಜೊತೆಗಿನ ಚರ್ಚೆಗಳಲ್ಲಿ ಸಮನ್ವಯ ಸಮಿತಿ ಅಧ್ಯಕ್ಷರಾದ ಕಾಂ.ವಿ.ಜೆ.ಕೆ ನಾಯರ್ ಅವರಲ್ಲದೆ ಬೆಂಗಳೂರು ಘಟಕದ ಪ್ರಧಾನ ಕಾರ್ಯದರ್ಶಿ ಶಿವಶಂಕರ್, ನಾಗನಾಥಪುರ ಘಟಕದ ಮುಕುಂದ, ನಾಸಿಕ್ ಘಟಕದ ಪ್ರಧಾನ ಕಾರ್ಯದರ್ಶಿ ದಗಡೂ ಪಾಟೀಲ್, ಜೈಪುರ ಘಟಕದ ಪರವಾಗಿ ಸುನಿಲ್ ಮಲಸುರೆಯುವರು ಪಾಲ್ಗೊಂಡು ನಾಯಕತ್ವ ನೀಡುತ್ತಿದ್ದಾರೆ.

ಕಾಮಧೇನುಗಳ ಕೆಚ್ಚಲು ಕುಯ್ಯುವವರು ಬೇಡ



ಕುರುಡು ಕಾಂಚಾಣ

ಜಿ.ಎಸ್.ಮಣಿ

ಸಾರ್ವಜನಿಕ ಉದ್ದಿಮೆಗಳು ಬೂರ್ಜ್ವ ರಾಜಕಾರಣಿಗಳ ಗೋಮಾಳವಾಗಿಯೇ ಇರುವುದು ಎಲ್ಲರಿಗೂ ಗೊತ್ತು. ಬಿಜೆಪಿಯ ಅಂದಿನ ಮಂತ್ರಿ ಅನಂತಕುಮಾರರ ಹಲವು ಖರ್ಚುಗಳನ್ನು ಹುಡ್ಕೋ ವಹಿಸಿಕೊಂಡಿದ್ದು ಮತ್ತು ಹಲವು ಇಂತಹ ಉದಾಹರಣೆಗಳಿವೆ. ಈ ಮಂತ್ರಿ ಮಹಾಶಯರುಗಳು ಈ ಉದ್ದಿಮೆಗಳ ನಿರ್ವಹಣಾ ಮಂಡಳಿಗಳಿಗೆ ತಮ್ಮ ಪಕ್ಷದ ರಾಜಕಾರಣಿಗಳನ್ನು ನೇಮಕ ಮಾಡಿ ಆ ಮೂಲಕ ತಮ್ಮ ಎಲ್ಲ ಅಗತ್ಯಗಳಿಗೆ ಈ ಉದ್ದಿಮೆಗಳನ್ನು ಬಳಸಿಕೊಳ್ಳುತ್ತಾರೆ.

ಈ ಸಾರಿ ಕೇಂದ್ರದ ಪೆಟ್ರೋಲಿಯಂ ಮಂತ್ರಿಗಳು ಸಾರ್ವಜನಿಕ ವಲಯದ ತೈಲ ಕಂಪನಿಗಳ ಮಂಡಳಿಗಳಿಗೆ ಕಾಂಗ್ರೆಸ್ ರಾಜಕಾರಣಿಗಳನ್ನು ನೇಮಕ ಮಾಡಲು ಪಟ್ಟಿಯನ್ನು ಸಿದ್ಧ ಮಾಡಿಕೊಂಡಿದ್ದರು. ಆದರೆ ಸ್ಕೋಪ್(Scope) ಅಂದರೆ ಸಾರ್ವಜನಿಕ ಉದ್ದಿಮೆಗಳ ಸ್ಥಾಯಿ ಸಮಿತಿ ಈ ಮಂಡಳಿಗಳಿಗೆ ವೃತ್ತಿಪರರನ್ನು ನೇಮಕ ಮಾಡಿದರೆ ಅವುಗಳ ನಿರ್ವಹಣೆಯಲ್ಲಿ ನಿಜವಾದ ಮೌಲ್ಯವರ್ಧನೆ ಇರುತ್ತದೆ, ಆದ್ದರಿಂದ ವೃತ್ತಿಪರರನ್ನೇ ಈ ಮಂಡಳಿಗಳಿಗೆ ನೇಮಕ ಮಾಡಬೇಕು ಹೊರತು ರಾಜಕಾರಣಿಗಳನ್ನಲ್ಲ ಎಂದು ಖಂಡಿತವಾಗಿ ಹೇಳಿದೆ.

ಸ್ಕೋಪ್ ಇನ್ನೂ ಮುಂದುವರಿದು ರಾಜಕಾರಣಿಗಳಾಗಿರುವುದರಿಂದಲೇ ಈ ಮಂಡಳಿಗಳಿಗೆ ಅವರು ಅನರ್ಹರಾಗುವುದಿಲ್ಲ. ಆದರೆ ಅವರಲ್ಲಿ ಆ ವೃತ್ತಿ ಕೌಶಲ್ಯಗಳು ಇದ್ದಲ್ಲಿ ಮಾತ್ರ ಅವರು ಈ ಉದ್ದಿಮೆಗಳನ್ನು ಸಮರ್ಥವಾಗಿ ನಡೆಸಬಲ್ಲವರಾಗಿರುತ್ತಾರೆ ಎಂದಿದೆ.

ಕಾಂಗ್ರೆಸ್ ರಾಜಕಾರಣಿಗಳಿಗೆ ಇದು ಜೀರ್ಣವಾಗುತ್ತದೆಯೇ?

ಏಳುತ ಬೀಳುತ ತೂರಾಡುತ್ತಿರುವ ಶೇರು ಬೆಲೆ ಸೂಚ್ಯಂಕ

ಬಂಡವಾಳಶಾಹಿ ಅರ್ಥ ವ್ಯವಸ್ಥೆಯ ಮುಖ್ಯ ಲಕ್ಷಣ ಶೇರು ಬೆಲೆ ಸೂಚ್ಯಂಕ. ಕಂಪನಿಗಳ ನಿಜ ಸಾಮರ್ಥ್ಯಕ್ಕೆ ಸಂಬಂಧವಿಲ್ಲದೆಯೂ(ಯೇ) ಏರುತ್ತ ಬೀಳುತ್ತ ಇರುತ್ತದೆ ಈ ಸೂಚ್ಯಂಕ. ಆರ್ಥಿಕ ಹೇಗಿದೆ ಎಂಬುದಕ್ಕೆ ಈ ಸೂಚ್ಯಂಕವನ್ನೇ ಬೂರ್ಜ್ವ ಅರ್ಥಶಾಸ್ತ್ರಜ್ಞರು ಅಳತೆಗೋಲನ್ನಾಗಿ ಇಟ್ಟುಕೊಂಡಿರುತ್ತಾರೆ.

ಮುಂಬೈ ಶೇರು ಬೆಲೆ ಸೂಚ್ಯಂಕ ದೇಶದಲ್ಲೇ ಮುಖ್ಯವಾದದ್ದು. ಈ ಸೂಚ್ಯಂಕ ಈಗಾಗಲೇ 8400ನ್ನು ಮುಟ್ಟಿಯಾಗಿದೆ. 1993ರ ಶೇರು ಹಗರಣವನ್ನು ನೆನಪಿಗೆ ತರುವಂತಹ ಪರಿಸ್ಥಿತಿ ಇಂದು ಉಂಟಾಗಿದೆ. ಸೂಚ್ಯಂಕ ಆರು ಸಾವಿರವಿದ್ದಾಗ ಅದು ಎಂಟು ಸಾವಿರಕ್ಕೇರಿದಾಗ ನಾನು ಆತಂಕಗೊಳ್ಳಬಲ್ಲೆ ಎಂದ ಕೇಂದ್ರದ ಹಣಕಾಸು ಸಚಿವ ಪಿ.ಚಿದಂಬರಂ ಅದು ಎಂಟು ಸಾವಿರ ದಾಟಿದಾಗ ಆತಂಕಕ್ಕೇನೂ ಕಾರಣವಿಲ್ಲ ಎಂದರು. ಈಗ ಆತಂಕದ ಛಾಯೆ ಶೇರು ಮಾರುಕಟ್ಟೆಯಲ್ಲೆಲ್ಲ ಮೂಡುತ್ತಿರುವಂತಿದೆ. ಈಗಾಗಲೇ ಸೂಚ್ಯಂಕ ದಿಢೀರನೆ ಕುಸಿಯುತ್ತ ಮತ್ತೆ ಮೇಲೇಳುತ್ತ ಇದೆ. ಇದರ ಜೊತೆಗೇ ಕೆಲವು ದೊಡ್ಡ ವಹಿವಾಟುದಾರರು/ ದೊಡ್ಡ ಕಂಪನಿಗಳು ಒಳಗಿನಿಂದಲೇ ಗೋಲ್‌ಮಾಲ್ ಮಾಡುತ್ತಿರುವ ಮಾತುಗಳೂ ಕೇಳಿಬರುತ್ತಿವೆ. ಈ ಏರುಪೇರಿನ ಬಗೆಗೆ ವಿಚಾರಣೆ ಆಗಬೇಕು ಎಂಬ ಮಾತೂ ಬರುತ್ತಿದೆ.

ಬಂಡವಾಳಶಾಹಿ ಆರ್ಥಿಕದ ಆರೋಗ್ಯದ ಸೂಚಿ ಇದಾದರೆ ಅದು ಎಷ್ಟು ಸೂಕ್ಷ್ಮ ಮತ್ತು ಚಂಚಲ ಎಂಬುದು ಇದರಿಂದಲೇ ಗೊತ್ತಾಗುತ್ತದಲ್ಲವೇ ?

ನಿರುದ್ಯೋಗ - ಅರೆ ಉದ್ಯೋಗಗಳ ವಿರುದ್ಧ ಚಳುವಳಿಯತ್ತ ಯುವಜನತೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.), ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಗಳು ಇದೇ ಅಕ್ಟೋಬರ್ 3 ರಂದು ಬೆಂಗಳೂರಿನಲ್ಲಿ ನಿರುದ್ಯೋಗ, ಅರೆ ಉದ್ಯೋಗ ಸಮಸ್ಯೆಗಳ ಬಹುಮುಖಿ ಆಯಾಮಗಳ ಬಗ್ಗೆ ಈ ಸಂಬಂಧ ಯುವಜನರನ್ನು ಸಂಘಟಿಸಿ ಚಳುವಳಿ ತೀವ್ರಗೊಳಿಸುವುದಕ್ಕೆ ಪೂರಕವಾಗಿ ರಾಜ್ಯ ಮಟ್ಟದ ಕಾರ್ಯಾಗಾರವೊಂದನ್ನು ಸಂಘಟಿಸಿದ್ದವು. ರಾಜ್ಯದ ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿದ 132 ವಿದ್ಯಾರ್ಥಿ ಯುವಜನರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರ

ಬೆಂಗಳೂರಿನ ಗಾಂಧಿನಗರದಲ್ಲಿರುವ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಕಾರ್ಯಾಲಯದಲ್ಲಿ ನಡೆದ ಕಾರ್ಯಾಗಾರವನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಶಾಸಕರೂ ಆದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು, ಉದ್ಘಾಟಿಸಿದರು.

ನಮ್ಮ ಸಮಾಜದಲ್ಲಿ ಮಾನವ ಸಂಪನ್ಮೂಲದ ನಿರುಪಯೋಗ ಮತ್ತು ದುರುಪಯೋಗ ಎರಡೂ ಇದೆ. ಅದು ಸದುಪಯೋಗ ಮಾತ್ರ ಆಗುತ್ತಿಲ್ಲ. ರಾಷ್ಟ್ರದಲ್ಲಿ ಆಳುವ ಸರ್ಕಾರಗಳ ಹೊಣೆಗೇಡಿತನಗಳಿಂದಾಗಿ ನಮ್ಮ ಕೃಷಿ ಉತ್ಪಾದನೆಯ ಬೆಳವಣಿಗೆಯ ವೇಗ ಕುಂಠಿತಗೊಂಡಿದೆ. ಹರಿದು ಬರುತ್ತಿರುವ ಜಾಗತಿಕ ಬಂಡವಾಳಕ್ಕೆ ಉದ್ಯೋಗ ಸೃಷ್ಟಿಯ ಉದ್ದೇಶವೇನಿಲ್ಲ. ಭಾರತದ ಅಗ್ಗದ ಕಾರ್ಮಿಕ ಶಕ್ತಿಯನ್ನು ಕೊಳ್ಳೆ ಹೊಡೆಯುವುದೇ ಅದರ ಉದ್ದೇಶ. ಈ ಬಂಡವಾಳ ಒಂದೆಡೆ ಕೂರುವುದಿಲ್ಲ. ಲಾಭವನ್ನು ಹುಡುಕುತ್ತಾ ದೇಶದಿಂದ ದೇಶಕ್ಕೆ ಸುತ್ತುತ್ತದೆ. ಇಂತಹ ಜಾಗತೀಕರಣ ನೀತಿಗಳಿಂದಾಗಿ ದೇಶದ ಕೃಷಿ ಕೈಗಾರಿಕೆಗಳು ಗಂಭೀರವಾಗಿ ಹಾನಿಗೊಳಗಾಗಿವೆ. ಹೀಗಾಗಿ ನಿರುದ್ಯೋಗದ ಪರಿಸ್ಥಿತಿ ಉಲ್ಬಣಗೊಂಡಿದೆ. ಯುವಜನತೆ ಇದರ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದರು. ಸರ್ಕಾರಿ ನೌಕರರ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಚ್ಚಿದಾನಂದ ಅವರು ಮಾತನಾಡಿ ಆಡಳಿತ ಸುಧಾರಣೆ ಹೆಸರಿನಲ್ಲಿ ಸರ್ಕಾರಿ ನೌಕರಿಗಳನ್ನು ಕಡಿತ ಮಾಡುವ ನೀತಿಯನ್ನು ಖಂಡಿಸಿದರು.

ಕಾರ್ಯಾಗಾರದಲ್ಲಿ 'ಸಂಘಟಿತ ಮತ್ತು ಅಸಂಘಟಿತ' ವಲಯದಲ್ಲಿ ಉದ್ಯೋಗದ ಪರಿಸ್ಥಿತಿ' ಕುರಿತು ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿಜೆಕೆ ನಾಯರ್ ವಿಚಾರ ಮಂಡಿಸಿದರು.

ನಿರುದ್ಯೋಗಿಗಳು ಎಂದರೆ ಅವರು ಉದ್ಯೋಗ ವಂಚಿಸಲ್ಪಟ್ಟ ಕಾರ್ಮಿಕರು. ದೇಶದ ಪ್ರತಿಯೊಬ್ಬ ಅರ್ಹ ಪ್ರಜೆಗೂ ಉದ್ಯೋಗ ಶಿಕ್ಷಣ ನೀಡುವುದು ಸಾಧ್ಯ. ನಿರುದ್ಯೋಗವೇ ಇಲ್ಲದ ದೇಶಗಳು ಜಗತ್ತಿನಲ್ಲಿವೆ. ಸಮಾಜವಾದಿ ಸಮಾಜದಲ್ಲಿ ಮಾತ್ರ ಇದು ಸಾಧ್ಯ. ಬಂಡವಾಳಶಾಹಿ ಸಮಾಜದಲ್ಲಿ ಕಾರ್ಮಿಕ ವರ್ಗದ ಸಾಮೂಹಿಕ ಚೌಕಾಸಿ ಶಕ್ತಿಯನ್ನು ಕಸಿಯುವ ಸಲುವಾಗಿ ಉದ್ದೇಶ ಪೂರ್ವಕವಾಗಿ ನಿರುದ್ಯೋಗಿಗಳ ದೊಡ್ಡ ದಂಡನ್ನು ಸೃಷ್ಟಿಸಿ ಕಾಪಾಡಲಾಗುತ್ತದೆ. ನಮ್ಮ ಸಮಾಜದ ಎಲ್ಲರಿಗೂ ಶಿಕ್ಷಣ, ಆರೋಗ್ಯ, ಕ್ರೀಡೆಯ ಅವಕಾಶಗಳು ಒದಗಿಸುವುದಾದರೆ ಅದರಿಂದಲೇ ಬಹುದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ನಿವಾರಣೆಯಾಗುತ್ತದೆಂದೂ ಅವರು ತಿಳಿಸಿದರು.

'ಇಂದಿನ ಸಮಾಜದ ರಚನೆ ಮತ್ತು ನಿರುದ್ಯೋಗ' ಎಂಬ ವಿಷಯದ ಬಗ್ಗೆ ಮಾತನಾಡಿದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ರವರು ದೇಶದ ಎಲ್ಲ ಸಮಸ್ಯೆಗಳಿಗೆ ಜನಸಂಖ್ಯಾ ಏರಿಕೆಯೇ ಕಾರಣ ಎಂಬ ಪ್ರಚಾರ ನಡೆಸಲಾಗುತ್ತಿದೆ. ಅದು ಬಂಡವಾಳಶಾಹಿ ಸಮಾಜದ ವೈಫಲ್ಯವನ್ನು ಮರೆಮಾಚುವ ತಂತ್ರ.

ನಿರುದ್ಯೋಗ ಹೆಚ್ಚಿದಷ್ಟು ಬಂಡವಾಳಗಾರರಿಗೆ ಲಾಭ. ಈಗೀಗ ಗುತ್ತಿಗೆ ಕೆಲಸ, ಪಾರ್ಟ್ ಟೈಂ ಕೆಲಸ, ಗೌರವ ಧನ ಎಂಬ ಹೆಸರಿನ ನಿಕೃಷ್ಟ ಅಗೌರವದ ಕೆಲಸಗಳು ಹೆಚ್ಚಾಗುತ್ತಿವೆ. ಉದ್ಯೋಗ ಭದ್ರತೆ ಎಂಬುದಿಲ್ಲ. ಇಂತಹ ಅಭದ್ರ ಉದ್ಯೋಗಿಗಳನ್ನು, ಅರೆ ಉದ್ಯೋಗಿಗಳನ್ನು, ನಿರುದ್ಯೋಗಿಗಳನ್ನು ಸಂಘಟಿಸಿ ಚಳುವಳಿ ತೀವ್ರಗೊಳಿಸಬೇಕೆಂದು ಅವರು ಕರೆ ನೀಡಿದರು.

ಡಿವೈಎಫ್ಐನ ರಾಜ್ಯ ಅಧ್ಯಕ್ಷರಾದ ಕೆ.ಎನ್. ಉಮೇಶರವರು ರಾಜ್ಯದಲ್ಲಿ ವಿವಿಧ ವಿಭಾಗಗಳಲ್ಲಿ ಅರೆ ಉದ್ಯೋಗ, ಉದ್ಯೋಗ ಅಭದ್ರತೆ, ನಿಕೃಷ್ಟ ಉದ್ಯೋಗದ ಪರಿಸ್ಥಿತಿ, ಉದ್ಯೋಗ ನಾಶ, ನಿರುದ್ಯೋಗ ಹೇಗಿದೆ ಎಂಬ ಬಗ್ಗೆ ವಿಚಾರ ಮಂಡಿಸಿದರು.



ಈ ವಿಚಾರಗಳ ಆಧಾರದಲ್ಲಿ ಪಾಲ್ಗೊಂಡ ಪ್ರತಿನಿಧಿಗಳು ಜಿಲ್ಲಾವಾರು ಗುಂಪುಚರ್ಚೆ ನಡೆಸಿ ತಮ್ಮ ಅನುಭವ -ಅನಿಸಿಕೆಗಳನ್ನು ಹಂಚಿಕೊಂಡರು. ಮುಂದಿನ ದಿನಗಳಲ್ಲಿ ಇದೇ ರೀತಿಯ ಜಿಲ್ಲಾವಾರು ಸಮಾವೇಶಗಳನ್ನು ನಡೆಸಲು ತೀರ್ಮಾನಿಸಲಾಯಿತು. 14 ಬೇಡಿಕೆಗಳ ಬೇಡಿಕೆಗಳನ್ನು ರೂಪಿಸಿದ ಸಮಾವೇಶ, ಜಿಲ್ಲಾ ಮಟ್ಟದ ನಿರ್ದಿಷ್ಟ ಸ್ಥಳೀಯ ಬೇಡಿಕೆಗಳನ್ನು ರೂಪಿಸಿ ಮುಂದಿನ ದಿನಗಳಲ್ಲಿ ಚಳುವಳಿ ನಡೆಸುವ ಅಭಿಪ್ರಾಯಕ್ಕೆ ಬಂದಿತು. ಕಾರ್ಯಾಗಾರದ ಆರಂಭದಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ವಿಷಯ ಪ್ರಸ್ತಾಪಿಸಿದರು. ಎಸ್ಎಫ್ಐ ರಾಜ್ಯ ಅಧ್ಯಕ್ಷ ಬಿ.ರಾಜಶೇಖರ ಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ 'ಐಕ್ಯರಂಗ' ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್‌ರವರು, ಯುವಜನರನ್ನು ಒಂದೆಡೆ ನಿರುದ್ಯೋಗದಂತಹ ಸಮಸ್ಯೆಗಳು ಕಾಡುತ್ತಿದ್ದರೆ ಕೋಮುವಾದಿ ಶಕ್ತಿಗಳು ಜಾತಿವಾದಿ ಶಕ್ತಿಗಳು ಇಂತಹ ಪ್ರಶ್ನೆಗಳನ್ನು ಕೈಬಿಟ್ಟು ಕೋಮು ಗಲಭೆ, ಜಾತಿಗಲಭೆ ಸೃಷ್ಟಿಸಲು ಯುವಜನರನ್ನು ದುರ್ಬಳಕೆ ಮಾಡುತ್ತಿವೆ. 'ಮಚ್ಚು, ಲಾಂಗು' ಸಂದೇಶದ ಸಿನಿಮಾಗಳು-ಮಾಧ್ಯಮಗಳು ಯುವಜನರನ್ನು ದಾರಿ ತಪ್ಪಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ಯುವಜನರು ಎಚ್ಚರಿಕೆ ವಹಿಸಬೇಕು. ಬದುಕಿನ ನೈಜ ಪ್ರಶ್ನೆಗಳ ಆಧಾರದಲ್ಲಿ ಚಳುವಳಿ ನಡೆಸಬೇಕೆಂದು ಕರೆ ನೀಡಿದರು. ಸಾಕ್ಷರತಾ ಪ್ರೇರಕರು, ಭೂಮಾಪಕರು, ಮುಂತಾದ ಸಂಘಟನೆಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.



ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ಎಚ್.ಆರ್.ನವೀನ್ ಕುಮಾರ್ ವಂದಿಸಿದರು.

ಐಟಿಸಿ ಕಾರ್ಖಾನೆ : ವಿವಿಧ ಸಮಿತಿಗಳ ಚುನಾವಣೆ ಸಿಐಟಿಯು ತಂಡದ ವಿಜಯ

28.9.2005ರಂದು ಐಟಿಸಿ ಕಾರ್ಖಾನೆಯ ಕ್ರೀಡಾಸಮಿತಿ, ಕನ್ನಡ ಮತ್ತು ತಮಿಳು ಲಲಿತ ಕಲಾ ಸಂಘ, ಕ್ಯಾಂಟೀನ್ ನಿರ್ವಹಣಾ ಸಮಿತಿ, ಕಾರ್ಮಿಕ ಕಲ್ಯಾಣ ಸಮಿತಿ, ಕ್ಲಾರ್ಕ್ ಇನ್‌ಸ್ಟಿಸ್ಯೂಟ್ ಇತ್ಯಾದಿ ವಿವಿಧ ಸಮಿತಿಗಳಿಗೆ ನಡೆದ ಚುನಾವಣೆಗಳಲ್ಲಿ ಸಿಐಟಿಯು ತಂಡ ದೊಡ್ಡ ಜಯ ಸಾಧಿಸಿದೆ. ಇದರಲ್ಲಿ ಕಾರ್ಮಿಕ ಕಲ್ಯಾಣ ಸಮಿತಿಗೆ ಬಹುತೇಕ ಕಾರ್ಮಿಕ ಸಂಘದ ಚುನಾವಣೆಗೆ ನಡೆದಷ್ಟೆ ಸ್ಫೂರ್ತಿಯೊಂದಿಗೆ ಚುನಾವಣೆ ನಡೆಯುತ್ತದೆ. ಒಟ್ಟಾರೆ 19 ಸ್ಥಾನಗಳಲ್ಲಿ ಸಿಐಟಿಯು ತಂಡ 17 ಸ್ಥಾನಗಳನ್ನು ಗಳಿಸಿಕೊಳ್ಳುವ ಮೂಲಕ ಗೆಲುವಿನಲ್ಲಿ ಸಿಂಹಪಾಲು ದಾಖಲಿಸಿದೆ.

ಈ ಚುನಾವಣೆಯಲ್ಲಿ ಎಐಟಿಯುಸಿ ಸಂಘದ ಹಾಲಿ ಪದಾಧಿಕಾರಿಯೊಬ್ಬರು ಕಾರ್ಮಿಕ ಕಲ್ಯಾಣ ಸಮಿತಿಗೆ ಸ್ಪರ್ಧಿಸಿದ್ದು ಅವರ ವಿರುದ್ಧ ಸಹ ಸಿಐಟಿಯು ತಂಡದ ಅಭ್ಯರ್ಥಿ ಜಯಗಳಿಸಿದ್ದಾರೆ.

ಚುನಾವಣೆಗಳು ಘೋಷಣೆಯಾದ ನಂತರ ಎಐಟಿಯುಸಿ ಸಂಘವು ಕಾರ್ಮಿಕರ ನಿವೃತ್ತಿ ವಯಸ್ಸನ್ನು 58ರಿಂದ 60 ವರ್ಷಕ್ಕೆ ಏರಿಸುವ ಸಂಬಂಧ ಕಾರ್ಖಾನೆ ಆಡಳಿತ ವರ್ಗಕ್ಕೆ ಬರೆದ ಪತ್ರದ ಪ್ರತಿಯನ್ನು ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಏನೆಲ್ಲಾ ರೀತಿ ಪ್ರಯತ್ನಿಸಿದರೂ ಕಾರ್ಮಿಕರು ಎಐಟಿಯುಸಿ ತಂಡವನ್ನು ಸೋಲಿಸಿದ್ದಾರೆ.

ಅಸಲಿಗೆ ಈ ಚುನಾವಣೆಗಳನ್ನು ನಡೆಸಲು ಆಡಳಿತ ವರ್ಗಕ್ಕೆ ಮನಸ್ಸೇ ಇರಲಿಲ್ಲ. ಎರಡು ವರ್ಷಕ್ಕೊಮ್ಮೆ ನಡೆಯಬೇಕಾದ ಈ ಚುನಾವಣೆ ನಡೆದದ್ದು 2001ರಲ್ಲಾದರು ವಿನಾಕಾರಣ ಆಡಳಿತ ಮಂಡಳಿ ಅದನ್ನು ಮುಂದೂಡುತ್ತಿತ್ತು. ಸಿಐಟಿಯು ತಂಡ ಚುನಾವಣೆಗಳಿಗಾಗಿ ಸಹಿ ಸಂಗ್ರಹ ಆಂದೋಲನ ನಡೆಸಿ ದೂರು ಕೊಟ್ಟ ಮೇಲೆ ಈ ಚುನಾವಣೆ ನಡೆದಿದೆ.

ಸೆ 29 ರ ಮುಷ್ಕರದ ಯಶಸ್ಸಿನ ಮಾರ್ದನಿ

ಾಯಚೂರು: ಸೆಪ್ಟೆಂಬರ್ 29, 2005ರ ಅಖಿಲ ಾರತ ಮುಷ್ಕರ ರಾಯಚೂರು ಜಿಲ್ಲೆಯಲ್ಲಿ ಭೂತ ಪೂರ್ವರೀತಿಯಲ್ಲಿ ಯಶಸ್ವಿಯಾಗಿದೆ. ಾಯಚೂರು ತಾಲೂಕಿನ ನಗರ-ಗ್ರಾಮಾಂತರ ದೇಶದಲ್ಲಿ ಸಂಚಾರ ವ್ಯಾಪಕವಾಗಿ ಸ್ಥಗಿತಗೊಂಡು ುಷ್ಕರದ ಬಿಸಿ ತಟ್ಟಿತ್ತು. ರಾಯಚೂರು ನಗರದಲ್ಲಿ ಳಿಗ್ಗೆ 6.00 ಗಂಟೆಯಿಂದ ಕೇಂದ್ರ ಬಸ್ ಲ್ದಾಣದಲ್ಲಿ ಸೇರಿದ್ದ ಸಿಪಿಐ(ಎಂ) ಕಾರ್ಯಕರ್ತರು ಂಚಾರ ವ್ಯವಸ್ಥೆಯನ್ನು ಸಂಪೂರ್ಣ ಗಿತಗೊಳಿಸಿದರು. ಜೀಪ್‌ನಲ್ಲಿ ನಗರದಲ್ಲಿ ಸಂಚರಿಸಿ ್ಯಾಪಾರಸ್ಥರಿಗೆ, ಉದ್ಯಮದಾರರಿಗೆ, ನಾಗರೀಕರಿಗೆ ುಷ್ಕರಕ್ಕೆ ಬೆಂಬಲಿಸುವಂತೆ ಮನವಿ ಮಾಡಿಕೊಂಡು ುಷ್ಕರ ಕುರಿತ ಪ್ರಚಾರ ಮಾಡಲಾಗಿತ್ತು. ಾಲಾ-ಕಾಲೇಜು, ಅಂಗಡಿ ಉದ್ಯಮಗಳು ಕೇಂದ್ರ-ಾಜ್ಯ ಸರಕಾರ ಕಛೇರಿಗಳು ಸಂಪೂರ್ಣ ಮುಚ್ಚಿ, ುಷ್ಕರಕ್ಕೆ ಬೆಂಬಲಿಸಿದರು. ಗ್ರಾಮಾಂತರ ದೇಶದಲ್ಲಿ ಕಲ್ಮಲ, ಸುಲ್ತಾನಪುರ ರಘುನಾಥ ಹಳ್ಳಿ ಾಗೂ ಚಂದ್ರ ಬಂಡ ಗ್ರಾಮಗಳಲ್ಲಿ ರಸ್ತೆ ರೋಖೋ ಡೆಸುವ ಮೂಲಕ ಮುಷ್ಕರ ಯಶಸ್ವಿಗೊಳಿಸಿದರು. ಗರದಲ್ಲಿ ನಡೆದ ಪ್ರತಿಭಟನೆಯಲ್ಲಿ ಅಂಗನವಾಡಿ, ಮಾಲಿ, ಗ್ರಾಮ ಪಂಚಾಯತ್, ಆಟೋ, ಕಟ್ಟಡ ಾರ್ಮಿಕರು ಮುಂತಾದ ಸಿಐಟಿಯು ಸೇರ್ಪಡೆಯ ಂಘಟನೆಯ ಸದಸ್ಯರು ಹಾಗೂ ಸಿಪಿಎಂ ಪಕ್ಷದ 00 ಕಾರ್ಯಕರ್ತರು ರ‍್ಯಾಲಿಯಲ್ಲಿ ಾಗವಹಿಸಿದ್ದರು. ಮೂರು ಕಡೆ ನಡೆದ ರಸ್ತೆ ೋಖೋದಲ್ಲಿ ರೈತ ಕೂಲಿಕಾರರ ಸಂಘದ 300 ನ ಭಾಗವಹಿಸಿ ಮುಷ್ಕರ ಯಶಸ್ವಿಗೆ ಶ್ರಮಿಸಿದರು.

ಬಂದ್‌ನಲ್ಲಿ ರಾಷ್ಟ್ರೀಕೃತ ಬ್ಯಾಂಕ್, ಗ್ರಾಮೀಣ ್ಯಾಂಕುಗಳು, ಕೇಂದ್ರ ಸರ್ಕಾರಿ ಸ್ವಾಮ್ಯದ ಅಂಚೆ ಲಾಖೆ ಸೇರಿದಂತೆ ಸಾರ್ವಜನಿಕ ಸಂಸ್ಥೆಗಳ ೌಕರರೂ ಮುಷ್ಕರದಲ್ಲಿ ಪಾಲ್ಗೊಂಡಿದ್ದು ಶೇಷವಾಗಿತ್ತು.

ಬಂದ್‌ನಿಂದಾಗಿ ನಗರದ ಎಲ್ಲಾ ಶಾಲಾ ಾಲೇಜುಗಳು ರದ್ದುಗೊಂಡಿದ್ದವು. ಯಾವುದೇ ಸ್ತೆಯಲ್ಲಿ ಸಂಚರಿಸಿದರೂ ಕೆಂಪುಧ್ವಜ ಹಿಡಿದ ಾರ್ಮಿಕ ಸಂಘಟನೆಗಳ ಕಾರ್ಯಕರ್ತರ ಪಡೆ ಸದಾ ಂಡು ಬರುತ್ತಿತ್ತು.

ಬಂದ್ ಅಂಗವಾಗಿ ನಗರದ ಎಲ್ಲಾ ಟ್ರೋಲ್ ಬಂಕ್, ಚಿತ್ರಮಂದಿಗಳು ಮುಚ್ಚಿದ್ದವು.

ಮಾನ್ವಿಯಲ್ಲಿ ಡಿ.ವೈ.ಎಫ್.ಐ. ರಾಜ್ಯ ಸರಕಾರಿ ೌಕರರ ಒಕ್ಕೂಟ, ಗ್ರಾಮ ಪಂಚಾಯತ್, ರೈತ ಾಗೂ ಅಂಗನವಾಡಿ ನೌಕರರು ಮುಷ್ಕರದಲ್ಲಿ ಾಲ್ಗೊಂಡು ಮಾನವಿ ಪಟ್ಟಣದ ವ್ಯಾಪಾರ-್ಯವಹಾರ- ಸಂಚಾರವನ್ನು ಸ್ಥಗಿತಗೊಳಿಸಿ ಮುಷ್ಕರ ಡೆಸಿದರು. ಮುಷ್ಕರದ ಬಿಸಿ ಸಮಾಜವಾದಿ ಪಕ್ಷದ ಲ್ಲಾ ಸಮಾವೇಶಕ್ಕೆ ತಟ್ಟಿತು. ಎಸ್.ಬಂಗಾರಪ್ಪ ವರು ಮುಷ್ಕರ ನಿರತ ಧರಣಿ ಸ್ಥಳಕ್ಕೆ ಬಂದು ಂಬಲ ಸೂಚಿಸಿ ಮಾತನಾಡಿದರು. ಸಂಜೆ 5ರ ರೆಗೆ ಮುಷ್ಕರ ನಡೆಸಲಾಯಿತು.

ಸಿಂಧನೂರು ತಾಲೂಕಿನಲ್ಲಿ ಸಿಐಟಿಯು, .ಐ.ಟಿ.ಯು.ಸಿ. ನಗರ ಪ್ರದೇಶದಲ್ಲಿ ಬೆಳಿಗ್ಗೆ 6 ಂಟೆಯಿಂದ ಮುಷ್ಕರ ಯಶಸ್ವಿಗೊಳಿಸಲು ಮಿಸಿದರು. ಸಂಪೂರ್ಣ ಮುಷ್ಕರ ಯಶಸ್ವಿ ಾಯಿತು. ಬೃಹತ್ ರ‍್ಯಾಲಿ ನಡೆಸಲಾಯಿತು. 000 ಜನ ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ವಳಗೇರಾ, ತುರ್ವಿಹಾಳ್, ಹಾಗೂ ುಮಲೂಟಿಯಲ್ಲಿ ಸಿಐಟಿಯು ಮೂಲಕ ರಸ್ತೆ ೋಕೋ ನಡೆಸಿ ಮುಷ್ಕರ ನಡೆಸಲಾಯಿತು.

ಲಿಂಗಸುಗೂರುನಲ್ಲಿ ಪ್ರಥಮ ಬಾರಿಗೆ ಮುಷ್ಕರ ಂಪೂರ್ಣವಾಗಿದ್ದು, ಕೆಲಸ ಕಾರ್ಯ ಸಂಚಾರ ್ಯಾಪಾರ ಸ್ಥಗಿತಗೊಳಿಸಿ ಯಶಸ್ವಿಗೊಳಿಸಲಾಯಿತು. ಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ುಷ್ಕರ ನಡೆಸಲಾಯಿತು. ಕಟ್ಟಡ ಕಾರ್ಮಿಕರು, ಂಗನವಾಡಿ, ಗ್ರಾಮ ಪಂಚಾಯತಿ ನೌಕರರು. ಿಪಿಐ(ಎಂ), ಸಿಐಟಿಯು., ಕಾರ್ಮಿಕರ ಸಂಘಗಳ ೇತೃತ್ವದಲ್ಲಿ ಲಿಂಗಸುಗೂರು ಬಂದ್ ಯಶಸ್ವಿಯಾಗಿ ನಡೆಯಿತು.

ಸಾವಿರಾರು ಕಾರ್ಮಿಕರು ಈಶ್ವರ ದೇವಸ್ಥಾನ ದಿಂದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ನೀತಿಯಿಂದ ಸರಕಾರವೇ ಕಾರ್ಮಿಕರನ್ನು ಬೀದಿಪಾಲು ಮಾಡಿದ್ದು, ಇದರಿಂದ ಅಸಂಘಟಿತ ಕಾರ್ಮಿಕರು ಭದ್ರತೆ ಇಲ್ಲದೆ ತೊಂದರೆ ಅನುಭವಿಸುವಂತಾಗಿದೆ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿ ತಹಶೀಲ್ದಾರ ಕಛೇರಿ ಎದುರು ಆಯೋಜಿಸಿದ್ದ ಕಾರ್ಮಿಕರ ಸಭೆಯಲ್ಲಿ ಹೇಳಿದರು.



ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ತಾಲೂಕ ಸಂಚಾಲಕ ಕೆ.ಶರಣಪ್ಪ ನಾಯಕ ಅವರು ಪ್ರಭಾರಿ ತಹಶೀಲ್ದಾರ ಅಮರೇಶಪ್ಪ ಅವರಿಗೆ 15 ಅಂಶಗಳ ಬೇಡಿಕೆ ಮನವಿ ಸಲ್ಲಿಸಿದರು. ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಲಕ್ಷ್ಮೀಹಿರೇನಾಗನೂರ, ಮಲ್ಲಮ್ಮ ಕೆಆರ್‌ಆರ್‌ಎಸ್ ಸಂಚಾಲಕ ರಾಮಚಂದ್ರ ಕುಲಕರ್ಣಿ, ಎಪಿಎಂಸಿ ಹಮಾಲರ ಸಂಘದ ಶಿವಪ್ಪ ಕೊಡ್ಲಿ, ಓಂಕಾರ ಕಟ್ಟಡ ನಿರ್ಮಾಣ ಕೆಲಸಗಾರರ ಸಂಘದ ಅಪ್ಪಣ್ಣ ಕರಡಕಲ್ಲ, ಗ್ರಾ.ಪಂ. ನೌಕರ ಸಂಘದ, ಸಿಐಟಿಯುನ ಶಿವಾನಂದ ಪಾಲ್ಗೊಂಡಿದ್ದರು.

ರಾಜ್ಯ ಸರಕಾರಿ ನೌಕರರ ಒಕ್ಕೂಟದ ಗೌರವ ಅಧ್ಯಕ್ಷ ಮಲ್ಲಿಕಾಜುನ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಸಹಾಯಕ ಆಯುಕ್ತರಿಗೆ ಪ್ರತ್ಯೇಕ ಮನವಿ ಸಲ್ಲಿಸಿದರು.

ಹೊಸದಾಗಿ ಸಂಘಟಿತರಾಗಿರುವ ಲಿಂಗಸಗೂರಿನ ಕಟ್ಟಡ ಕಾರ್ಮಿಕರ ಹೋರಾಟದ ಸ್ಫೂರ್ತಿ ಎಷ್ಟಿತ್ತೆಂದರೆ ಅವರು ಲಿಂಗಸಗೂರಿನಲ್ಲಿ ಚಳುವಳಿಯಲ್ಲಿ ಪಾಲ್ಗೊಂಡ ಸುಮಾರು ಒಂದು ಸಾವಿರ ಚಳುವಳಿಕಾರರಿಗೂ ಊಟದ ವ್ಯವಸ್ಥೆ ಮಾಡಿ ಸಂಭ್ರಮಿಸಿದರು.

ಸಿಂಧನೂರು ಬಂದ್ ಸಂಪೂರ್ಣ ಯಶಸ್ವಿಯಾಯಿತು.

ಬಂದ್ ಕರೆ ನೀಡಿದ್ದರಿಂದ ಪಟ್ಟಣದ ಎಲ್ಲಾ ಅಂಗಡಿ-ಮುಂಗ್ಗಟ್ಟುಗಳು ತಮ್ಮ ವಹಿವಾಟು ಸ್ಥಗಿತಗೊಳಿಸಿದ್ದವು. ಆಗೊಮ್ಮೆ ಈಗೊಮ್ಮೆ ಸಾರಿಗೆ ಸಂಸ್ಥೆಯ ಬಸ್‌ಗಳು ಮಾತ್ರ ಸಂಚರಿಸುತ್ತಿದ್ದವು. ಹೋಟೆಲ್‌ಗಳು ಬಂದ್ ಆಗಿದ್ದವು. ಪೆಟ್ರೋಲ್ ಬಂಕ್, ಸಿನಿಮಾ ಮಂದಿರ ಸೇರಿದಂತೆ ಎಲ್ಲಾ ವ್ಯವಹಾರ ಸಂಪೂರ್ಣ ಸ್ಥಗಿತವಾಗಿದ್ದವು.

ಬಂದ್ ಪ್ರತಿಭಟನೆ ನೇತೃತ್ವವನ್ನು ಅಂಗನವಾಡಿ ಕಾರ್ಯಕರ್ತೆಯರ ಫೆಡರೇಷನ್ ಅಧ್ಯಕ್ಷೆ ಡಿ.ಎಚ್.ಕಂಬಳಿ, ಸಿಐಟಿಯುನ ಶೇಕ್ಷಖಾದ್ರಿ, ಎಸ್.ಲೋಕೇಂದ್ರರಾವ್,. ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ಹನುಮೇಶ ಎಐಟಿಯುಸಿ ವೆಂಕನಗೌಡ ಗದ್ರಟಗಿ ಹಾಗೂ ಸಿಪಿಐ(ಎಂ) ಪಕ್ಷದ ಮುಖಂಡರು ವಹಿಸಿದ್ದರು.

ದೇವದುರ್ಗ : ದೇವದುರ್ಗ ತಾಲೂಕಿನಲ್ಲಿ ಜಾಲಹಳ್ಳಿ, ಚಿಂಚೋಡಿ ವಂದಲಿ ಕ್ರಾಸ್ ಮತ್ತು ದೇವದುರ್ಗ ನಗರದಲ್ಲಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿದೆ. ಚಿಂಚೋಡಿ ಅಡ್ಡರಸ್ತೆಯಲ್ಲಿ ಡಿವೈಎಫ್ಐ ಸಂಘಟನೆ ನೇತೃತ್ವದಲ್ಲಿ ಬೀಗದಳ್ಳಿ ಮತ್ತು ಚಿಂಚೋಡಿ ಗ್ರಾಮದ ಯುವಜನರಿಂದ 3 ತಾಸು ರಸ್ತೆ ತಡೆ ನಡೆಯಿತು. ಡಿ.ವೈ.ಎಫ್.ಐ. ಜಿಲ್ಲಾ ಸಮಿತಿ ಮುಖಂಡರಾದ ಕಾಂ. ಚಂದ್ರಶೇಖರ ಮಾತನಾಡಿದರು.

ಜಾಲಹಳ್ಳಿ ಅಂಬೇಡ್ಕರ ಚೌಕದಲ್ಲಿ ರಸ್ತೆ ತಡೆ 5 ತಾಸು ನಡೆಯಿತು. ಜಾಲಹಳ್ಳಿ ಸಂಪೂರ್ಣ ಬಂದ್ ಮಾಡಲಾಗಿತ್ತು. ಅಖಿಲ ಭಾರತ ಮುಷ್ಕರ ಕುರಿತು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ತಿಪ್ಪಯ್ಯ ನಾಯಕ. ರೈತ ಸಂಘದ ಮುಖಂಡರಾದ ಬಸವರಾಜ ತೆಕೂರು, ಬಿ.ಅಮರೇಶ, ವಾಸುದೇವಾ, ಡಿವೈಎಫ್ಐ ಮುಖಂಡರಾದ ಶೈಲೇಶ ಕುಮಾರ, ಅಂಜನೇಯ, ಮಲ್ಲಪ್ಪ ಭವಾನಿ ನೇತೃತ್ವ ವಹಿಸಿದ್ದರು. ಕಾಂ. ತಿಪ್ಪಯ್ಯ ನಾಯಕ ಮಾತನಾಡಿದರು.

ವಂದಲಿ ಕ್ರಾಸ್‌ನಲ್ಲಿ ಪಲಕನಮರಡಿ, ಮದರಕಲ್ ಮತ್ತು ವಂದಲಿ ಗ್ರಾಮದ ಪ್ರಾಂತ ರೈತ ಸಂಘದ ನೂರಾರು ರೈತರ ರಸ್ತೆ ತಡೆ, ಕಾಂ. ಚಾಂದಪಾಶ, ಹನುಮಗೌಡ, ಶರಣಬಸವ ನೇತೃತ್ವದಲ್ಲಿ ನಡೆಯಿತು. ರೈತರನ್ನು ಉದ್ದೇಶಿಸಿ ಕಾಂ. ಹನುಮಗೌಡ ಮಾತನಾಡಿದರು.

ದೇವದುರ್ಗ ನಗರದಲ್ಲಿ ಸಿಐಟಿಯು ಸಂಯೋಜಿತ ಸಂಘಟನೆಗಳಾದ ಗ್ರಾಮ ಪಂಚಾಯ್ತಿ ನೌಕರರು. ಅಂಗನವಾಡಿ ನೌಕರರು, ಬಿಸಿ ಊಟ ಅಡಿಗೆ ಸಿಬ್ಬಂದಿಯವರು ಹಾಗೂ ದೇವದುರ್ಗ ಆಟೋ ಚಾಲಕರು ಒಟ್ಟು ದೇವದುರ್ಗ ನಗರದಲ್ಲಿ ಒಂದು ಸಾವಿರ ಜನ ಅಸಂಘಟಿತ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾರ್ಮಿಕರನ್ನು ಉದ್ದೇಶಿಸಿ ಸಿಐಟಿಯು ಮುಖಂಡ ಹಾಗೂ ಸಿಪಿಐ(ಎಂ) ತಾಲೂಕ ಕಾರ್ಯದರ್ಶಿ ಗಿರಿಯಪ್ಪ ಮಾತನಾಡಿದರು ಮತ್ತು ಡಿವೈಎಫ್ಐ ಮುಖಂಡರಾದ ನರಸಣ್ಣ ನಾಯಕ, ಅಂಗನವಾಡಿ ನೌಕರ ಸಂಘದ ಕೆ.ರಂಗಮ್ಮ ಮಾತನಾಡಿದರು. ರಾಷ್ಟ್ರ ಮಟ್ಟದ ಬೇಡಿಕೆಯ ಹಾಗೂ ಸ್ಥಳೀಯ ಬೇಡಿಕೆಗಳ ಮನವಿ ಪತ್ರವನ್ನು ಪ್ರತ್ಯೇಕವಾಗಿ ತಹಶೀಲ್ದಾರರಿಗೆ ಸಲ್ಲಿಸಲಾಯಿತು.

ಪ್ರತಿಭಟನೆ ನೇತೃತ್ವವನ್ನು ಕಾಂ. ಜೆ.ಮಲ್ಲಿಕಾರ್ಜುನ, ಪದ್ಮಾ ಬೆಳೆಮ್ಮ ಅರಿಬಾಬಿ ಪಟೇಲ್, ವಿಜಯಲಕ್ಷ್ಮಿ ಚನ್ನಮ್ಮ ಎಸ್.ಗಿರಿಜಾ, ಶೇಖಮ್ಮ ವಹಿಸಿದ್ದರು.

ಶಿವಮೊಗ್ಗದಲ್ಲಿ ಅಭೂತಪೂರ್ವ ಪ್ರತಿಭಟನಾ ಮೆರವಣಿಗೆ

29-9-05ರ ಮುಷ್ಕರದ ಅಂಗವಾಗಿ ನೌಕರರು - ಕಾರ್ಮಿಕರು ಶಿವಮೊಗ್ಗ ನಗರ ಇತ್ತೀಚಿನ ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಭೂತಪೂರ್ವ ಮೆರವಣಿಗೆ ತೆಗೆದರು.

ಮುಷ್ಕರದ ಪೂರ್ವಭಾವಿಯಾಗಿ, ಅಖಿಲ ಭಾರತ ಮಟ್ಟದಲ್ಲಿ ನಡೆದ ಸಮಾವೇಶದ ಕರೆಯಂತೆ ದಿನಾಂಕ 28.08.2005ರಂದು ಸಾಮೂಹಿಕ ಸಂಘಟನೆಗಳ ವೇದಿಕೆಯ (ಎನ್.ಪಿ.ಎಂ.ಒ) ಆಶ್ರಯದಲ್ಲಿ ಜಿಲ್ಲಾ ಸಮಾವೇಶ ನಡೆದಿತ್ತು.

ಕೆ.ಪಿ.ಬಿ.ಇ.ಎಫ್‌ನ ಕಾಂ.ಕಾರಂತ, ಬ್ಯಾಂಕ್ ಎಂಪ್ಲಾಯೀಸ್‌ನ 'ಯುನೈಟೆಡ್ ಫ್ರಂಟ್' ಆಶ್ರಯದಲ್ಲಿ ಬ್ಯಾಂಕ್ ನೌಕರರ ಸಭೆ ನಡೆಸಿದ್ದರು. ಜೀವ ವಿಮಾ ನೌಕರರು ತಮ್ಮ ಕಛೇರಿಯ ಮುಂದೆ ಮೂರುದಿನ ಸತತ ಪ್ರತಿಭಟನಾ ಪ್ರದರ್ಶನ ನಡೆಸಿದ್ದರು. ಸಿಟು, ಐಟಕ್‌ನ ಪ್ರತಿನಿಧಿಗಳು ಭದ್ರಾವತಿಯಲ್ಲಿ ತಮ್ಮ ತಮ್ಮ ಘಟಕಗಳ ಸಭೆ ನಡೆಸಿ ಕಾರ್ಮಿಕರನ್ನು ಸಂಘಟಿಸಿದ್ದರು. ಒಕ್ಕೂಟದ ರಾಜ್ಯ ಅಧಕ್ಷರಾದ ಯು.ಡಿ.ನರಸಿಂಹಯ್ಯ ಸರ್ಕಾರಿ ನೌಕರರ ಸಭೆ ನಡೆಸಿದ್ದರು.

ಐಟಕ್, ಸಿಟು, ವಿಮಾನೌಕರರ ಸಂಘ, ಬಿ.ಎಸ್.ಎನ್.ಎಲ್ ನೌಕರರ ಸಂಘ, ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಷನ್, ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ಅಕ್ಷರ ದಾಸೋಹದ ನೌಕರರು ಸಾಯನ್ಸ್ ಮೈದಾನದಿಂದ ಮೆರವಣಿಗೆ ಹೊರಟರು. ಅಮಿರ್ ಅಹ್ಮದ್ ಸರ್ಕಲ್‌ನಲ್ಲಿ ಬ್ಯಾಂಕ್ ನೌಕರರು ಮೆರವಣಿಗೆಯನ್ನು ಕೂಡಿದರು. ಗೋಪಿ ಸರ್ಕಲ್ ನಲ್ಲಿ ಅಂಚೆ ನೌಕರರು ಕೂಡಿದರು. ಭಾರತೀಯ ಸ್ಟೇಟ್ ಬ್ಯಾಂಕ್‌ನ ಎದುರು ಪ್ರತಿಭಟನಾಕಾರರು ಸಭೆ ಸೇರಿದರು. ಬೇರೆ ಬೇರೆ ಸಂಘಟನೆಯ ಪ್ರತಿನಿಧಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ವಿದೇಶಿ ಶಿಕ್ಷಣ ಸರದಾರರೇ ತೊಲಗಿ - ಆಚೆತೊಲಗಿ ಗುಲ್ಬರ್ಗಾ ವಿ.ವಿ. ಯಶಸ್ವಿ ಬಂದ್‌ನ ಮಾರ್ದನಿ

ಕೇಂದ್ರದ ಯು.ಪಿ.ಎ. ಸರ್ಕಾರ ಹಿಂದಿನ ಎನ್.ಡಿ.ಎ. ಸರ್ಕಾರದ ತದ್ರೂಪಿಯಾಗಿ ದೇಶದಲ್ಲಿ ವಿದೇಶಿ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದಾಗಿರುವ ಕ್ರಮ ಹಾಗೂ ಯಥೇಚ್ಛವಾಗಿ ಖಾಸಗಿ ವಿ.ವಿ. ತೆರೆಯಲು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡುವಿಕೆ ವಿರುದ್ಧ ಬಜೆಟ್ಟಿನಲ್ಲಿ ಸತತ ಹಣ ಕಡಿತದಿಂದ ವಿವಿಗಳು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವುದು, ಪರಿಣಾಮ ಪೇಮೆಂಟ್ ಸೀಟು ಹೆಚ್ಚಿಸಿರುವುದನ್ನು ಖಂಡಿಸಿ ಎಸ್.ಎಫ್.ಐ. ನೇತೃತ್ವದಲ್ಲಿ ದೇಶವ್ಯಾಪ್ತಿ ಸಮರ ಸಾರಿರುವ ಸಂದರ್ಭದಲ್ಲಿ ಸಪ್ಟೆಂಬರ್ 29ರಂದು ಎಸ್.ಎಫ್.ಐ. ನೇತೃತ್ವದಲ್ಲಿ ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿದ್ದರ ಅಂಗವಾಗಿ ಗುಲ್ಬರ್ಗಾ ವಿ.ವಿ.ಬಂದ್ ಅತ್ಯಂತ ಯಶಸ್ವಿಯಾಗಿ ಜರುಗಿತು. ಆ ಸಂದರ್ಭದಲ್ಲಿ ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ವಿವಿಧ ಅಭಿಪ್ರಾಯಗಳು ಮೂಡಿ ಬಂದವು. ಒಬ್ಬರು ಈ ಹೋರಾಟ ಮತ್ತೊಂದು ಸ್ವಾತಂತ್ರ್ಯ ಹೋರಾಟದಂತೆ ಎಂದರೇ ಮತ್ತೊಬ್ಬ ವಿದ್ಯಾರ್ಥಿ ಅಮೇರಿಕಾ ಸಾಮ್ರಾಜ್ಯಶಾಹಿಗೆ ಭಾರತವನ್ನು ಒತ್ತೆ ಇಡುವ ನೀತಿಯ ವಿರುದ್ಧ ಇದು ಪ್ರತಿಭಟನೆ ಎಂದರು.

ಅಂದು ಬೆಳಿಗ್ಗೆ 10.30ಕ್ಕೆ ಎಸ್.ಎಫ್.ಐ. ಕಾರ್ಯಕರ್ತರು ವಿ.ವಿ. ಕ್ಯಾಂಪಸ್ ತಲುಪುತ್ತಿದ್ದಂತೆ ದೇಶದ ಸಾರ್ವಭೌಮತೆ ಹಾಳು ಮಾಡುವ, "ಫಾರಿನ್ ಯೂನಿವರ್‌ಸಿಟಿ ಮತ್ತು ಪ್ರೈವೇಟ್ ಯುನಿವರ್ಸಿಟಿ ಗೋ ಬ್ಯಾಕ್" ಎನ್ನುತ್ತಾ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ 'ದೇಶ ಮಾರಲು ಬಿಡುವುದಿಲ್ಲ' ಎನ್ನುತ್ತಾ ಮೆರವಣಿಗೆ ನಡೆಸಿದರು. ಒಟ್ಟಾರೆ ಈ ಹೋರಾಟ ಹೈದರಾಬಾದ್ ಕರ್ನಾಟಕದಲ್ಲಿ ವಿದ್ಯಾರ್ಥಿ ಚಳುವಳಿಗೆ ಹೊಸ ಸ್ಫೂರ್ತಿ ತಂದಿದೆ.



ದಸರಾ ಉತ್ಸವದ ಕಣ್ಣುಕೋರೈಸುವ ದೀಪಗಳ ಕೆಳಗೆ ಬಡ ಜನರ ನಿಟ್ಟುಸಿರಿನ ಕತ್ತಲು ಇದ್ದೇ ಇದೆ. ಜಗಮಗಿಸುವ ದಸರಾದಲ್ಲಿ ಖಾಸಗೀ ವ್ಯಾಪಾರದಾರರ ಪ್ರಾಯೋಜಕತ್ವದ ಕಮಟು ವಾಸನೆ ಇದೆ. ದುಬಾರಿ ದಸರಾ ಬಡ ಜನರಿಂದ ಇನ್ನೂ ಬಲುದೂರವೇ ಉಳಿದಿದೆ. ಈ ಬಗ್ಗೆ ಒಂದು ಒಳ ನೋಟ ಇಲ್ಲಿದೆ

ಮೈಸೂರು ದಸರಾ ಒಂದು ಕಣ್ಣೋಟ

ಎನ್.ವಿಜಯಕುಮಾರ್

ಮೈಸೂರು ದಸರಾ ಎಷ್ಟೊಂದು ಸುಂದರಾ.......ಎನ್ನುವ ಹಳೆಯ ಚಿತ್ರಗೀತೆಯನ್ನು ಮೆಲುಕು ಹಾಕದವರಿಲ್ಲ. ಇಡೀ ನಕ್ಷತ್ರರಾಶಿಯನ್ನು ಮೇಲೆಳೆದುಕೊಂಡಂತೆ ಜಗಮಗಿಸುವ..... ಮುಖ್ಯ ರಸ್ತೆಗಳ ಮೇಲೆ ದೀಪಗಳ ಛಾವಣಿ, ಪಾರಂಪರಿಕ ಕಟ್ಟಡಗಳಿಗೆ ಬಣ್ಣ ಬಳಿದು ಜೀವ ತುಂಬುವ ಪರಿ, ಜಗತ್ತಿನ ಎಲ್ಲ ರಸ್ತೆಗಳೂ ಮೈಸೂರು ಸೇರುತ್ತವೇನೋ ಎನ್ನುವ ಜನ ವೈವಿಧ್ಯ. ಎಲ್ಲೆಲ್ಲೂ ಸಂಭ್ರಮ. ಅರಮನೆಯ ಪ್ರಾಂಗಣದಲ್ಲಿ ಸಂಗೀತ, ನೃತ್ಯಗಳ ಸಮಾರೋಹ, ಜಗನ್ಮೋಹನ ಅರಮನೆಯಲ್ಲಿ ಕವಿಗೋಷ್ಠಿಗೆ ಕಿವಿಕೊಡುವ ಕಾವ್ಯಾಸಕ್ತರು, ಬೆರಗಾಗಿಸುವ ದೃಶ್ಯವೈಭವಕ್ಕೆ ಕಣ್ಣಗಲಿಸಿ ಬೆರಗು, ಸಾರ್ಥಕತೆ ಬಿಂಬಿಸುವ ಮುಖಗಳು ಎಲ್ಲವೂ ಇಲ್ಲಿವೆ.

ಮಹಾಭಾರತವೆನ್ನುವ ಕುಟುಂಬ ಕತೆಯ ಒಂದು ಅಧ್ಯಾಯ ಹಾಗೂ ಅಸುರರನ್ನು ಸಂಹರಿಸುವ ಶಕ್ತಿ ದೇವತೆಯ ಆರಾಧನೆಯನ್ನು ಹಿನ್ನೆಲೆಯಾಗಿಸಿ ಹತ್ತು ದಿನಗಳ ಪರ್ಯಂತ ಜರುಗುವ ದಸರಾ ಕಾಲಾಂತರದಲ್ಲಿ ಜನರನ್ನು ಮೆಚ್ಚಿಸಲು ಪ್ರಭುಗಳು, ಪ್ರಭುಗಳನ್ನು ಮೆಚ್ಚಿಸಲು ಜನರು ದರಬಾರಿನಲ್ಲಿ ಸೇರಿ, ಆಳುವ ಅರಸರ ಪರಮಾಧಿಕ್ಯವನ್ನು ಪುನರುಚ್ಚರಿಸುವ ಒಂದು ವಾರ್ಷಿಕ ಸಂಪ್ರದಾಯವಾಗಿ ಜಾರಿಗೆ ಬಂದಿತು. ಸಿಂಹಾಸನ, ಮೂಜೂರೆ, ಸಲಾಮು, ನಜರುಗಳೆಂಬ ಊಳಿಗಮಾನ್ಯ ಸಂಕೇತಗಳು ಈಗ ಇಲ್ಲವಾಗಿ ದಸರಾ ಒಂದು ಜನೋತ್ಸವ ಎಂದು ಪ್ರಚಾರ ಮಾಡಲಾಗುತ್ತದೆ. ಆದರೆ ಮೈಸೂರು ದಸರಾ ನಿಜ ಅರ್ಥದಲ್ಲಿ ಒಂದು ಜನೋತ್ಸವವಾಗಿ ಪರಿವರ್ತನೆ ಹೊಂದಿದೆಯೇ ಎಂದರೆ ಉತ್ತರ ಶೂನ್ಯ ಇಂದು ಪ್ರಭುಗಳಿಲ್ಲ ನಿಜ. ಪ್ರಜೆ ಹೆಸರಿಗಷ್ಟೇ ಪ್ರಭು. ದಸರಾ ಒಂದು ಸರ್ಕಾರಿ ಉತ್ಸವವಾಗಿ ರಾಜಕಾರಣಿಗಳ, ಸರ್ಕಾರದ ಆಡಳಿತ ಯಂತ್ರಾಂಗದ ಉಸ್ತುವಾರಿಯಲ್ಲಿ ಹೆಚ್ಚೆಚ್ಚು ಖಾಸಗೀಕರಣಗೊಳ್ಳುತ್ತ ಹೋಗುತ್ತಿದೆ. ಜನರಿಂದ ದೂರವಾಗುತ್ತಿದೆ. ದಸರಾದ ಹೊರತಾಗಿಯೂ ಮೈಸೂರು ಒಂದು ಪ್ರವಾಸೀ ಕೇಂದ್ರ. ವರ್ಷದ ಹನ್ನೆರಡು ತಿಂಗಳ ಪ್ರವಾಸಿಗರ ಭರಾಟೆ ಇಡೀ ನಗರದ ಆರ್ಥಿಕತೆ ಅಡಗಿರುವುದೇ ಇಲ್ಲಿ.

ಆರ್ಥಿಕತೆಯ ಸ್ವರೂಪ: ಪಂಚತಾರಾ ಹೊಟೆಲ್‌ನಿಂದ ಹಿಡಿದು ಬೀದಿ ಬದಿಯ ಕಡಲೆಕಾಯಿ ಮಾರುವವನವರೆಗು ಶ್ರೇಣೀಕರಣಗೊಳ್ಳುತ್ತಾ ಹೋಗುತ್ತದೆ. -ದಸರೆಗೆ ಖಾಸಗಿ ಬಂಡವಾಳ ಶೇಖರಣೆಗೆ ಸರ್ಕಾರ ಮುಂದಾದ್ಧಾಗಿನಿಂದ ಜನೋತ್ಸವ ಎನ್ನುವುದು ಮರೆಯಾಗಿ ಉದ್ದಿಮೆದಾರರ ಪ್ರಚಾರ ಆಸಕ್ತಿಯನ್ನು ತಣಿಸಲು ಅರಮನೆ, ಪಾರಂಪರಿಕ ಕಟ್ಟಡಗಳು, ವೃತ್ತಗಳು, ರಸ್ತೆಗಳು, ಉದ್ಯಾನಗಳು ಎಲ್ಲವನ್ನು ಬಿಟ್ಟುಕೊಡಲಾಗಿದೆ. ಸಾಂಪ್ರದಾಯಿಕ ಆಚರಣೆಗಳಲ್ಲಿಯೂ ಕರೆನ್ಸಿಯ ಕಮಟು ವಾಸನೆ ಹೊಡೆಯುವುದು ಈ ಕಾರಣಕ್ಕೆ. ಪ್ರಾಯೋಜಕರಿಗೆ ತಮ್ಮ ಬ್ರಾಂಡಿನ ಪ್ರಚಾರದ ಸಂಭ್ರಮವಾದರೆ, ರಾಜಕಾರಣಿಗಳಿಗೆ ಮಿಂಚುವ ಅವಕಾಶ.

ದಸರೆಯ ಉಪಸಮಿತಿಗಳಲ್ಲಿ ಸ್ಥಾನ ಪಡೆದುಕೊಳ್ಳುವುದರಿಂದ ಹಿಡಿದು ವಿಜಯದಶಮಿಯ ಮೆರವಣಿಗೆಯವರೆಗೂ ರಾಜಕೀಯ ಪಕ್ಷಗಳ ದೊಂಬರಾಟ ಸಾಗುತ್ತಿದೆ. ಕಳೆದ ಬಾರಿ ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರ ಉಪಸ್ಥಿತಿಯಲ್ಲಿ ಸರ್ಕಾರದ ಅನುದಾನ ಹರಿದುಬಂದಿತ್ತು. ಜೊತೆಗೆ ಖಾಸಗಿ ಉದ್ದಿಮೆಗಳ ಹಣವೂ ಸೇರಿ ವೈಭವದ ದಸರಾ ಆಚರಣೆಯಾಗಿತ್ತು. ಆದರೆ ಈ ಬಾರಿ 4 ಕೋಟಿ ಅನುದಾನ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ ಹಣವನ್ನೇನೋ ನೀಡಿತು. ಆದರೆ ನಗರಪಾಲಿಕೆಗೆ ಒಂದು ಪೈಸೆಯೂ ದೊರಕದೆ ಲೋಕೋಪಯೋಗಿ ಪ್ರವಾಸೋದ್ಯಮ ಹೀಗೆ ವಿವಿಧ ಬಾಬತ್ತುಗಳಿಗೆ ಹಂಚಿಕೆಯಾಯಿತು. 4 ಕೋಟಿಯಲ್ಲಿ ಒಂದು ಸಣ್ಣ ಭಾಗ ಮಾತ್ರ ದಸರಾಕ್ಕೆ ಲಭ್ಯವಾಯಿತು. ಉಳಿದದ್ದು ಏನಾಯಿತೋ ದೇವರೇ ಬಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ದಸರೆಯ ಆಚರಣೆಗೆ ತೆರೆ ಬೀಳುವ ಹಿಂದಿನ ದಿನದವರೆಗೂ ನಗರಪಾಲಿಕೆಗೆ ಹಣ ಬರದೇ ಮೇಯರ್ ಭಾರತಿ ತಮ್ಮದೇ ಪಕ್ಷದ ಸರ್ಕಾರದ ವಿರುದ್ಧ ಧರಣಿ ಕೂಡುವ ಪ್ರಹಸನವೂ ಜರುಗಿತು. ಇದು ಜಿಲ್ಲೆಯ ಈಗಿನ ಉಸ್ತುವಾರಿ ಸಚಿವರು, ದಸರೆಯ ಎಲ್ಲ ಕಾರ್ಯಕ್ರಮಗಳಲ್ಲಿ ಮಿಂಚಿದ ಕಾರ್ಮಿಕ ಸಚಿವ ತನ್ವೀರ್‌ಸೇಟ್‌ರ ಇರುಸು ಮುರುಸಿಗೆ ಕಾರಣವಾಯಿತು. ದಸರೆಯ ಸಮಾರೋಪವಾಗಿ ಜರುಗಿದ ಪಂಜಿನ ಕವಾಯತಿನ ಸಂದರ್ಭದಲ್ಲಿ ಮಹಿಳಾ ಮೇಯರ್‌ಗೆ ವೇದಿಕೆಯ ಮೇಲೆ ಆಸನ ನಿರಾಕರಿಸಲಾಯಿತು. ಅವಮಾನಿತರಾದ ಮೇಯರ್ ಅಸಮಾಧಾನಿತ ರಾಗಿ ಸಮಾರಂಭದಲ್ಲಿ ಭಾಗವಹಿಸದೆ ಹೊರನಡೆದರು.

ಉಪಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು ಪದಚ್ಯುತಿಗೊಂಡು ಅಹಿಂದ ಸಮಾವೇಶಗಳನ್ನು ಸಂಘಟಿಸುವಲ್ಲಿ ನಿರತರಾಗಿರುವುದರಿಂದ ಸ್ಥಳೀಯ ಶಾಸಕರೆಂಬ ಆಹ್ವಾನವಿದ್ದರೂ ಅವರು ಭಾಗವಹಿಸಲಿಲ್ಲ. ಜಿಲ್ಲೆಯಲ್ಲಿ ಜನತಾದಳ ಒಡೆದ ಮನೆಯಾಗಿದ್ದು ಸಮ್ಮಿಶ್ರ ಸರ್ಕಾರದ ಭಾಗವಾಗಿಯೂ ಯಾವ ಕಾರ್ಯಕ್ರಮದಲ್ಲಿಯೂ ಆ ಪಕ್ಷದ ನಾಯಕರು ಕಂಡುಬರಲಿಲ್ಲ. ದಸರಾ ಸಂಪೂರ್ಣವಾಗಿ ಕಾಂಗ್ರೆಸ್‌ಮಯವಾಗಿತ್ತು.

ಮೈಸೂರು ದಸರಾಗೆ ಪ್ರವಾಸೋದ್ಯಮ ದೃಷ್ಟಿಯಿಂದ ಪ್ರಾಮುಖ್ಯತೆ ಇದ್ದರೂ ಜಿಲ್ಲೆಯವರೇ ಆದ ಪ್ರವಾಸೋದ್ಯಮ ಸಚಿವ ಡಿ.ಟಿ.ಜಯಕುಮಾರ್ ಉದ್ಘಾಟನಾ ಸಮಾರಂಭದ ಆಹ್ವಾನಪತ್ರಿಕೆಯಲ್ಲಿ ತಮ್ಮ ಹೆಸರಿಲ್ಲವೆಂದು ಮುನಿಸಿಕೊಂಡು ದೂರ ಉಳಿದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜನರಿಂದ ತಿರಸ್ಕರಿಸಲ್ಪಟ್ಟಿದ್ದ ಬಿ.ಜೆ.ಪಿ.ಗೆ ಏನಾದರೂ ಮಾಡಿ ಸುದ್ದಿಯಾಗಬೇಕೆಂಬ ದುರಾಸೆ, ದಸರಾ ಉತ್ಸವದ ಉದ್ಘಾಟನೆಗೆ ಆಹ್ವಾನಿಸಲಾಗಿದ್ದ ನಾಡಿನ ಖ್ಯಾತ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪರ ಪೂಜಾ ಸಂಸತಿಯನ್ನು ಒಪ್ಪದ ವೈಯಕ್ತಿಕ ಹೇಳಿಕೆಯನ್ನು ಸಂಘಪರಿವಾರದವರು ಯಥಾಪ್ರಕಾರ ತಮ್ಮ ಸನಾತನ ನೆಲೆಗಟ್ಟಿನಲ್ಲಿ ವಿಮರ್ಶಿಸಿ ಪ್ರತಿಭಟಿಸಿದರು, ಸುದ್ದಿಯಾದರು. ಬರಗೂರು ಬಂದರು ದೇವಸ್ಥಾನ ಪ್ರವೇಶಿಸಲಿಲ್ಲ, ಪೂಜೆ ಮಾಡಲಿಲ್ಲ. ಡಾ.ನರಸಿಂಹಯ್ಯನವರಿಗಿದ್ದ ದ್ವಂದ್ವಗಳು ಅವರನ್ನು ಕಾಡಲಿಲ್ಲ. ಸಂಹಾರ ಸಂಸತಿಯನ್ನು, ಆಯುಧಗಳನ್ನು ವಿರೋಧಿಸುವಂತೆ ಕರೆ ನೀಡಿದರು. ಅಲ್ಲಲ್ಲಿ ಪ್ರತಿಭಟನೆಯ ಕೀರಲು ದನಿಗಳು ಕೇಳಿದವಾದರೂ ಬಿಜೆಪಿ ಹಾಗೂ ಬಜರಂಗದಳಗಳು ಜನರನ್ನು ಕೆರಳಿಸುವಲ್ಲಿ ವಿಫಲವಾದವು. ಮೇಯರ್ ಭಾರತಿಯವರ ಅನುದಾನ ಪ್ರಹಸನ ನಡೆದಾಗ ನಗರ ಪಾಲಿಕೆಯ ಎಲ್ಲ ಬಿಜೆಪಿ ಸದಸ್ಯರು ಸಹ ಪಾತ್ರಧಾರಿಗಳಾಗಿದ್ದರು. ಪ್ರಜಾವಾಣಿ ದಿನ ಪತ್ರಿಕೆ ಇಡೀ ಘಟನೆಯನ್ನು ಒಂದು ಹಾಸ್ಯಪ್ರಸಂಗದಂತೆ ಬಿಂಬಿಸಿತು. ಇದೇ ದಸರಾ ಸಂದರ್ಭವನ್ನು ಬಳಸಿಕೊಂಡು ಒಬ್ಬ ಹಾಲಿ ಶಾಸಕರು ಹಾಗೂ ಮಾಜಿ ಶಾಸಕರು ಕುಡಿಯುವ ನೀರಿನ ಸಮಸ್ಯೆಯನ್ನು ಮುಂದೊಡ್ಡಿ ಪ್ರತಿಭಟನೆಗೆ ಯತ್ನಿಸಿದರು. ಸರ್ಕಾರಿ ವೆಚ್ಚ ಹಾಗೂ ಖಾಸಗಿ ಸಂಭ್ರಮದ ಜನೋತ್ಸವ(?) ಆಳುವ ಸಮ್ಮಿಶ್ರ ಸರ್ಕಾರದ ಪಕ್ಷಗಳ ವಿರೋಧ



ಪಕ್ಷಗಳ ರಾಜಕೀಯ ತೆವಲಿಗೆ ವೇದಿಕೆಯಾಯಿತು. ಜಂಬೂ ಸವಾರಿಯ ಮುನ್ನಾದಿನ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿಗಳಿಗೆ ಬಿಜೆಪಿ ಹಾಗೂ ಯುವಕಾಂಗ್ರೆಸ್‌ನ ಪ್ರತಿಭಟನೆ ಎದುರಿಸಬೇಕಾಯಿತು. ದಸರಾ ಸಂದರ್ಭದಲ್ಲಿ ಮಿಂಚುವ ಪೈಪೋಟಿ ನಡೆಸಿದ್ದ ಮರಿ ಪುಢಾರಿಗಳು ವಾಸುಗಳ ಕಿತ್ತಾಟದಲ್ಲೇ ಕಾಲ ಕಳೆದರು. ಈ ಬಾರಿಯ ಜಂಬೂ ಸವಾರಿಗೆ ಇಪ್ಪತ್ತು ಲಕ್ಷ ಜನ ಆಗಮಿಸಬಹುದೆಂದು ಭಾರೀ ಪ್ರಚಾರ ನೀಡಿದ್ದ ಜಿಲ್ಲಾ ಆಡಳಿತಕ್ಕೆ ಬಂದ ಮೂರು ಲಕ್ಷ ಜನರನ್ನು ನೋಡಿ ತಮ್ಮ ಊಹೆ ಎಲ್ಲಿ ತಪ್ಪಾಗಿರಬಹುದೆಂದು ಅಂದಾಜಿಸಲು ಸಾಧ್ಯವಾಗಿಲ್ಲ.

ಕೊನೆಯ ದಿನ ಜಂಬೂ ಸವಾರಿ ಹೊರಡುವ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಮಳೆ, ಬೆಳೆ ಚೆನ್ನಾಗಿ ಆಗಿದ್ದು ಜನ ಹರ್ಷ ಸಡಗರಗಳಿಂದ ಹಬ್ಬವನ್ನು ಆಚರಿಸುತ್ತಿದ್ದಾರೆ ಎಂದು ರೀಲು ಸುತ್ತಿದರು. ಉತ್ತರ ಕರ್ನಾಟಕದಲ್ಲಾದ, ಕಂಡು ಕೇಳರಿಯದ ಪ್ರವಾಹ, ನೆಲ ಕಳೆದುಕೊಂಡ ಸಾವಿರಾರು ಗ್ರಾಮಸ್ಥರು, ಅಸಮರ್ಪಕ ಪರಿಹಾರ ಕಾರ್ಯಗಳಿಂದ ನೊಂದಿರುವ ಸಂತ್ರಸ್ತರು ಅವರಿಗೆ ಆ ಕ್ಷಣಕ್ಕೆ ನೆನಪಾಗಲಿಲ್ಲ ಎನ್ನುವುದು ದುರಂತ.

ಈ ದಸರಾ ಬಡಜನರಿಂದ ದೂರ

ಮೈಸೂರು ದಸರೆಯ ಒಟ್ಟು ಆಚರಣೆಗಳು ರೂಪಿಸುವ ಕಾರ್ಯಕ್ರಮ ಕೇವಲ ಶ್ರೀಮಂತ ಹಾಗೂ ಮೇಲ್ ಮಧ್ಯಮ ವರ್ಗದ ಜನರ ಆಸಕ್ತಿ, ಮನರಂಜನೆಗಳನ್ನು ಆಧರಿಸಿ ರೂಪಿತವಾಗುತ್ತವೆ. ಬಡ ಬೋರೇಗೌಡ ಅರಮನೆಯ ದೀಪಾಲಂಕಾರ ನೋಡಿ ಆ ಕ್ಷಣಕ್ಕೆ ಸಂತೋಷಿಸಬಹುದೇ ಆಗಲಿ ಅದೇ ದೀಪಗಳ ಕೆಳಗಿನ ಕತ್ತಲು ತನ್ನ ಬದುಕು ಎನ್ನುವುದನ್ನು ಮರೆಯಲಾರ.

ವಸ್ತು ಪ್ರದರ್ಶನ ನೋಡಲು ತನ್ನ ಇಡೀ ಸಂಸಾರವನ್ನೇ ಕರೆ ತಂದಿದ್ದ ಮೈಸೂರು ಜಿಲ್ಲೆಯ ಯಾವದೋ ಹಳ್ಳಿಯ ರೈತ ಪ್ರವೇಶ ದರ ನೀಡಲಾಗದೇ ಆಸೆ ಕಂಗಳಿಂದ ನೋಡುತ್ತಿದ್ದ ತನ್ನ ಮಕ್ಕಳನ್ನು ಗದರಿಸಿ ವಾಪಸ್ ಹಳ್ಳಿಯ ಬಸ್ ಏರಿಸಿದ್ದನ್ನು ಈ ವರದಿಗಾರನೇ ನೋಡಿದ್ದಾನೆ. ಯುವದಸರಾ ಎನ್ನುವ ಕಾರ್ಯಕ್ರಮವಂತೂ ಬೇಜವಾಬ್ದಾರಿ ಯುವಕರ ಉಡಾಫೆ ಸಂಸತಿಯನ್ನು ಪ್ರತಿಬಿಂಬಿಸುವಂತಿತ್ತು. ಪಾಪ್ ಸಂಗೀತ, ನೃತ್ಯ, ವಾದ್ಯಗಳ ಅರ್ಭಟಕ್ಕೆ ಹುಚ್ಚೆದ್ದು ಕುಣಿಯುವ ಯುವ ಸಮೂಹ ದೇಶದ ಭವಿಷ್ಯದ ಕರೆಗಳಿಗೆ ಹೇಗೆ ಸ್ಪಂದಿಸೀತು ಎನ್ನುವುದೇ ಕಾಳಜಿ ಮಾಡುವ ವಿಷಯವಾಗಿದೆ.

ಮೈಸೂರಿನ ಔದ್ಯೋಗಿಕ ಪರಿಸ್ಥಿತಿ

ಮೈಸೂರಿನ ದಸರೆಯ ಸಂಭ್ರಮಗಳನ್ನು ವಿಮರ್ಶಿಸುತ್ತ ಅರಮನೆ ಒಂದು ಊಳಿಗಮಾನ್ಯ ಸಂಕೇತ, ಖಾಸಗಿ ಬಂಡವಾಳದ ಹೂಡಿಕೆ ಎಂದು ಗುರುತಿಸುತ್ತಿರುವಾಗಲೇ ರಾಜ್ಯದ ಎರಡನೇ ಪ್ರಮುಖ ನಗರವಾದ ಮೈಸೂರಿನ ಔದ್ಯೋಗಿಕ ಪರಿಸ್ಥಿತಿಯ ವಾಸ್ತವ ಚಿತ್ರಣವನ್ನು ನೀಡದೇ ಹೋದರೆ ದೀಪಾಲಂಕೃತ ನಗರದ ಹಿನ್ನೆಲೆಯಲ್ಲಿರುವ ಕತ್ತಲೆಯನ್ನು ನೋಡಲು ಸಾಧ್ಯವಾಗದು.

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಸುಮಾರು 15 ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಬಾಗಿಲೆಳೆದುಕೊಂಡಿವೆ. ಒಂದು ಅಂದಾಜಿನಂತೆ 20,000 ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಇನ್ನು ಚಿಕ್ಕ ಕೈಗಾರಿಕೆಗಳ ಕತೆಯೇನೂ ಭಿನ್ನವಾಗಿಲ್ಲ. ಮೇಟಹಳ್ಳಿ, ಹೂಟಗಳ್ಳಿ, ಬೆಳವಾಡಿ, ಯಾದವಗಿರಿ ಯಾವುದೇ ಕೈಗಾರಿಕಾ ಪ್ರದೇಶಗಳಲ್ಲಿ ಒಂದು ಸುತ್ತು ಹೊಡೆದರೆ ಲಂಟಾನಾ ಗಿಡಗಳ ಮರೆಯಲ್ಲಿ ಮುಚ್ಚಿ ಹೋಗಿರುವ ಕಾರ್ಖಾನೆಗಳು ಕಣ್ಣಿಗೆ ರಾಚುತ್ತವೆ. ಈ ಪ್ರದೇಶಗಳಲ್ಲಿ ವಾಸವಿರುವ ಜನ ಸೈರನ್ ಶಬ್ದಗಳನ್ನು ಕೇಳಿ ವರ್ಷಗಳೇ ಆದವು.

ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಹೊಸ ಕೈಗಾರಿಕೆಗಳು ಪ್ರಾರಂಭವಾಗಿವೆಯಾದರೂ ಶೋಷಣೆ, ದಬ್ಬಾಳಿಕೆಯ ತಂತ್ರದ ಮೂಲಕ, ಪೋಲೀಸ್ ಬಲವನ್ನು ಬಳಸಿಕೊಂಡು ಕಡಿಮೆ ಕೂಲಿ ನೀಡಿ ದುಡಿಸಿಕೊಳ್ಳುವ ಕೆಟ್ಟ ಪರಂಪರೆಯನ್ನು ಮಾಲೀಕರು ಪ್ರಾರಂಭಿಸಿದ್ದಾರೆ. ಬಹುತೇಕ ಭಾರಿ ಕೈಗಾರಿಕೆಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಸಾವಿರಾರು ಸಂಖ್ಯೆಯಲ್ಲಿ ನೇಮಿಸಿಕೊಳ್ಳಲಾಗಿದೆ. ದಸರೆಯ ಕಾರ್ಯಕ್ರಮಗಳನ್ನು ಲಕ್ಷಗಟ್ಟಲೆ ಹಣ ಚೆಲ್ಲಿ ಪ್ರಾಯೋಜಿಸುವ ಈ ಮಾಲೀಕರು ತಮ್ಮದೇ ಕಾರ್ಖಾನೆಯ ಕಾರ್ಮಿಕರ ಕೂಲಿಯ ಪ್ರಶ್ನೆ ಬಂದಾಗ ಹಿಂತೆಗೆಯುತ್ತಾರೆ.

ಈಗ ಹೇಳಿ ಮೈಸೂರು ದಸರಾ ಜನೋತ್ಸವವೋ-ಧನೋತ್ಸವವೋ?

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: [illegible] ಪ್ರಿಂಟರ್ಸ್, [illegible] ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH